ಮಡಿವ ಜನರ ಪ್ರಾಣಮಿತ್ರ

ಜನಶಕ್ತಿ

ಕನ್ನಡ ವಾರಪತ್ರಿಕೆ

Blog : janashakthi.wordpress.com e-mail : js_weekly@yahoo.com


ಸಂಪುಟ 6 ಸಂಚಿಕೆ 12
ಮಾರ್ಚ್ 18, 2012

ಪುಟ 16 ರೂ. 5/-



ಐದು ರಾಜ್ಯಗಳ ಚುನಾವಣೆ :

ಕಾಂಗ್ರೆಸ್ ನಟನೆಗೆ ಜನರ ತಿರಸ್ಕಾರ






ನ್ಯಾಯಾಲಯದಲ್ಲಿ ದಾಂಧಲೆ : ಯಾರು ಹೊಣೆ ?






ಅಡುಗೆ ಅನಿಲ : ಸರ್ಕಾರದ್ದೇ ವಂಚನೆ



ಶಾಶ್ವತ ನೀರಾವರಿ : ಪಶ್ಚಿಮ ಘಟ್ಟಗಳ ಮಳೆ ನೀರು ತಿರುವು ಯೋಜನೆ - ಏನದು?

ಲಿತ ಅಭಿವೃದ್ಧಿ ಯೋಜನೆ : ಳುವವರ ತೋರುಂಬ ಲಾಭ'

ಸಂಘಟನೆ, ಹೋರಾಟ, ಬಂಧನ, ಜೈಲುವಾಸ, ಭೂಗತಜೀವನ ಮತ್ತೆ ಹೋರಾಟಗಳ ಪರಂಪರೆಯಲ್ಲೇ 7 ದಶಕಗಳ ಧೀರ್ಘಕಾಲ ಕಮ್ಯುನಿಸ್ಟ್ ಚಳುವಳಿಯಲ್ಲಿ ಅವಿರತವಾಗಿ ದುಡಿದ ಹಿರಿಯ ಮುಖಂಡ ಕಾ|ಎಸ್.ಸವರಿದಾಸ್ ದಿ.04.03.2012ರಂದು ಬೆಳಿಗ್ಗೆ ಕೆಜಿಎಫ್ನ ಬೆಮೆಲ್ ಮೆಡಿಕಲ್ ಸೆಂಟರ್‌ನಲ್ಲಿ ನಿಧನರಾದರು. ಅವರಿಗೆ 93 ವರ್ಷ ವಯಸ್ಸಾಗಿತ್ತು. ಈ ಹಿರಿಯ ಸಂಗಾತಿ ಜೀವನ ಮತ್ತು ಹೋರಾಟದ ಕುರಿತ ಒಂದು ಸಂಕ್ಷಿಪ್ತ ಚಿತ್ರಣ ಇಲ್ಲಿದೆ.



ಹಿರಿಯ ಕಮ್ಯುನಿಸ್ಟ್ ಮುಖಂಡ, ಕಾರ್ಮಿಕ ನಾಯಕ ಕಾಮ್ರೆಡ್ ಎಸ್. ಸವರಿದಾಸ್ ಇನ್ನಿಲ್ಲ

ಅಚ್ಯುತ

ತಮ್ಮ 90ನೇ ವಯಸ್ಸಿನವರೆಗೂ ಓಡಾಡಿಕೊಂಡು ಸಂಘಟನೆ ಕಟ್ಟುತ್ತಾ ಮಾರ್ಗದರ್ಶನಗಳನ್ನು ನೀಡುತ್ತಾ ಇದ್ದ ಸಂಗಾತಿಯ ಚಟುವಟಿಕೆಗಳು ಕೊನೆಯ ಮೂರು ವರ್ಷಗಳಲ್ಲಿ ವಯಸ್ಸಿನ ಕಾರಣದಿಂದ ಸ್ಥಗಿತಗೊಂಡಿತ್ತು. ಆದರೆ ಅವರು ಕೊನೆಗಾಲದಲ್ಲೂ ಕಾರ್ಮಿಕ ಸಂಘಟನೆ, ಕಮ್ಯುನಿಸ್ಟ್ ಚಳುವಳಿಯ ಬೆಳವಣಿಗಾಗಿ ತುಡಿಯುತ್ತಿದ್ದರು.

ಜನನ-ಬಾಲ್ಯ

ತಮಿಳುನಾಡಿನ ನಾರ್ತ್ ಆರ್ಕಾಟ್ ಜಿಲ್ಲೆಯ ವೇಲೂರು ತಾಲ್ಲೂಕಿನ ವೇಪ್ಪಾಂಬಟ್ ಎಂಬ ಸಣ್ಣ ಹಳ್ಳಿಯಲ್ಲಿಯೊಂದರಲ್ಲಿ 1919 ನವೆಂಬರ್ 7ನೇ ತಾರೀಖಿನಂದು ಕಾ|ಸವರಿದಾಸ್ ಜನಿಸಿದರು. ಅವರ ತಂದೆ ಕೋಲಾರ ಚಿನ್ನದ ಗಣಿಯಲ್ಲಿ ಕ್ವಾಯರಿ ಕಾಂಟ್ರಾಕ್ಟ್ ಕಾರ್ಮಿಕರ ಮೇಸ್ತ್ರಿಯಾಗಿ ಕೆಲಸ ಮಾಡುತ್ತಿದ್ದ ಶ್ರೀ ತಂಬುಸ್ವಾಮಿ ಪ್ರಕಾಶಂ, ಸಂಪ್ರದಾಯಸ್ಥ ಕ್ಯಾಥೋಲಿಕ್ ಕ್ರಿಶ್ಚಿಯನ್ ಆಗಿದ್ದ ತಾಯಿ, ಅವರನ್ನು ಶಿಸ್ತಿನಿಂದ ಬೆಳೆಸಿದರು. ಚಿನ್ನದ ಗಣಿ ಪ್ರದೇಶದ ತಟ್ಟಿ ಮನೆಗಳಿದ್ದ 'ಡಿ' ಬ್ಲಾಕ್‌ನಲ್ಲಿ, ಅವರ ಬಾಲ್ಯ ಜೀವನ, ಚರ್ಚ್‌ನಲ್ಲಿ ಪ್ರಾರ್ಥನೆಯ ಸಮಯದಲ್ಲಿ ಬೆಲ್ಜಿಯವ್ ಪಾದ್ರಿಯವರಿಗೆ ಸಹಾಯಕ ಹುಡುಗನಾಗಿ(Altar boy) ಸಹಾಯ ಮಾಡುತ್ತಿದ್ದರು.


ಗಾಂಧಿ ಪ್ರಭಾವ

ಗಾಂಧೀಜಿಯವರು ಕೆಜಿಎಫ್‌ಗೆ ಬಂದಿದ್ದಾಗ ಚರ್ಚ್‌ನ ಭಾರತೀಯ ಪಾದ್ರಿಗಳೊಂದಿಗೆ ಬಹಿರಂಗ ಸಭೆಯಲ್ಲಿ ಭಾಗವಹಿಸಿದರು. ಸದಾ ತಲೆಯ ಮೇಲೆ ಖಾದಿ ಟೋಪಿ ಧರಿಸುತ್ತಿದ್ದ ಅವರನ್ನು ಕರೆದು ಬೆಲ್ಜಿಯನ್ ಪಾದ್ರಿ ಟೋಪಿಯೊಂದಿಗೆ ಚರ್ಚ್‌ಗೆ ಬರಬಾರದೆಂದಾಗ ಚರ್ಚ್‌ಗೆ ಬರುವುದನ್ನು ಬಿಡುವೆ ಆದರೆ ಟೋಪಿ ಬಿಡಲಾರೆನೆಂದು ವಿನಯವಾಗಿಯೇ ಪ್ರತಿಭಟಿಸಿದರು. ಈ ಘಟನೆಯ ನಂತರ ಮತ್ತೆಂದೂ ಪಾದ್ರಿ ಆ ಬಗ್ಗೆ ಪ್ರಸ್ತಾಪಿಸಲಿಲ್ಲವಂತೆ. ಪಂಡಿತ್ ನೆಹರೂ ಇಂಡಸ್ಟ್ರಿಯಲ್ ಕೋ-ಆಪರೇಟಿವ್ ಸೊಸೈಟಿಯನ್ನು ಸಂಘಟಿಸಿ ಅದರ ಅಧ್ಯಕ್ಷರಾದರು. ಕಾಂಗ್ರೆಸ್ ಕಾರ್ಯಕರ್ತನಾಗಿ ಸಣ್ಣ ವಯಸ್ಸಿನಲ್ಲೇ ಕೆಲಸ ಮಾಡುತ್ತಿದ್ದ ಅವರು 1943ರಲ್ಲಿ ಆಗಲೇ ಅಸ್ತಿತ್ವದಲ್ಲಿದ್ದ ಕಮ್ಯುನಿಸ್ಟ್ ಚಳವಳಿಗೆ ಆಕರ್ಷಿತರಾದರು.

ಕಮ್ಯುನಿಸ್ಟ್ ಪಕ್ಷಕ್ಕೆ ಸೇರಿದ್ದು

ಪಕ್ಷದ 1942ರಲ್ಲಿ ಭಾರತ್ ಗೋಲ್ಡ್‌ಮೈನ್ಸ್ ಹಾಸ್ಪಿಟಲ್‌ನಲ್ಲಿ ವಾರ್ಡ್ ಅಸಿಸ್ಟೆಂಟ್ ಆಗಿ ಉದ್ಯೋಗಕ್ಕೆ ಸೇರಿಕೊಂಡರು. ಕಾರ್ಮಿಕ ಸಂಘ ಮತ್ತು ಕಮ್ಯುನಿಸ್ಟ್ ಪಕ್ಷ ನಡೆಸುತ್ತಿದ್ದ ಬಹಿರಂಗ ಸಭೆಗಳಲ್ಲಿ ತಪ್ಪದೆ ಭಾಗವಹಿಸುತ್ತಿದ್ದರು. ಆ ಸಂದರ್ಭದಲ್ಲಿ ಕೆಜಿಎಫ್‌ನಲ್ಲಿ ಜನಪ್ರಿಯರಾಗಿದ್ದ ಕಾ|ವಾಸನ್ ಮತ್ತು ಕಾ|ಗೋವಿಂದನ್ ಮಾರ್ಗದರ್ಶನದಲ್ಲಿ ಯೂನಿಯನ್ ಚಟುವಟಿಕೆಗಳಲ್ಲಿ ತೊಡಗಿಸಿಕೊಂಡು ಹಾಸ್ಪಿಟಲ್ ಯೂನಿಯನ್‌ನ ಜಂಟೀ ಕಾರ್ಯದರ್ಶಿಯಾಗಿ ಆಯ್ಕೆಯಾದರು. 1943ರಲ್ಲಿ ವಾಸನ್ ಮತ್ತು ದೊರೈರಾಜ್ ಶಿಫಾರಸ್ಸಿನಲ್ಲಿ ಸಿಪಿಐ ಪಕ್ಷದ ಸದಸ್ಯರಾದರು. ಪಕ್ಷದ ಪತ್ರಿಕೆ ಜನಶಕ್ತಿ(ತಮಿಳು ಆವೃತ್ತಿ) ಮತ್ತು ಪಕ್ಷದ ಸಾಹಿತ್ಯಗಳನ್ನು ಮಾರುವ ಜವಾಬ್ದಾರಿಯನ್ನು ವಹಿಸಿಕೊಂಡರು.

1944ರಲ್ಲಿ ಕಾಂ|ಸವರಿದಾಸ್‌ರವರಿಗೆ ಮದುವೆಯಾಗಿ ಹೆಣ್ಣು ಮಗು ಜನಿಸಿತ್ತು. 1946ರಲ್ಲಿ 6 ಮಂದಿ ಸಂಗಾತಿಗಳು ಪೋಲೀಸರ ಗುಂಡಿಗೆ ಬಲಿಯಾದ ಸಂದರ್ಭದಲ್ಲಿ ಎಲ್ಲಾ ಮುಖಂಡರನ್ನು ಸುಳ್ಳು ಆಪಾದನೆಗಳನ್ನು ಹೊರಿಸಿ ಬಂಧಿಸಲಾಯಿತು. ಬಂಧನದಿಂದ ಹೊರಗುಳಿದ ಕಾ|ಸವರಿದಾಸ್‌ರವರು ಕೇಸ್ ನಡೆಸಲು ಪಕ್ಷಕ್ಕೆ ನಿಧಿ ಸಂಗ್ರಹ, ಜನಶಕ್ತಿ ಮತ್ತು ಪಕ್ಷದ ಸಾಹಿತ್ಯ ಮಾರಾಟ, ಕೋರ್ಟ್ ಕೇಸ್‌ಗಳಿಗೆ ತಮಿಳುನಾಡಿನ ಮಣಿಐಯ್ಯರ್ ರವರೊಂದಿಗೆ ಹೋಗುವುದು ಮುಂತಾದ ಹತ್ತು ಹಲವು ಜವಾಬ್ದಾರಿಗಳನ್ನು ಇತರ ಸಂಗಾತಿಗಳೊಂದಿಗೆ ವಹಿಸಿಕೊಂಡರು.



ಸಭೆಯಲ್ಲಿ ಮಾತನಾಡುತ್ತಿರುವ ಕಾಂ.ದಾಸ್, ಜೊತೆಯಲ್ಲಿ ಮಾಜಿ ಶಾಸಕ ಟಿ.ಎಸ್.ಮಣಿ(ಬಲದಿಂದ ಕೊನೆ) ಮತ್ತಿತರರು

ಜವಾಬ್ದಾರಿ ಸರ್ಕಾರಕ್ಕಾಗಿ ಹೋರಾಟದಲ್ಲಿ

ಜವಾಬ್ದಾರಿಯುತ ಸರಕಾರದ ರಚನೆಗಾಗಿ ಬಿಜಿಎಂಎಲ್ ಕಾರ್ಮಿಕರು ನಡೆಸಿದ ಚಾರಿತ್ರಿಕ ರಾಜಕೀಯ ಹೋರಾಟದಲ್ಲಿ ಪ್ರಮುಖ ಪಾತ್ರ ವಹಿಸಿದರು. ನಂತರ ಸರಕಾರ ರಚನೆಯಾಗಿ ಕೆ.ಸಿ.ರೆಡ್ಡಿಯವರು ಮುಖ್ಯಮಂತ್ರಿ ಯಾದ ಮೇಲೆ ಗಡಿಪಾರಾಗಿದ್ದ ವಾಸನ್, ಗೋವಿಂದನ್ ಮತ್ತಿತರ ಸಂಗಾತಿಗಳು ಕೆಜಿಎಫ್‌ಗೆ ಮರಳಿ ಬಂದರು.

ಕಾರ್ಮಿಕರ ನಡುವೆ, ಸಾರ್ವಜನಿಕರ ಮಧ್ಯೆ ಅತ್ಯಂತ ಜನಪ್ರಿಯರಾಗಿದ್ದ ಹಿರಿಯ ಮುಖಂಡರ ಮೇಲೆ ಶಿಸ್ತಿನ ಎಚ್ಚರಿಕೆಯ ಕ್ರಮ ತೆಗೆದುಕೊಂಡಾಗ ಪಕ್ಷದ ತೀರ್ಮಾನಗಳ ಜೊತೆಗೆ ಸವರಿದಾಸ್ ನಿಂತಿದ್ದರು.

ನಿಷೇಧ ಕಾಲದ ದಾಳಿ ಎದುರಿಸಿ....

1948 ರಲ್ಲಿ ನೆಹರೂ ಸರಕಾರ ದೇಶದಾದ್ಯಂತ ಕಮ್ಯುನಿಸ್ಟ್ ಪಕ್ಷದ ಮೇಲೆ ಧಾಳಿಯನ್ನು ಆರಂಭಿಸಿದಾಗ ಹಿರಿಯ ಮುಖಂಡರನ್ನು ಒಳಗೊಂಡು 72 ಮಂದಿ ಸಂಗಾತಿಗಳನ್ನು ದಸ್ತಗಿರಿ ಮಾಡಲಾಯಿತು. ಕಾ|ಸವರಿದಾಸ್ ಮತ್ತು ಕಾ|ಸೂಸೈನಾದನ್ ಭೂಗತರಾಗಿದ್ದು ಕೊಂಡು ಚಳವಳಿಗಳನ್ನು ಹುಟ್ಟುಹಾಕಿದರು. ಸಮರ್ಪಕವಾದ ರೇಷನ್ ನೀಡಬೇಕು, ಬಂಧಿತ ಮುಖಂಡರನ್ನು ಬಿಡುಗಡೆ ಮಾಡಬೇಕೆಂದು ಒತ್ತಾಯಿಸಿ ಕೆಜಿಎಫ್‌ನಿಂದ 3,000 ಮಂದಿಯ ಕಾಲ್ನಡಿಗೆ ಜಾಥಾವನ್ನು ಬೆಂಗಳೂರಿಗೆ ಹೊರಡಿಸಲಾಯಿತು. ಪೋಲೀಸರು ಮಾಲೂರಿನಲ್ಲಿ ಜಾಥಾವನ್ನು ತಡೆದು 500 ಜನರಿಗೆ ಅನುಮತಿ ನೀಡಿದರು. ಆದರೆ ಮಹಿಳೆಯರೂ ಒಳಗೊಂಡಂತೆ 1000 ಕ್ಕೂ ಹೆಚ್ಚು ಜನ ರೈಲಿನಲ್ಲಿ ಬೆಂಗಳೂರಿಗೆ ತೆರಳಿ ಮುಖ್ಯಮಂತ್ರಿಯವರಿಗೆ ಮನವಿ ಸಲ್ಲಿಸಿದರು. ಜಾಥಾ ಹಿಂದೆ ಬಂದಾಗ ಬಂಗಾರಪೇಟೆಯಲ್ಲಿ ಸವರಿದಾಸ್ ಮತ್ತು ಸೂಸೈನಾದನ್ ರವರನ್ನು ಬಂಧಿಸಿ ಕೋಲಾರ ಜೈಲಿಗಟ್ಟಿದರು.

ಲಾಠೀ ಏಟುಗಳು.... ಜೈಲು, ಗಡಿಪಾರು

ಪೋಲಿಸರ ಲಾಠಿ ಏಟುಗಳು ಧಾರಳವಾಗಿ ಬಿದ್ದವು. ಅಲ್ಲಿ ನರಸಿಂಹನ್ ಮೊದಲಾದ ಹಿರಿಯ ಮುಖಂಡರಿದ್ದರು. ಅಲ್ಲಿಂದ ಶಿವಮೊಗ್ಗ, ನಂತರ ಮೈಸೂರು ಜೈಲುಗಳಿಗೆ ಕಳುಹಿಸಲಾಯಿತು. ಜೈಲಿನೊಳಗೂ ಹೋರಾಟಗಳು ನಡೆದವು. ಸುಮಾರು 80 ಮಂದಿ ಸಂಗಾತಿಗಳನ್ನು ಬಿಡುಗಡೆ ಮಾಡಿ ಜೈಲಿನಿಂದ ಹೊರಗೆ ಬರುತ್ತಿರುವಾಗಲೇ ಮತ್ತೆ ಬಂಧಿಸಿ ಬೆಂಗಳೂರು ಸೆಂಟ್ರಲ್ ಜೈಲಿಗೆ ಅಟ್ಟಲಾಯಿತು. ಹೀಗೆ ಒಂದು ವರ್ಷ ಕಾಲ ಜೈಲಿನಲ್ಲಿದ್ದ ನಂತರ ಬಿಡುಗಡೆಗೊಳಿಸಿ ಅವರನ್ನು ಕೆಜಿಎಫ್‌ನಿಂದ ಗಡಿಪಾರು ಮಾಡಲಾಯಿತು. ಆಗ ಬೆಂಗಳೂರಿನ ಟ್ಯಾನರಿ ಕಾರ್ಮಿಕರ ಮಧ್ಯೆ ಕೆಲಸ ಮಾಡ ತೊಡಗಿದಾಗ ಕರಪತ್ರಗಳನ್ನು ಹಂಚುವ ಸಂದರ್ಭದಲ್ಲಿ ಮತ್ತೆ ಬಂಧಿಸಿ ಬೆಂಗಳೂರು ಸೆಂಟ್ರಲ್ ಜೈಲಿನಲ್ಲಿಡಲಾಯಿತು.

ಗಣಿ ಕಾರ್ಮಿಕರ ಮರು ನೇಮಕಕ್ಕಾಗಿ

ನಂತರ ಜೈಲಿನಿಂದ ಬಿಡುಗಡೆಯಾದ ಕೂಡಲೆ ಗಣಿ ಕಾರ್ಮಿಕರನ್ನು ಕೆಲಸದಿಂದ ವಜಾ ಮಾಡಲಾಯಿತು, ಸವರಿದಾಸ್‌ರವರೂ ಕೆಲಸಕ್ಕೆ ಸೇರಿದ ಎರಡೇ ವರ್ಷಗಳಲ್ಲಿ ಕೆಲಸ ಕಳೆದುಕೊಂಡರು. ನಂತರ 1954ರಲ್ಲಿ ವಜಾಗೊಂಡ ಕಾರ್ಮಿಕರನ್ನು ಮರು ನೇಮಕ ಮಾಡ ಬೇಕೆಂದು ಯೂನಿಯನ್ ಪ್ರಬಲವಾದ ಹೋರಾಟ ನಡೆಸಿತು. ಇದರ ಫಲವಾಗಿ ಕಾ|ಸವರಿದಾಸ್ ಒಬ್ಬರನ್ನು ಬಿಟ್ಟು ಉಳಿದೆಲ್ಲ ಕಾರ್ಮಿಕರೂ ಮರುನೇಮಕ ಗೊಂಡರು. ಕಾ|ಸವರಿದಾಸ್ ಪಕ್ಷದ ಪೂರ್ಣಕಾಲದ ಕಾರ್ಯಕರ್ತರಾಗಿ ಮುಂದುವರಿದರು.

'ಪೀಪಲ್ಸ್ ಕ್ಲೀನಿಕ್'

ರಾಜ್ಯದಿಂದಲೇ ಗಡಿಪಾರಾದ ಸಂದರ್ಭದಲ್ಲಿ ಸ್ವತ: ಹೋಮಿಯೋಪತಿ ಡಾಕ್ಟರಾಗಿದ್ದ ಸವರಿದಾಸ್ ಕರ್ನಾಟಕದ ಗಡಿಭಾಗದಲ್ಲಿ ಬೂದುಗೂರಿನಲ್ಲಿ "ಪೀಪಲ್ಸ್ ಕ್ಲಿನಿಕ್"ನ್ನು ಆರಂಭಿಸಿ ಜನಸೇವೆಯಲ್ಲಿ ತೊಡಗಿದ್ದರು.

ಪುಟ 10ಕ್ಕೆ....

ಶ್ರದ್ಧಾಂಜಲಿ ಸಭೆ

ಹಿರಿಯ ಕಾರ್ಮಿಕ ಮುಖಂಡ ಸವರಿದಾಸ್‌ರವರ ನಿಧನದ ವಿಷಯ ತಿಳಿಯುತ್ತಿದ್ದ ಕೋಲಾರದ ಸಿಪಿಐ(ಎಂ) ಕಛೇರಿಯಲ್ಲಿ ಸೇರಿದ್ದ ಮುಖಂಡರು ಪಕ್ಷದ ಧ್ವಜವನ್ನು ಅರ್ಧಕ್ಕೆ ಇಳಿಸಿ, ಶ್ರದ್ಧಾಂಜಲಿ ಸಭೆಯನ್ನು ನಡೆಸಲಾಯಿತು. ಈ ಸಂದರ್ಭದಲ್ಲಿ ಜಿಲ್ಲಾ ಕಾರ್ಯದರ್ಶಿ ಗಾಂಧಿನಗರ ನಾರಾಯಣಸ್ವಾಮಿ, ಮುಖಂಡರಾದ ವಿ.ಗೀತಾ, ಬಿ.ವಿ.ಸಂಪಂಗಿ, ವಿಜಯಕೃಷ್ಣ, ಎ.ವಿ.ರಮೇಶ್, ಅಂಬರೀಷ್ ಮತ್ತಿತರರು ಹಾಜರಿದ್ದು, ಭಾವಪೂರ್ಣ ಶ್ರದ್ಧಾಂಜಲಿಯನ್ನು ಅರ್ಪಿಸಿದರು.

ಸಂಪಾದಕೀಯ- ಈ ವೈಫಲ್ಯಗಳ ಹೊಣೆ ಯಾರದ್ದು?

ಮಾರ್ಚ್ 2 ರಂದು ಬೆಂಗಳೂರಿನ ಸಿಟಿ. ಸಿವಿಲ್ ಕೋರ್ಟ್‌ನ ಆವರಣದಲ್ಲಿ ವಕೀಲರು, ಮಾಧ್ಯಮ ಮತ್ತು ಪೋಲೀಸರ ನಡುವೆ ನಡೆದ ಘರ್ಷಣೆಯ ಘಟನೆ ತೀವ್ರ ಖಂಡನೀಯ. ಇದೀಗ ವಾರ ಉರುಳಿದರೂ ಅದರ ಕಾವು ಇನ್ನೂ ಆರಿಲ್ಲ. ಅದು ಮತ್ತಷ್ಟು ವಿಸ್ತರಿಸಬಹುದಾದ ಸಾಧ್ಯತೆಗಳೇ ಹೆಚ್ಚಿರುವುದು ಮತ್ತಷ್ಟು ಅನಾರೋಗ್ಯರ ಸನ್ನಿವೇಶವಾಗಿದೆ. ಸಮಾಜದ, ಸಾರ್ವಜನಿಕ ಬದುಕಿನಲ್ಲಿ ಕಾರ್ಯಾಂಗ, ನ್ಯಾಯಾಂಗ ಮತ್ತು ಮಾಧ್ಯಮ ಕ್ಷೇತ್ರಗಳಲ್ಲಿ ಮಹತ್ವದ ಪಾತ್ರ ವಹಿಸುವ ಪ್ರಮುಖ ವಿಭಾಗಗಳ ನಡುವೆ ಇಂತಹ ಘರ್ಷಣೆ ಖಂಡಿತಕ್ಕೂ ಆತಂಕ ಹುಟ್ಟಿಸುತ್ತದೆ. ಆದರೆ ಇಂದಿನ ಒಟ್ಟು ರಾಜಕೀಯ, ಆರ್ಥಿಕ, ಸಾಮಾಜಿಕ ವಿದ್ಯಾಮಾನಗಳನ್ನು ಗಮನಿಸಿದರೆ ಇಂತಹ ಘರ್ಷಣೆ, ಮುಖಾಮುಖಿಯಾಗುವುದು ಆಶ್ಚರ್ಯಕರವೇನಲ್ಲ.

ಬಹಳ ಪ್ರಮುಖವಾಗಿ ಅಂದಿನ ಘಟನೆ ಸಂಭವಿಸಿದ್ದಾದರೂ ಹೇಗೆ? ಯಾಕೆ?. ಈ ಬಗ್ಗೆ ಇನ್ನೂ ಒಂದು ಸಮಗ್ರ, ವಸ್ತುನಿಷ್ಠ ವಿಶ್ಲೇಷಣೆ ಹೊರಬರಬೇಕಷ್ಟೇ. ಆದರೆ ಅಂದಿನ ಘಟನೆ ನಡೆಯದಂತೆ ಕ್ರಮ ವಹಿಸಬಹುದಿತ್ತು. ಘಟನಾವಳಿಗಳ ಸರಣಿಯನ್ನು ನೋಡಿದರೆ ಅದು ಪೂರ್ವಯೋಜಿತ ಎಂಬುದನ್ನೂ ಕಾಣಬಹುದು.

ರಾಜ್ಯದ ಒಬ್ಬ ಮಾಜಿ ಸಚಿವನಾದ, ಗಣಿ ಮಾಫಿಯಾದ ಅತ್ಯಂತ ಪ್ರಮುಖ ವ್ಯಕ್ತಿ ಜನಾರ್ದನ ರೆಡ್ಡಿಯನ್ನು ವಿಚಾರಣೆಗೆಂದು ಕರೆದು ತಂದಾಗ ಅಗತ್ಯ ಮುನ್ನೆಚ್ಚರಿಕೆ ಕ್ರಮಗಳನ್ನು ಕೈಗೊಳ್ಳಬೇಕಾದದ್ದು ಕರ್ನಾಟಕ ಸರ್ಕಾರದ ಪ್ರಮುಖ ಹೊಣೆಯಾಗಿತ್ತು. ಇಷ್ಟನ್ನೂ ಅರಿಯದಷ್ಟು ಮುಗ್ಧವಾಗಿಧೆ ಈ ಸರ್ಕಾರ ಹಾಗೂ ಇಲಾಖೆಗಳು ಎಂದರೆ ನಂಬುವುದು ಕಷ್ಟ. ಈ ಸಂದರ್ಭದಲ್ಲಿ ಘರ್ಷಣೆ ಆರಂಭವಾದ ಕೂಡಲೇ ಕಟ್ಟುನಿಟ್ಟಿನ ಬಿಗಿ ಕ್ರಮಗಳನ್ನು ಕೈಗೊಳ್ಳಲಿಲ್ಲ. ವಾಸ್ತವದಲ್ಲಿ ವಕೀಲರು, ಮಾಧ್ಯಮದವರ ನಡುವೆ ಈ ಘರ್ಷಣೆ ಮುಂದುವರಿಯಲು ಗೃಹ ಇಲಾಖೆ ಮಧ್ಯಾಹ್ನದವರೆಗೂ ಬಿಟ್ಟಿದ್ದೇ ಪ್ರಶ್ನಾರ್ಹ. ನಂತರವೂ ಇಲಾಖೆ ಸಕ್ರಿಯವಾದದ್ದು ವಕೀಲರ ಮೇಲೆ ದಮನಕಾರಿ ಸ್ವರೂಪದಲ್ಲೇ. ಗೃಹ ಸಚಿವರ, ಮುಖ್ಯಮಂತ್ರಿಗಳ ಗಮನಕ್ಕೆ ಇದು ಬಂದಾಗ ಅವರ ಹಾರಿಕೆ ಉತ್ತರವೂ ಅಕ್ಷೇಪಾರ್ಹವಾಗಿತ್ತು. ಅಲ್ಲದೇ ಈ ಘರ್ಷಣೆಯಲ್ಲಿ ಹೊರಗಿನ ಶಕ್ತಿಗಳ ಪಾತ್ರವೂ ಇದೆ ಎನ್ನುವಾಗ, ಪೂರ್ವಯೋಜಿತವೂ ಎನ್ನೂವಾಗ ನಮ್ಮ ಗುಪ್ತಚಾರ ಇಲಾಖೆಗೆ ಇದು ತಿಳಿದಿರಲಿಲ್ಲವೇ?. ಹೀಗಾಗಿ ರಾಜ್ಯ ಸರ್ಕಾರ ಇಂತಹ ಅನಾಹುತವನ್ನು ತಡೆಗಟ್ಟಲು, ಪೂರ್ವ ಕ್ರಮವಹಿಸಲು ಸಂಪೂರ್ಣ ವಿಫಲವಾಗಿದೆ. ಮತ್ತು ಘಟನೆಗೆ ಹೊಣೆಗಾರನಾಗಿದೆ.

ಒಂದು ಪ್ರಮುಖ ಅಂಶವೆಂದರೆ ಸರ್ಕಾರವೇ ಕಿತ್ತಾಟದಲ್ಲಿ ತೊಡಗಿದ್ದು ಇಡೀ ಆಡಳಿತವೇ ನಿಷ್ಕ್ರೀಯವಾಗಿ ಅರಾಜಕತೆಯನ್ನು ಸೃಷಿಸಿದೆ. ಆಳುವ ಪಕ್ಷದೊಳಗಿನ ಕಿತ್ತಾಟ, ಗುಂಪುಗಾರಿಕೆ ,ಅಧಿಕಾರದಾಹಗಳು ರಾಜ್ಯದಲ್ಲಿ ಇನ್ನೆಂತಹ ಸನ್ನಿವೇಶವನ್ನು ಸೃಷ್ಟಿಸಬಲ್ಲವು ಎಂಬುದು ಕಳವಳಕಾರಿಯಾಗಿದೆ. ಈಗಲೂ ಅಧಿಕಾರರೂಢ ಬಿಜೆಪಿ ಪಕ್ಷಕ್ಕಾಗಿ, ಚುಕ್ಕಾಣಿ ಹಿಡಿದ ಸರ್ಕಾರಕಾಗಲೀ ಸ್ವಲ್ಪವೂ ಚಿಂತಿತವಾಗಿಲ್ಲ ಎಂಬುದೇ ಅದು ತಲುಪಿರುವ ಭಂಡತನ, ದುಷ್ಟತನಕ್ಕೆ ಸಾಕ್ಷಿ.

ಮಾಚ್ 2ರ ಘಟನೆಗೆ ಹಿನ್ನೆಲೆಯೆಂದರೆ ಜನವರಿ 17ರಂದಿನ ವಕೀಲರ ಮುಷ್ಕರದ ವಿದ್ಯಾಮಾನಗಳು. ಇದು ವಕೀಲರ ಪೋಲೀಸರ ನಡುವೆ ಹೆಚ್ಚುತ್ತಿರುವ ವೈಷಮ್ಯದ ವಾತಾವರಣಕ್ಕೆ ಹಿಡಿದ ಕನ್ನಡಿಯಾಗಿದೆ. ಪೋಲೀಸ್ ಇಲಾಖೆ ಮತ್ತು ವಕೀಲರ ನಡುವೆ ಸತತವಾಗಿ ಮೊಕದ್ದಮೆಗಳ ಕಾರಣದಲ್ಲಿಯೂ ಘರ್ಷಣೆಗಳು ನಡೆಯುತ್ತಲೇ ಇರುತ್ತವೆ. ಅದರ ಭಾಗವಾಗಿ ಜನವರಿ 17 ರಂದು ನಾಲ್ಕು ತಾಸಿಗೂ ಮೀರಿದ ರಸ್ತೆ ತಡೆ ನಡೆದು ಅರಾಜಕತೆ ಸೃಷ್ಟಿಯಾದಾಗಲೇ ಎರಡೂ ಬದಿಯಲ್ಲಿ ಸೂಕ್ತ ಮುತುವರ್ಜಿ ವಹಿಸಿ ತಿಳಿ ವಾತಾವರಣ ಮೂಡಿಸಬಹುದಿತ್ತು. ಅಂತಹ ಪ್ರಯತ್ನಗಳೂ ಸರ್ಕಾರದಿಂದ ನಡೆಯಲಿಲ್ಲ. ಇದು ದ್ವೇಷದ ಸ್ವರೂಪಕ್ಕೆ ತಿರುಗಲು ಒಂಧು ಕಾರಣವಾಗಿದೆ. ಇದರಲ್ಲಿ ಸ್ವಾರ್ಥ, ಭ್ರಷ್ಟತೆ, ಪಕ್ಷಪಾತಗಳು ಮೇಲುಗೈ ಸಾಧಿಸಿದಲ್ಲಿ ಪರಿಹಾರ ರೂಪುಗೊಳ್ಳುವುದಾದರೂ ಹೇಗೆ?

ಜಾಗತೀಕರಣ, ಉದಾರೀಕರಣದ ಇಂದಿನ ಸನ್ನಿವೇಶದಲ್ಲಿ ಆಡಳಿತ ಯಂತ್ರ, ಮಾಧ್ಯಮ, ವಕೀಲರ ಒಂದು ವಿಭಾಗದಲ್ಲಿ ನೈತಿಕ ಅದಃಪತನ ಬೆಳೆಯುತ್ತ ಗಂಭೀರ ಸ್ವರೂಪ ಪಡೆಯುತ್ತಿವೆ. ಇದನ್ನು ಸರಿಪಡಿಸಲು ಅಗತ್ಯ ಕ್ರಮಗಳು ಬೇಕು.

ಈ ಒಟ್ಟು ಹಿನ್ನೆಲೆಯಲ್ಲಿ ಅಂದಿನ ಘಟನೆ ಮತ್ತು ಅದಕ್ಕೆ ಕಾರಣವಾದ ಸನ್ನಿವೇಶ ಎಲ್ಲವನ್ನು ಸಮಗ್ರವಾದ ತನಿಖೆಗೆ ಒಳಪಡಿಸಬೇಕಿದೆ. ಅದರೀಗ ನ್ಯಾಯಾಂಗ ತನಿಖೆಗೆ ಸರ್ಕಾರ ಆದೇಶಿಸಿರುವುದು ಅಸಮರ್ಥನೀಯ ಹಾಗೂ ಕಾಲವಿಳಂಬದ್ದೂ, ನಿಷ್ಪ್ರಯೋಜಕವೂ ಆಗಿದೆ. ಆದ್ದರಿಂದ ಕ್ಷಿಪ್ರ, ಸಮಗ್ರ ತನಿಖೆಗಾಗಿ ಬೇರೊಂದು ತನಿಖೆಗೆ ಸರಕಾರ ಆದೇಶಿಸಬೇಕು.ತಪ್ಪಿತಸ್ಥರನ್ನು ನಿಷ್ಟುರವಾಗಿ ಶಿಕ್ಷಿಸಬೇಕು

ಆದರೆ ಬಿಜೆಪಿ ಸರ್ಕಾರ, ವಸ್ತುನಿಷ್ಠತೆಗಿಂತ ಅದನ್ನು ತನ್ನ ರಾಜಕೀಯ ದುರುದ್ದೇಶಗಳಿಗೆ ತಳ್ಳುತ್ತಿರುವ ಪ್ರಯತ್ನದಲ್ಲೇ ಹೆಚ್ಚು ಆಸಕ್ತವಾಗಿದೆ. ಈ ಅರಾಜಕ ಸರ್ಕಾರ ಅರಾಜಕತೆಯನ್ನೇ ಬೆಳೆಸಲು ನೋಡುತ್ತದೆ. ಇದು ಪ್ರಜಾಪ್ರಭುತ್ವಕ್ಕೆ ಅಪಾಯಕಾರಿ.

ಹಾಗೆಯೇ ಪ್ರಜಾಪ್ರಭುತ್ವದ ನಾಲ್ಕನೆಯ ಅಂಗವೆಂದೆಲ್ಲಾ ಹೇಳಿಕೊಳ್ಳುವ ಟಿ.ವಿ., ಮುದ್ರಣ ಮಾಧ್ಯಮಗಳೂ ಸಂಯಮದಿಂದ ವರ್ತಿಸಬೇಕು. ಉತ್ಪ್ರೇಕ್ಷೇಯ, ಕಲ್ಪಿತ ಸುದ್ದಿಗಳು, ಅಲ್ಲಿ ನಡೆದ ಘಟನೆಗಳ ಬಗ್ಗೆ ಏಕಮುಖ ವಿಶ್ಲೇಷಣೆ, ನಿಯಂತ್ರಣ ತಪ್ಪಿದ ಮಾತುಗಳು,ಸತ್ಯವನ್ನು ಮುಚ್ಚಿಟ್ಟ ಪೂರ್ವಗ್ರಹ ಪೀಡಿತ ವರದಿಗಳು ವ್ಯಾಪಕ ಸಾರ್ವಜನಿಕ ಟೀಕೆಗೆ ಒಳಗಾಗಿವೆ ಎಂಬುದನ್ನು ಗಮನಿಸಬೇಕು. ವ್ಯಾಪಾರಿ ಹಿತಾಸಕ್ತಿಗಳ ಆಚೆ ಸಮಾಜದ . ಸಾರ್ವಜನಿಕ ಸ್ವಾಸ್ಥ್ಯ ಕಾಯುವ ಗುರುತರ ಹೊಣೆ ಮಾಧ್ಯಮಗಳಿಗಿದೆ ಎಂಬುದನ್ನು ನಿರ್ವಹಿಸಿಯಾವೆಯೇ?

ಸಾರ್ವತ್ರಿಕ ಮುಷ್ಕರದಲ್ಲಿ ವಿದ್ಯಾರ್ಥಿಗಳು ರಾಜ್ಯವ್ಯಾಪಿ ಶಾಲಾ–ಕಾಲೇಜ್ ಬಂದ್



ಫೆಬ್ರವರಿ 28, 2012 ದೇಶದ ಐತಿಹಾಸದಲ್ಲೇ ಅತ್ಯಂತ ಮಹತ್ವದ ದಿನ. 19 ಕೇಂದ್ರ ಕಾರ್ಮಿಕ ಸಂಘಟನೆಗಳು ಪಕ್ಷ ಬೇಧ, ವಿಚಾರ ಬೇಧ ಮರೆತು ಜನರನ್ನು ಕಿತ್ತು ತಿನ್ನುತ್ತಿರುವ ಬೆಲೆ ಏರಿಕೆ, ಭ್ರಷ್ಟಾಚಾರದ ವಿರುದ್ಧ ಹಾಗೂ ಕಾರ್ಮಿಕ ಕಾನೂನುಗಳ ಸಮರ್ಪಕ ಜಾರಿಗಾಗಿ ಒಂದು ದಿನದ ಅಖಿಲ ಭಾರತ ಮುಷ್ಕರಕ್ಕೆ ಕರೆ ನೀಡಿದ್ದವು. ಈ ಐತಿಹಾಸಿಕ ಮುಷ್ಕರಕ್ಕೆ ದೇಶಾದ್ಯಂತವ್ಯಾಪಕ ಬೆಂಬಲ ವ್ಯಕ್ತವಾಗಿದ್ದು ಮುಷ್ಕರ ಯಶಸ್ವಿಯಾಗಿದೆ. ದೇಶದ ದುಡಿಯುವ ವರ್ಗದ ಜೊತೆಗೂಡಿ ಭಾರತ ವಿದ್ಯಾರ್ಥಿ ಫೆಡರೇಷನ್(ಎಸ್.ಎಫ್.ಐ) ಈ ಕೆಳಗಿನ ಬೇಡಿಕೆಗಳ ಈಡೇರಿಕೆಗಾಗಿ ಕರೆ ನೀಡಿದ್ದ ರಾಜ್ಯವ್ಯಾಪಿ ಶಾಲಾ ಕಾಲೇಜ್ ಹಾಗೂ ವಿ.ವಿ ಬಂದ್ ರಾಜ್ಯದಲ್ಲಿ ಸಂಪೂರ್ಣ ಯಶಸ್ವಿಯಾಗಿದೆ.

ಸರ್ಕಾರಿ ಶಾಲಾ–ಕಾಲೇಜು–ಹಾಸ್ಟಲ್‌ಗಳನ್ನು ಮುಚ್ಚುವ ಬದಲು ಅವುಗಳನ್ನು ಬಲಪಡಿಸಿ ಮತ್ತು ಅಗತ್ಯ ಮೂಲಭೂತ ಸೌಲಭ್ಯಗಳನ್ನು ನೀಡಬೇಕು, ಶಿಕ್ಷಣಕ್ಕಾಗಿ ಬಜೆಟ್‌ನಲ್ಲಿ ರಾಜ್ಯ ಸರ್ಕಾರ ಶೇ.30ರಷ್ಟು, ಕೇಂದ್ರ ಸರ್ಕಾರ ಶೇ.10 ರಷ್ಟು ಜಿ.ಡಿ.ಪಿ.ಯ ಶೇ.6ರಷ್ಟು ಹಣವನ್ನು ಮೀಸಲಿಡಬೇಕು, ಖಾಸಗಿ ಶಿಕ್ಷಣ ಸಂಸ್ಥೆಗಳಲ್ಲಿ ಡೊನೇಷನ್ ಹಾವಳಿ ನಿಯಂತ್ರಿಸಲು "ಜಿಲ್ಲಾ ಶಿಕ್ಷಣ ರೆಗ್ಯೂಲೇಟಿಂಗ್ ಪ್ರಾಧಿಕಾರ"ವನ್ನು ರಚಿಸಿ, ನಿಯಮ ಬಾಹಿರವಾಗಿ ಡೊನೇಷನ್ ವಸೂಲಿ ಮಾಡುವ ಶಿಕ್ಷಣ ಸಂಸ್ಥೆಗಳ ಮಾನ್ಯತೆಯನ್ನು ರದ್ದುಗೊಳಿಸಿ, ಖಾಲಿ ಇರುವ ಶಿಕ್ಷಣ–ಉಪನ್ಯಾಸಕ–ಭೋದಕೇತರ ಹುದ್ದೆಗಳನ್ನು ಭರ್ತಿ ಮಾಡಿ, ಅತಿಥಿ ಉಪನ್ಯಾಸಕ ಹಾಗೂ ಹೊರಗುತ್ತಿಗೆ ಪದ್ಧತಿಯನ್ನು ಕೈಬಿಟ್ಟು, ನೇಮಕಾತಿ ಖಾಯಂಗೊಳಿಸಿ, ವೇತನ ತಾರತಮ್ಯ ನಿವಾರಿಸಿ ಹಾಗೂ ಸೇವಾ ಭದ್ರತೆ ಒದಗಿಸಿ, ಶಿಕ್ಷಣದ ಕೋಮುವಾದೀಕರಣ ಬಿಟ್ಟು, ವೈಜ್ಞಾನಿಕ, ಪ್ರಗತಿಪರ ಮತ್ತು ಉದ್ಯೋಗಾಧಾರಿತ ಶಿಕ್ಷಣ ಪದ್ಧತಿಯನ್ನು ಜಾರಿಗೊಳಿಸಬೇಕು. ಹಾಸ್ಟಲ್ ವಿದ್ಯಾರ್ಥಿಗಳಿಗೆ ಕೇರಳ ಸರ್ಕಾರ ನೀಡುವಂತೆ ಪ್ರತಿ ತಿಂಗಳು ರೂ.1,600/– ಆಹಾರ ಭತ್ಯೆ ಮತ್ತು ಎಲ್ಲಾ ರೀತಿಯ ಅಗತ್ಯ ಮೂಲಭೂತ ಸೌಲಭ್ಯ ಒದಗಿಸಬೇಕು. ಖಾಸಗಿ ಮತ್ತು ವಿದೇಶಿ ವಿಶ್ವವಿದ್ಯಾಲಯಗಳ ಸ್ಥಾಪನೆಯನ್ನು ಕೈಬಿಟ್ಟು ಸರ್ಕಾರಿ ವಿ.ವಿ.ಗಳಿಗೆ ಅಗತ್ಯ ಮೂಲಭೂತ ಸೌಲಭ ಒದಗಿಸಿ, ಬಲಪಡಿಸಬೇಕು. ರಾಜ್ಯದ ವಿ.ವಿ.ಗಳಲ್ಲಿನ ಭ್ರಷ್ಟಾಚಾರ ಹಗರಣಗಳನ್ನು ತನಿಖೆ ನಡೆಸಿ ತಪ್ಪಿತಸ್ಥರ ವಿರುದ್ಧ ಕ್ರಮಕೈಗೊಳ್ಳಬೇಕು, ಶಾಲಾ–ಕಾಲೇಜುಗಳಲ್ಲಿ ವಿದ್ಯಾರ್ಥಿನಿಯರ ಮೇಲಾಗುತ್ತಿರುವ ಲೈಂಗಿಕ ಕಿರುಕುಳ ತಡೆಗಟ್ಟಲು ಸುಪ್ರೀಂಕೋರ್ಟಿನ ನಿರ್ದೇಶನದಂತೆ "ಲೈಂಗಿಕ ಕಿರುಕುಳ ವಿರೋಧಿ ಸಮಿತಿ"ಯನ್ನು ರಚಿಸಲು ಆದೇಶಿಸಬೇಕು, ತಮಿಳುನಾಡಿನ ಮಾದರಿಯಂತೆ ಪದವಿ ಹಂತದವರೆಗು ಉಚಿತ ಬಸ್‌ಪಾಸ್ ವ್ಯವಸ್ಥೆ ಕಲ್ಪಿಸಿ, ಏರಿಕೆಯಾಗಿರುವ ಬಸ್‌ಪಾಸ್ ದರ ಕಡಿತಗೊಳಿಸಿ, ವಿದ್ಯಾರ್ಥಿ ಪಾಸ್ ಪ್ರಯಾಣ ದೂರವನ್ನು 100 ಕಿ.ಮೀ.ಗೆ ವಿಸ್ತರಿಸಿ, ಸೂಕ್ತ ಸಾರಿಗೆ ವ್ಯವಸ್ಥೆ ಕಲ್ಪಿಸಿ, ಖಾಸಗಿ ವೃತ್ತಿ ಶಿಕ್ಷಣ ಸಂಸ್ಥೆಗಳನ್ನು ನಿಂಯಂತ್ರಿಸಲು ರಾಜ್ಯ ಸರ್ಕಾರಗಳಿಗೆ ಅಧಿಕಾರ ನೀಡುವ ಕೇಂದ್ರೀಯ ಶಾಸನ ಜಾರಿಗೊಳಿಸಬೇಕು, ಬಾಕಿಯಿರುವ ವಿದ್ಯಾರ್ಥಿ ವೇತನ ಹಾಗೂ ಸಹಾಯಧನ ಬಿಡುಗಡೆಗೊಳಿಸಿ ಎಂಬ ಮುಂತಾದ ಬೇಡಿಕೆಗಳ ಜಾರಿಗಾಗಿ ಭಾರತ ವಿದ್ಯಾರ್ಥಿ ಫೆಡರೇಷನ್(ಎಸ್.ಎಫ್.ಐ.) ನೇತೃತ್ವದಲ್ಲಿ ಶಾಲಾ ಕಾಲೇಜ್ ಬಂದ್‌ಗೆ ಕರೆ ನೀಡಲಾಯಿತು.

ರಾಜ್ಯಾದ್ಯಂತ ನಡೆದ ಪ್ರತಿಭಟನೆಯಲ್ಲಿ 15,000 ವಿದ್ಯಾರ್ಥಿಗಳು ನೇರವಾಗಿ ಭಾಗವಹಿಸಿದ್ದರು" ಹಾಗೂ ಲಕ್ಷಾಂತರ ವಿದ್ಯಾರ್ಥಿಗಳು ತರಗತಿ ಬಹಿಷ್ಕಾರದಲ್ಲಿ ಪಾಲ್ಗೊಂಡಂತಾಗಿದೆ. ರಾಜ್ಯದ ಬೆಂಗಳೂರು, ಕೊಪ್ಪಳ, ಹಾವೇರಿ, ರಾಯಚೂರು, ಚಿಕ್ಕಬಳ್ಳಾಪುರ, ಕೋಲಾರ, ಹಾಸನ, ಬಳ್ಳಾರಿ, ಮಂಡ್ಯ, ಮೈಸೂರು, ದಕ್ಷಿಣ ಕನ್ನಡ, ಬೀದರ್, ಧಾರವಾಡ–ಹುಬ್ಬಳ್ಳಿ, ದಾವಣಗೆರೆ, ಯಾದಗಿರಿ, ಗದಗ್, ಬಿಜಾಪುರ, ಬೆಳಗಾಂ, ಬಾಗಲಕೋಟೆ ಸೇರಿದಂತೆ 25 ಜಿಲ್ಲೆಗಳಲ್ಲಿ ಸಂಪೂರ್ಣ ಬಂದ್ ಆಗಿದ್ದು ವಿದ್ಯಾರ್ಥಿಗಳು ಬೀದಿಗಿಳಿದು ಪ್ರತಿಭಟನೆ ನಡೆಸಿದ್ದಾರೆ. 55 ತಾಲೂಕು ಕೇಂದ್ರಗಳಲ್ಲಿ ಎಸ್.ಎಫ್.ಐ ನೇತೃತ್ವದಲ್ಲಿ ಶಾಲಾ–ಕಾಲೇಜ್ ಬಂದ್ ನಡೆದಿದೆ. ಅಲ್ಲದೇ ಧಾರವಾಡ , ವಿಜಯ ನಗರ ಶ್ರೀಕೃಷ್ಣದೇವರಾಯ ವಿಶ್ವ ವಿದ್ಯಾಲಯ ಸೇರಿದಂತೆ ರಾಜ್ಯದ ಹಲವು ವಿ.ವಿ ಗಳು ಬಂದ್ ಆಗಿವೆ.

ದಲಿತ ಅಭಿವೃದ್ಧಿ ಯೋಜನೆ ಎಂಬ ಆಳುವವರ 'ತೋರುಂಬ ಲಾಭ'

ದಲಿತರಿಗೆ ನಮ್ಮ ಸರ್ಕಾರಗಳು ಕೊಡಬಾರದಷ್ಟು ಕೊಟ್ಟು ಬಿಡುತ್ತಿವೆ ಎಂಬ ಅಪಪ್ರಚಾರವನ್ನು ವ್ಯಾಪಕವಾಗಿ ಮಾಡಲಾಗಿದೆ. ಇದರಲ್ಲಿ ಜಾತಿವಾದಿಗಳ ಮತ್ತು ಪಟ್ಟಭದ್ರರ ಸಂಚುಗಳಿರುತ್ತವೆ. ದಲಿತರ ಅಭಿವೃದ್ಧಿ ಹೆಸರಿನಲ್ಲಿ ಸಾವಿರ ಸಾವಿರ ಕೋಟಿ ರೂಪಾಯಿ ಯೋಜನೆಗಳ ಘೋಷಣೆಯಾದರೂ ಕೂಡ ವಾಸ್ತವವಾಗಿ ಜಾರಿಯಾಗುವುದು ಬಹಳಷ್ಟು ಕಡಿಮೆ. ದಲಿತರಿಗೆ ಸಲ್ಲಬೇಕಾದದ್ದು ಯಾರದ್ದೋ ಪಾಲಾಗುವುದು ಇಲ್ಲಿ ಮಾಮೂಲು. ಈ ಹಿನ್ನೆಲೆಯಲ್ಲಿ ಸಿಪಿಐ(ಎಂ) ಪಕ್ಷವು ದಲಿತರ ಅಭಿವೃದ್ಧಿಗೆಂದು ಸರ್ಕಾರಗಳು ಪ್ರತ್ಯೇಕ ಉಪ ಯೋಜನೆ ರೂಪಿಸಿ ಅದನ್ನು ಕಟ್ಟುನಿಟ್ಟಾಗಿ ನಿಗದಿತ ಉದ್ದೇಶಕ್ಕೆ ಬಳಕೆ ಮಾಡಬೇಕೆಂದು, ದಲಿತರಿಗೆ ಅವರ ನ್ಯಾಯಯುತ ಪಾಲು ಸಲ್ಲಬೇಕೆಂದು ಹೋರಾಟಗಳನ್ನು ಕೈಗೊಂಡಿದೆ. ಓದಿ. ಒಂದು ಸಂಕ್ಷಿಪ್ತ ವಿಶ್ಲೇಷಣೆ ಮತ್ತು ವರದಿ.

ದೇಶದ ಸ್ವಾತಂತ್ರ್ಯ ನಂತರದಲ್ಲಿ ಅಧಿಕಾರ ನಡೆಸಿದ ಕೇಂದ್ರ-ರಾಜ್ಯ ಸರ್ಕಾರಗಳು ದಲಿತರಿಗೆ ಅನುಕೂಲವಾಗುವ ಯಾವ ಕೆಲಸಗಳನ್ನು ಸಮರ್ಪಕವಾಗಿ ಜಾರಿ ಮಾಡಿಲ್ಲ, ಕೋಟಿ-ಕೋಟಿ ಹಣ ಬಜೆಟ್‌ನಲ್ಲಿ ಮೀಸಲಿಟ್ಟಿದೆ. ಆದರೆ ವಾಸ್ತವವನ್ನು ಪರಿಶೀಲಿಸಿದಾಗ ಸರ್ಕಾರದ ಹಣವು ಪೋಲಾಗಿರುವುದು ಕಂಡು ಬರುತ್ತದೆ ಹೊರತು ಬಳಕೆಯಾಗಿರುವುದು ನಗಣ್ಯವೆನ್ನಬಹುದು.

ಜನ ಸಂಖ್ಯೆಗೆ ಅನುಗುಣವಾಗಿ ನೀಡಬೇಕಾದ ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ಬಜೆಟ್‌ನಲ್ಲಿ ಅನುದಾನವು ತೀವ್ರತರವಾದ ತಾರತಮ್ಯದಿಂದ ಕೂಡಿದೆ. 2011-2012ರ ಒಟ್ಟು ಯೋಜನಾ ಬಜೆಟ್ ಕೇಂದ್ರ ಸರ್ಕಾರದ್ದು-3,40,225 ಕೋಟಿಯಷ್ಟು, ಇದರಲ್ಲಿ 30,551 ಕೋಟಿ ಮಾತ್ರ ಎಸ್.ಸಿ.-ಎಸ್.ಟಿ. ಜನಾಂಗದ ಜನರಿಗೆ ಹಂಚಿಕೆಯಾಗಿದೆ. ದೇಶದ ಒಟ್ಟು ಜನಸಂಖ್ಯೆಯಲ್ಲಿ ಶೇ.16.6ರಷ್ಟಿರುವ ದಲಿತರಿಗೆ ಮೀಸಲಿರಿಸಬೇಕಾದದ್ದು ಒಟ್ಟು 55 ಸಾವಿರ ಕೋಟಿ ರೂ.ಗೂ ಹೆಚ್ಚು. ಆದರೆ ಕೇಂದ್ರ ಸರ್ಕಾರವು ದಲಿತ ವಿಭಾಗಕ್ಕೆ ಮೀಸಲಿಟ್ಟ ಹಣ ತೀರಾ ಕಡಿಮೆಯಾಗಿದೆ.

ಕೇಂದ್ರ ಮಂತ್ರಿ ಮಂಡಲದ 62 ಇಲಾಖೆಗಳ ಪೈಕಿ 11 ಇಲಾಖೆಗಳು ಮಾತ್ರ ಎಸ್.ಸಿ./ಎಸ್.ಟಿ. ಜನರಿಗೆ ಹಣ ನೀಡಿವೆ. ಕರ್ನಾಟಕ ರಾಜ್ಯ ಸರ್ಕಾರ ಕಳೆದ 1994-95 ರಿಂದ 2008-09ರ ಅವಧಿಯಲ್ಲಿ ನಿಗದಿಪಡಿಸಿದ ಒಟ್ಟು ಮೊತ್ತವು 13,23,164.08 ಲಕ್ಷಗಳಾದರೆ ಖರ್ಚು ಮಾಡಿದ ಹಣ ಕೇವಲ 09,42,328.44 ಲಕ್ಷಗಳಾಗಿವೆ. ಅದೂ ಕೂಡ ಎಲ್ಲಾ ದಲಿತ ವಿಭಾಗದ ಜನಕ್ಕೆ ಬಳಕೆಯಾಗಿರುವುದಿಲ್ಲ. ನಿಗದಿಸಿದ ಹಣದಲ್ಲಿ 3,80,835 ಲಕ್ಷ ಖರ್ಚು ಮಾಡಿಲ್ಲ. ರಾಜ್ಯ ಸರ್ಕಾರ ಎಸ್./ಎಸ್.ಟಿ. ಜನಸಂಖ್ಯೆಗೆ ಅನುಗುಣವಾಗಿ ಶೇ.23.65ರಷ್ಟು ಹಣ ನಿಗದಿಪಡಿಸಬೇಕಿತ್ತು ಆದರೆ ಶೇ.18ರಷ್ಟು ಮಾತ್ರ ನಿಗದಿಪಡಿಸಿದೆ. ಬಿಡುಗಡೆ ಮಾಡುವುದು ಮತ್ತು ಖರ್ಚು ಮಾಡುವುದು ಇನ್ನೂ ಕಡಿಮೆಯಾಗಿದೆ.



ಕೇಂದ್ರ-ರಾಜ್ಯ ಸರ್ಕಾರಗಳು ಒಳಗೊಂಡು, ನಗರ ಸಭೆ, ಪುರಸಭೆ ಪಂಚಾಯ್ತಿ, ಗ್ರಾಮ ಪಂಚಾಯ್ತಿಗಳಲ್ಲಿ ದುರುಪಯೋಗವಾಗಿ ಹಣ ದಲಿತರಿಗೆ ಮುಟ್ಟ... ಇದ್ದು, ಇದನ್ನು ತನಿಖೆ ಮಾಡಿ, ತಪ್ಪಿತಸ್ಥ... ಮೇಲೆ ಸೂಕ್ತ ಕ್ರಮ ಕೈಗೊಳ್ಳಬೇಕಿದೆ.

ಸ್ವಾತಂತ್ರ್ಯ ಬಂದು 64 ವರ್ಷಗಳು ಕಳೆದರೂ ಜಾತಿ ತಾರತಮ್ಯ, ಅಸ್ಪೃಶ್ಯತಾ ಆಚರಣೆಗಳ... ನಿರಂತರವಾಗಿ ಮುಂದುವರೆದಿದೆ. ದಲಿತರ ಮೇಲೆ ತೀವ್ರತರವಾದ ದೌರ್ಜನ್ಯ, ದಾಳಿ... ದಬ್ಬಾಳಿಕೆ, ಬಹಿಷ್ಕಾರವನ್ನು ಭೂ ಮಾಲೀ... ಪಟ್ಟ ಬದ್ರ ಹಿತಾಸಕ್ತಿಗಳಿಂದ ಜಾತಿ-ಜಾತಿಗ... ನಡುವಿನ ಒಡಕನ್ನು ಪರಿಣಾಮಕಾರಿಯಾಗಿ ಉಪಯೋಗಿಸಿಕೊಂಡು ಒಂದು ದಲಿತ ಜಾತಿಯ ಮೇಲೆ ಮತ್ತೊಂದು ದಲಿತರನ್ನು ಎತ್ತಿಕಟ್ಟಿ ಜಾತಿ ಸಂಘರ್ಷವನ್ನು ಹುಟ್ಟು ಹಾಕಲಾಗುತ್ತಿದೆ. ಇದನ್ನು ತಡೆಗಟ್ಟಲು ಕಾನೂನ... ತರಬೇಕು. ವಿದ್ಯಾರ್ಥಿಗಳಿಗೆ ಸಮಾಜ ಕಲ್ಯಾಣ ಇಲಾಖೆಯು ನೀಡುವ ವಿದ್ಯಾರ್ಥಿ... ಸ್ಕಾಲರ್‌ಶೀಪ್‌ನ್ನು ಸರಿಯಾಗಿ ವಿತರಿಸುತ್ತಿಲ್ಲ... ವಿದ್ಯಾರ್ಥಿಗಳಿಗೆ ಸಮರ್ಪಕವಾಗಿ ಸ್ಕಾಲರ್‌ಶೀಪ... ವಿತರಣೆಯಾಗಿಬೇಕಿದೆ.

ಮೇಲಿನ ಬೇಡಿಕೆಗಳು ಹಾಗೂ ಇತರೆ ಬೇಡಿಕೆಗಳ... ಪರಿಹಾರಕ್ಕಾಗಿ ಒತ್ತಾಯಿಸಿ ರಾಜ್ಯಾದ್ಯಂತ ಭಾರತ... ಕಮ್ಯೂನಿಸ್ಟ್ ಪಕ್ಷ (ಮಾರ್ಕ್ಸ್‌ವಾದಿ), ಕರ್ನಾಟಕ ರಾಜ್ಯ ಸಮಿತಿ ಕರೆಯ ಭಾಗವಾಗಿ ರಾಜ್ಯದ ಎಲ್ಲಾ ಜಿಲ್ಲೆಗಳಲ್ಲಿ ಪ್ರತಿಭಟನಾ ಧರಣಿಗಳು ನಡೆದಿವೆ. ಜಿಲ್ಲಾಧಿಕಾರಿ-ತಹಶೀಲ್ದಾರ್‌ರವರ ಮೂಲಕ ಮುಖ್ಯಮಂತ್ರಿಗಳಿಗೆ ಮನವಿ ಸಲ್ಲಿಸಲಾಗಿದೆ.

ದಲಿತರ ಜನಸಂಖ್ಯೆಗೆ ಅನುಗುಣವಾಗಿ ಬಜೆಟ್‌ನಲ್ಲಿ ಮೀಸಲಾತಿ ಇಡಬೇಕೆಂದು ಆಗ್ರಹಿಸಿ ರಾಜ್ಯದ್ಯಂತ ಪ್ರತಿಭಟನೆಗಳು



ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳಿಗೆ ಸರಕಾರದ ಎಸ್‌ಸಿಎಸ್‌ಪಿ ಮತ್ತು ಟಿಎಸ್‌ಪಿ ಕಾರ್ಯಕ್ರಮಗಳಲ್ಲಿ ರಾಜ್ಯದಲ್ಲಿ ಪ.ಜಾತಿ ಮತ್ತು ಪ.ಪಂಗಡಗಳ ಜನಸಂಖ್ಯಾ ಪ್ರಮಾಣಾನುಸಾರವಾಗಿ ಅನುದಾನ ಕಾದಿರಿಸಬೇಕು, ಭೂರಹಿತ ದಲಿತರಿಗೆ ಭೂಮಿ ಹಾಗೂ ಮನೆ ನಿವೇಶನ ನೀಡಬೇಕು, ಎಲ್ಲಾ ದಲಿತರಿಗೂ ಅಂತ್ಯೋದಯ ಕಾರ್ಡ್ ನೀಡಬೇಕು, ಬ್ಯಾಕ್‌ಲಾಗ್ ಹುದ್ದೆಗಳನ್ನು ಕೂಡಲೇ ಭರ್ತಿ ಮಾಡಬೇಕು ಮೊದಲಾದ ಬೇಡಿಕೆಗಳನ್ನು ಮುಂದಿಟ್ಟು ಸಿಪಿಐ(ಎಂ) ಪಕ್ಷದ ನೇತೃತ್ವದಲ್ಲಿರುವ ದಲಿತ ಹಕ್ಕುಗಳ ಸಮಿತಿಯಿಂದ ಮಾರ್ಚ್ 1 ರಿಂದ 7ರ ವರೆಗೆ ರಾಜ್ಯಾದ್ಯಂತ ಹಮ್ಮಿಕೊಂಡಿರುವ ಪ್ರತಿಭಟನೆಗಳ ಭಾಗವಾಗಿ ದ.ಕ.ಜಿಲ್ಲೆ ಹಾಗೂ ಉಡುಪಿ ಜಿಲ್ಲೆಗಳ ಕೆಲವು ಮುಖ್ಯ ಪಟ್ಟಣಗಳಲ್ಲಿ ಧರಣಿ ಸತ್ಯಾಗ್ರಹ ಹಾಗೂ ಪ್ರತಿಭಟನೆಗಳು ನಡೆದವು.

ಮಂಗಳೂರು: ದ.ಕ.ಜಿಲ್ಲಾಧಿಕಾರಿಗಳ ಕಚೇರಿ ಎದುರು ಮಾರ್ಚ್ ಐದರಂದು ನಡೆದ ಧರಣಿ ಸತ್ಯಾಗ್ರಹದಲ್ಲಿ 75ಕ್ಕೂ ಮಿಕ್ಕಿ ಪಕ್ಷದ ಕಾರ್ಯಕರ್ತರು ಭಾಗವಹಿಸಿದ್ದರು. ಘೋಷಣೆಗಳನ್ನು ಕ್ರಾಂತಿ ಗೀತೆಗಳನ್ನು ಹಾಡಲಾಯಿತು. ಧರಣಿ ಸತ್ಯಾಗ್ರಹವನ್ನು ಉದ್ಘಾಟಿಸಿ ಸಿಪಿಐ(ಎಂ) ದ.ಕ.ಜಿಲ್ಲಾ ಸಮಿತಿ ಕಾರ್ಯದರ್ಶಿ ಬಿ.ಮಾಧವ ಮಾತನಾಡಿದರು.

ಪ್ರತಿಭಟನಾಕಾರರನ್ನುದ್ದೇಶಿಸಿ ಸಿಪಿಐ(ಎಂ) ಜಿಲ್ಲಾ ಸಮಿತಿ ಮುಖಂಡರಾದ ಜೆ.ಬಾಲಕೃಷ್ಣ ಶೆಟ್ಟಿ, ಕೃಷ್ಣಪ್ಪ ಸಾಲ್ಯಾನ್, ವಸಂತ ಆಚಾರಿ, ದಲಿತ ಹಕ್ಕುಗಳ ರಾಜ್ಯ ಸಂಚಾಲಕ ಸಮಿತಿ ಸದಸ್ಯ ಕೃಷ್ಣಪ್ಪ ಕೊಂಚಾಡಿ, ಸಮುದಾಯ ಸಂಘಟನೆಯ ವಾಸುದೇವ ಉಚ್ಚಿಲ, ಪ್ರಗತಿಪರ ಚಿಂತಕರ ವೇದಿಕೆಯ ಅಧ್ಯಕ್ಷ ಐ.ಎ.ಪ್ರಸನ್ನ, ಮಂಗಳೂರು ನಗರ ಪಾಲಿಕೆ ಸದಸ್ಯರಾದ ಜಯಂತಿ ಬಿ.ಶೆಟ್ಟಿ ಮಾತನಾಡಿದರು. ಸಿಪಿಐ(ಎಂ) ಮಂಗಳೂರು ನಗರ ಕಾರ್ಯದರ್ಶಿ ಸುನಿಲ್ ಕುಮಾರ್ ಬಜಾಲ್ ಸಮಾರೋಪ ಭಾಷಣ ಮಾಡಿದರು. ದಲಿತ ಹಕ್ಕುಗಳ ಸಮಿತಿಯ ಲಿಂಗಪ್ಪ ನಂತೂರು ಸ್ವಾಗತಿಸಿದರು. ಧರಣಿ ಸತ್ಯಾಗ್ರಹದ ನೇತೃತ್ವವನ್ನು ದಲಿತ ಹಕ್ಕುಗಳ ಸಮಿತಿಯ ಸರೋಜಮ್ಮ, ಜಯಕುಮಾರ್, ಯಮುನಾ, ತಿಮ್ಮಯ್ಯ, ಶೋಭಾ, ಯೋಗೀಶ್, ಭಾರತಿ ಬೋಳಾರ್ ವಹಿಸಿದ್ದರು.

ಮೂಡಬಿದರೆ: ಮೂಡಬಿದರೆಯ ದಲಿತ ಹಕ್ಕುಗಳ ಸಮಿತಿ ಹಾಗೂ ಸಿಪಿಐ(ಎಂ) ವತಿಯಿಂದ ಮೂಡಬಿದರೆ ನಾಡ ಕಚೇರಿಯ ಎದುರು ಮಾರ್ಚ್ 5 ರಂದು ಧರಣಿ ಸತ್ಯಾಗ್ರಹವನ್ನು ನಡೆಸಲಾಯಿತು. ಧರಣಿಯನ್ನುದ್ದೇಶಿಸಿ ಸಿಪಿಐ(ಎಂ) ದ.ಕ.ಜಿಲ್ಲಾ ಸಮಿತಿ ಕಾರ್ಯದರ್ಶಿ ಮಂಡಳಿ ಸದಸ್ಯರಾದ ಕೆ.ಯಾದವ ಶೆಟ್ಟಿ ಮಾತನಾಡಿದರು. ಜಿಲ್ಲಾ ಸಮಿತಿ ಸದಸ್ಯೆ ಹಾಗೂ ಮೂಡಬಿದ್ರಿ ಪುರಸಭಾ ಉಪಾಧ್ಯಕ್ಷೆ ಆಗಿರುವ ರಮಣಿ ಮೂಡಬಿದ್ರಿ ಕೂಡಾ ಮಾತನಾಡಿದರು.

ಮೂಡಬಿದ್ರಿ ದಲಿತ ಹಕ್ಕುಗಳ ಸಮಿತಿ ಕಾರ್ಯದರ್ಶಿ ಗಿರಿಜಾ, ರಾಧಾ, ಡಿವೈಎಫ್‌ಐ ವಲಯಾಧ್ಯಕ್ಷ ಶಂಕರ್ ಮತ್ತಿತರರು ಪ್ರತಿಭಟನೆಯಲ್ಲಿ ಭಾಗವಹಿಸಿದ್ದರು.

ಗುರುಪುರ: ಗುರುಪುರ ವಲಯ ಸಿಪಿಐ(ಎಂ) ಪಕ್ಷದ ವತಿಯಿಂದ ಕೈಕಂಭ ನಾಡ ಕಚೇರಿಯ ಎದುರು ಮಾರ್ಚ್ 5 ರಂದು ಪ್ರತಿಭಟನಾ ಪ್ರದರ್ಶನವನ್ನು ನಡೆಸಲಾಯಿತು. ಪ್ರತಿಭಟನೆಯನ್ನು ಉದ್ದೇಶಿಸಿ ದಲಿತ ಹಕ್ಕುಗಳ ರಾಜ್ಯ ಸಂಚಾಲಕ ಸಮಿತಿ ಸದಸ್ಯರಾದ ಕೃಷ್ಣಪ್ಪ ಕೊಂಚಾಡಿ ಮಾತನಾಡಿದರು.

ಸಿಪಿಐ(ಎಂ) ದ.ಕ.ಜಿಲ್ಲಾ ಕಾರ್ಯದರ್ಶಿ ಮಂಡಳಿ ಸದಸ್ಯರಾದ ಯು.ಬಿ.ಲೋಕಯ್ಯ, ಜಿಲ್ಲಾ ಸಮಿತಿ ಸದಸ್ಯರಾದ ಸದಾಶಿವ ದಾಸ್, ಗಂಗಯ್ಯ ಅಮೀನ್, ಗುರುಪುರ ವಲಯ ಪಕ್ಷ... ಮುಖಂಡರಾದ ನೋಣಯ್ಯ ಗೌಡ, ವಸಂ... ಕುಪ್ಪೆಪದವು ಮೊದಲಾದವರು ಪ್ರತಿಭಟನೆಯ ನೇತೃತ್ವ ವಹಿಸಿದ್ದರು.

ಉಡುಪಿ: ಸಿಪಿಎಂ ಪಕ್ಷದ ಉಡುಪಿ ತಾಲೂಕು ಸಮಿತಿಯ ವತಿಯಿಂದ ಮಾರ್ಚ್ 6ರಂದು ಉಡುಪಿ ಸರ್ವಿಸ್ ಬಸ್ ನಿಲ್ದಾಣದ ಬಳಿಯ ಕ್ಲಾಕ್ ಟವರ್ ಬಳಿ ಪ್ರತಿಭಟನಾ ಪ್ರದರ್ಶನವನ್ನು ನಡೆಸಲಾಯಿತು.

ಪ್ರತಿಭಟನಾಕಾರರನ್ನುದ್ದೇಶಿಸಿ ಸಿಪಿಐ(ಎಂ) ಉಡುಪಿ ಜಿಲ್ಲಾ ಸಮಿತಿ ಕಾರ್ಯದರ್ಶಿ ಕೆ.ಶಂಕರ, ಉಡುಪಿ ತಾಲೂಕು ಸಮಿತಿ ಕಾರ್ಯದರ್ಶಿ ಪಿ.ವಿಶ್ವನಾಥ ರೈ ಮಾತನಾಡಿದರು. ಪಕ್ಷದ ತಾಲೂಕು ಸಮಿತಿ ಮುಖಂಡರಾದ ದೋಗ... ಸುವರ್ಣ, ಅದಮಾರು ಶ್ರೀಪತಿ ಆಚಾರ್ಯ ಅಲ್ಲದೆ ಶಶಿಧರ ಹೊಳ್ಳ, ಕೆ.ಲಕ್ಷ್ಮಣ್, ಉಮೇಶ ಕುಂದರ್, ರಾಧಾ ಕೆಳಾರ್ಕಳಬೆಟ್ಟು, ಬೇ... ಮೂಡಬೆಟ್ಟು, ವಿದ್ಯಾರಾಜ್ ಮೊದಲಾದವರು ಉಪಸ್ಥಿತರಿದ್ದರು. (ವಿವಿಧ ಜಿಲ್ಲೆಗಳ ವರದಿಗಳು ಪುಟ 12ರಲ್ಲಿವೆ.)

ದೇಶದಲ್ಲಿ ಮತ್ತು ಮುಖ್ಯವಾಗಿ ಕರ್ನಾಟಕ ರಾಜ್ಯದಲ್ಲಿ ರೇಷ್ಮೆ ಉದ್ದಿಮೆ ಲಕ್ಷಾಂತರ ಜನರಿಗೆ ಜೀವನಾಧಾರವನ್ನು ಒದಗಿಸಿರುವ ಒಂದು ಉದ್ದಿಮೆಯಾಗಿದೆ. ಆದರೆ ಕೇಂದ್ರ ಸರ್ಕಾರದ ತೆರಿಗೆ ಮುಕ್ತ ರೇಷ್ಮೆ ಆಮದು ಎಂಬಂತಹ ನೀತಿಯು ರೇಷ್ಮೆ ರೈತರ ಕೊರಳನ್ನು ಕೊಯ್ಯುತ್ತಿದೆ. ರಾಜ್ಯದಲ್ಲಂತೂ ರೇಷ್ಮೆ ರೈತರ ಆತ್ಮಹತ್ಯೆಗಳು ನಡೆಯುತ್ತಿವೆ. ಈ ಹಿನ್ನೆಲೆಯಲ್ಲಿ ಇತ್ತೀಚೆಗೆ ದೆಹಲಿಯಲ್ಲಿ ನಡೆದ ರಾಷ್ಟ್ರ ಮಟ್ಟದ ಸಮಾವೇಶ ಆಗ್ರಹಿಸಿರುವುದೇನು ?

"ತೆರಿಗೆ ಮುಕ್ತ ಆಮದು ಎಂಬ ಉರುಳಿನಿಂದ ರೇಷ್ಮೆ ರೈತರ ಕೊರಳನ್ನು ಬಿಡಿಸಿ"

ದೆಹಲಿಯ ರಾಷ್ಟ್ರೀಯ ಸಮಾವೇಶದಲ್ಲಿ ಆಗ್ರಹ

ಅಪ್ಪು

ತೆರಿಗೆ ಮುಕ್ತ ರೇಷ್ಮೆ ಆಮದು ವಿರೋಧಿಸಿ ರಾಷ್ಟ್ರೀಯ ಸಮಾವೇಶವನ್ನು ನವದೆಹಲಿಯ ಕಾನ್‌ಸ್ಟಿಟ್ಯೂಷನ್ ಕ್ಲಬ್‌ನ ಸ್ಪೀಕರ್ ಸಭಾಂಗಣದಲ್ಲಿ ಮಾರ್ಚ್ 5,2012 ರಂದು ಹಮ್ಮಿಕೊಳ್ಳಲಾಗಿತ್ತು. ಮೂಲತಃ ಕರ್ನಾಟಕ ಸೇರಿದಂತೆ ರೇಷ್ಮೆ ಉತ್ಪಾದಿಸುವ ರಾಜ್ಯಗಳ 200ಕ್ಕೂ ಹೆಚ್ಚು ಪ್ರತಿನಿಧಿಗಳು ಈ ಸಮಾವೇಶದಲ್ಲಿ ಪಾಲ್ಗೊಂಡಿದ್ದರು. ತೆರಿಗೆ ಮುಕ್ತ ರೇಷ್ಮೆ ಆಮದು ವಿರೋಧಿ ಹೋರಾಟ ಸಮಿತಿ ನೇತೃತ್ವದಲ್ಲಿ ಕಳೆದ ವರ್ಷ ಫೆಬ್ರವರಿಯಲ್ಲಿ ಬೆಂಗಳೂರಿನ ಕೇಂದ್ರ ರೇಷ್ಮೆ ಮಂಡಳಿ ಮುಂದೆ ಬೃಹತ್ ಪ್ರತಿಭಟನೆ ನಡೆಸಲಾಗಿತ್ತು. ಈ ಪ್ರತಿಭಟನೆಯಲ್ಲಿ ಕರ್ನಾಟಕ, ಆಂಧ್ರ ಪ್ರದೇಶ, ತಮಿಳುನಾಡು ಸೇರಿದಂತೆ ಸಾವಿರಾರು ಮಂದಿ ರೇಷ್ಮೆ ಬೆಳೆಗಾರರು, ರೇಷ್ಮೆ ನೂಲು ಬಿಚ್ಚಣಿಕೆದಾರರು ಪಾಲ್ಗೊಂಡಿದ್ದರು. ಆದರೆ ಕೇಂದ್ರ ಸರ್ಕಾರ ತೆರಿಗೆ ಮುಕ್ತ ರೇಷ್ಮೆ ಆಮದು ನಿಷೇಧಿಸುವ ಬದಲು ಕಳೆದ ಬಜೆಟ್‌ನಲ್ಲಿ ಉಳಿಕೆ ರೇಷ್ಮೆ ಮೇಲಿನ ಆಮದು ಸುಂಕವನ್ನು ಶೇಕಡ 31ರಿಂದ ಶೇಕಡ 5ಕ್ಕೆ ಕಡಿತಗೊಳಿಸಿತು.

ಕೇಂದ್ರ ಸರ್ಕಾರ ಕೈಗೊಂಡ ಈ ನಿರ್ಧಾರವನ್ನು ವಿರೋಧಿಸಿ ಕರ್ನಾಟಕವನ್ನು ಪ್ರತಿನಿಧಿಸುತ್ತಿರುವ ಕೇಂದ್ರ ಸಚಿವರು, ಅಧಿಕಾರಿಗಳ ಮನೆಗಳ ಮುಂದೆ ಬೃಹತ್ ಪ್ರತಿಭಟನೆಗಳನ್ನು ಕೈಗೊಳ್ಳಲಾಯಿತು. ರೇಷ್ಮೆ ಬೆಳೆಯುವ ಜಿಲ್ಲೆಗಳಲ್ಲಿ ಬಂದ್ ಆಚರಿಸಲಾಯಿತು. ಸಾವಿರಾರು ರೈತರನ್ನು ಒಳಗೊಂಡ ವಿಧಾನಸೌಧ ಚಲೋ ಪ್ರತಿಭಟನೆ ಸಂಘಟಿಸಲಾಗಿತ್ತು. ತೆರಿಗೆ ಕಡಿತ ವಿರೋಧಿಸಿ ಪ್ರಧಾನ ಮಂತ್ರಿಗಳಿಗೆ ಒಂದು ಲಕ್ಷಕ್ಕೂ ಹೆಚ್ಚು ಪತ್ರಗಳನ್ನು ಬರೆಯಲಾಗಿತ್ತು.

ಈ ಪ್ರತಿಭಟನೆಯ ಮುಂದುವರೆದ ಭಾಗವಾಗಿ ನವದೆಹಲಿಯಲ್ಲಿ ಸಮಾವೇಶವನ್ನು ಸಂಘಟಿಸಲಾಗಿತ್ತು. ರೇಷ್ಮೆ ಬೆಳೆಗಾರರು, ರೈತ ಸಂಘಟನೆಗಳು, ನೂಲು ಬಿಚ್ಚಣಿಕೆದಾರರು, ಜನಪ್ರತಿನಿಧಿಗಳು, ಉದ್ಯಮದ ಪ್ರತಿನಿಧಿಗಳು ಈ ಸಮಾವೇಶದಲ್ಲಿ ಪಾಲ್ಗೊಂಡಿದ್ದರು. ಸಮಾವೇಶದ ನಂತರ ಪ್ರಧಾನ ಮಂತ್ರಿಗಳಿಗೆ ಮನವಿ ಪತ್ರವನ್ನೂ ಸಲ್ಲಿಸಲಾಯಿತು.

ಮಳ್ಳೂರು ಶಿವಣ್ಣ ಅವರು ಸಮಾವೇಶಕ್ಕೆ ಆಗಮಿಸಿದ ಪ್ರತಿನಿಧಿಗಳನ್ನು ಸ್ವಾಗತಿಸಿದರು. ಪ್ರಸ್ತಾವಿಕ ಭಾಷಣ ಮಾಡಿದ ಎಐಕೆಎಸ್ ಜಂಟಿ ಕಾರ್ಯದರ್ಶಿ ಮತ್ತು ಹೋರಾಟ ಸಮಿತಿ ಸಂಚಾಲಕರಾದ ವಿಜೂ ಕೃಷ್ಣನ್ 2010ರ ಸೆಪ್ಟೆಂಬರ್‌ನಲ್ಲಿ ಯುಪಿಎ ಸರ್ಕಾರ 2,500 ಮೆಟ್ರಿಕ್ ಟನ್ ರೇಷ್ಮೆಯನ್ನು ತೆರಿಗೆ ರಹಿತವಾಗಿ ಆಮದು ಮಾಡಿಕೊಳ್ಳಲು ಕೈಗೊಂಡ ನಿರ್ಧಾರದ ವಿರುದ್ಧ ಹೇಗೆ ಪ್ರತಿಭಟನೆಗಳನ್ನು ಮಾಡಿಕೊಂಡಬರಲಾಗಿದೆ ಎಂಬುದನ್ನು ವಿವರಿಸಿದರು.

ಕೇಂದ್ರ ಸರ್ಕಾರದ ಈ ನೀತಿ ಹೇಗೆ ರೇಷ್ಮೆ ರೈತರನ್ನು ಸಂಕಷ್ಟಕ್ಕೆ ದೂಡಿದೆ. ಇದರಿಂದಾಗಿ ರೈತರು ಆತ್ಮಹತ್ಯೆಗಳನ್ನು ಮಾಡಿಕೊಳ್ಳುತ್ತಿದ್ದಾರೆ ಎಂಬುದನ್ನು ವಿವರಿಸಿದರು. ಕೇಂದ್ರ ಸರ್ಕಾರದ ಈ ನೀತಿ ವಿರುದ್ಧ ಆಕ್ರೋಶ ವ್ಯಕ್ತಪಡಿಸಿದರು. ಈ ನೀತಿಗಳು ದೇಶದೊಳಗೆ ಹೇಗೆ ರೇಷ್ಮೆ ಉತ್ಪಾದನೆಯನ್ನು ಕುಂಠಿತಗೊಳಿಸಲಿದೆ. ಈ ನೀತಿಗಳಿಂದ ರೈತರು ಹಿಪ್ಪುನೇರಳೆ ಗಿಡಗಳನ್ನು ಕಿತ್ತೊಗೆಯದೆ ಅನ್ಯಮಾರ್ಗವಿಲ್ಲದಂತಾಗಲಿದೆ ಎಂದು ಕೇಂದ್ರ ಸರ್ಕಾರದ ವಿರುದ್ಧ ತೀವ್ರ ವಾಗ್ದಾಳಿ ನಡೆಸಿದರು. ರೇಷ್ಮೆ ಬೆಳೆಗಾರರ ಹಿತ ರಕ್ಷಿಸುವಲ್ಲಿ ಕೇಂದ್ರ ಸರ್ಕಾರ ಉದಾಸೀನ ತೋರಿಸುತ್ತಿರುವುದರ ವಿರುದ್ಧ ನಿರಂತರ ಹೋರಾಟಗಳನ್ನು ಮುಂದುವರೆಸಬೇಕೆಂದು ಕರೆ ನೀಡಿದರು.

ಸಿಪಿಐ(ಎಂ) ಪಕ್ಷದ ಹಿರಿಯ ಮುಖಂಡರು ಮತ್ತು ಕೃಷಿ ವ್ಯವಹಾರಗಳ ಸಂಸದೀಯ ಸ್ಥಾಯಿ ಸಮಿತಿ ಅಧ್ಯಕ್ಷರೂ ಆದ ಬಸುದೇವ್ ಆಚಾರ್ಯ ಮಾತನಾಡಿ, ವಿವಿಧ ಸರ್ಕಾರಗಳು ಅನುಸರಿಸುತ್ತಿರುವ ಹೊಸ ಆರ್ಥಿಕ ನೀತಿಗಳು ಹೇಗೆ ಸಾವಿರಾರು ರೈತರ ಆತ್ಮಹತ್ಯೆಗೆ ಕಾರಣವಾಗಿವೆ ಎಂಬುದನ್ನು ವಿವರಿಸಿದರು. ಕೃಷಿ ಮಾಡುವುದು ದಿನೇ ದಿನೇ ದುಸ್ತರವಾಗುತ್ತಿದೆ ಎಂದು ವಿಷಾದ ವ್ಯಕ್ತಪಡಿಸಿದರು.

ಕೃಷಿ ಹೂಡಿಕೆ ಹೆಚ್ಚಾಗುತ್ತಿರುವುದು, ಕೃಷಿ ಉತ್ಪನ್ನಗಳಿಗೆ ಲಾಭದಾಯಕ ಬೆಲೆ ಸಿಗದಿರುವುದು, ಇದರೊಂದಿಗೆ ತೆರಿಗೆ ಮುಕ್ತವಾಗಿ ರೇಷ್ಮೆಯನ್ನು ಆಮದು ಮಾಡಿಕೊಳ್ಳುತ್ತಿರುವಂತಹ ನೀತಿಗಳು ರೈತರನ್ನು ಸಂಕಷ್ಟದಲ್ಲಿ ಸಿಲುಕಿಸಿದೆ ಎಂದು ಕಿಡಿ ಕಾರಿದರು. ರೇಷ್ಮೆ ಬೆಳೆಗಾರರು ಮತ್ತು ಈ ಕೃಷಿ ಮೇಲೆ ಅವಲಂಬಿಸಿರುವವರ ಸಮಸ್ಯೆಗಳನ್ನು ಶೀಘ್ರವಾಗಿ ಪರಿಹರಿಸಬೇಕೆಂದು ಆಗ್ರಹಿಸಿದರು. ಸಂಸತ್ತಿನ ಅಧಿವೇಶನದಲ್ಲಿ ಈ ವಿಷಯವನ್ನು ಎತ್ತುವುದಾಗಿ ತಿಳಿಸಿದ ಅವರು, ಈ ಕುರಿತ ಹೋರಾಟಕ್ಕೆ ಸಂಪೂರ್ಣ ಬೆಂಬಲ ಸೂಚಿಸಿದರು.


ಬಸುದೇವ ಆಚಾರ್ಯ ಸಮಾವೇಶದಲ್ಲಿ

ಕರ್ನಾಟಕ ಪ್ರಾಂತ ರೈತ ಸಂಘದ ಪ್ರಧಾನ ಕಾರ್ಯದರ್ಶಿ ಮತ್ತು ಹೋರಾಟ ಸಮಿತಿಯ ಸಂಘಟನಾ ಸಂಚಾಲಕರಾದ ಜಿ.ಸಿ. ಬಯ್ಯಾರೆಡ್ಡಿಯವರು ಕರಡು ನಿರ್ಣಯವನ್ನು ಮಂಡಿಸುತ್ತಾ, ರೇಷ್ಮೆ ಕೃಷಿ ಕ್ಷೇತ್ರ ಎದುರಿಸುತ್ತಿರುವ ಸಮಸ್ಯೆಗಳು ಮತ್ತು ಪರಿಹಾರಗಳನ್ನು ಸವಿವರವಾಗಿ ಹೇಳಿದರು. ನಂತರ ನಿರ್ಣಯವನ್ನು ಸರ್ವಾನುಮತದಿಂದ ಅಂಗೀಕರಿಸಲಾಯಿತು.

ರಾಜ್ಯದ ರೇಷ್ಮೆ ಸಚಿವರಾದ ಬಚ್ಚೇಗೌಡ, ರೈಲ್ವೆ ಖಾತೆ ರಾಜ್ಯ ಸಚಿವರಾದ ಕೆ.ಹೆಚ್.ಮುನಿಯಪ್ಪ ಸಹ ಸಮಾವೇಶದಲ್ಲಿ ಪಾಲ್ಗೊಂಡು ಸಮಾವೇಶದಲ್ಲಿ ಎತ್ತಿದ ವಿಷಯಗಳ ಕುರಿತು ಕೇಂದ್ರ ಸರ್ಕಾರದೊಂದಿಗೆ ಚರ್ಚಿಸುವುದಾಗಿ ಭರವಸೆ ನೀಡಿದರು. ಮಾಜಿ ಸಂಸದರಾದ ಸಿ.ನಾರಾಯಣಸ್ವಾಮಿ, ಕರ್ನಾಟಕ ವಿಧಾನಸಭಾ ಮಾಜಿ ಸ್ಪೀಕರ್ ರಮೇಶ್‌ಕುಮಾರ್ ಅವರು ಸಹ ಹೋರಾಟಕ್ಕೆ ಸಹಮತ ವ್ಯಕ್ತಪಡಿಸಿದರು.ರೇಷ್ಮೆ ನೂಲು ಬಿಚ್ಚಣಿಕೆದಾರರ ಪರವಾಗಿ ಕೆಂಪರೆಡ್ಡಿ ಸಮಾವೇಶದಲ್ಲಿ ಮಾತನಾಡಿದರು. ಸಮಾವೇಶದ ಅಧ್ಯಕ್ಷತೆ ವಹಿಸಿದ್ದ ಕೆಪಿಆರ್‌ಎಸ್ ಅಧ್ಯಕ್ಷರಾದ ಮಾರುತಿ ಮಾನ್ಪಡೆ ಮಾತನಾಡಿ, ನಾವು ಹೋರಾಟಗಳನ್ನು ತೀವ್ರಗೊಳಿಸಿದ್ದರಿಂದಾಗಿ ರಾಜ್ಯ ಮತ್ತು ಕೇಂದ್ರದ ಸಚಿವರು ಈ ಸಮಾವೇಶಕ್ಕೆ ಆಗಮಿಸಿ ತಮ್ಮ ಬೆಂಬಲ ಸೂಚಿಸಿದ್ದಾರೆ. ಸರ್ಕಾರ ರೈತರ ಬೇಡಿಕೆಗಳನ್ನು ಈಡೇರಿಸದಿದ್ದಲ್ಲಿ ಈ ಹೋರಾಟಗಳನ್ನು ಮತ್ತಷ್ಟು ತೀವ್ರಗೊಳಿಸುವುದಾಗಿ ಎಚ್ಚರಿಸಿದರು. ಈ ಕುರಿತಂತೆ ರೈತರು ಸಹ ಎಚ್ಚೆತ್ತುಕೊಳ್ಳಬೇಕೆಂದು ಕರೆ ನೀಡಿದರು. ಪ್ರಾಂತ ರೈತ ಸಂಘದ ಮುಖಂಡರಾದ ಯಶ್ವಂತ್ ವಂದನಾರ್ಪಣೆ ಸಲ್ಲಿಸಿದರು.


...ಯ್ಯಾರೆಡ್ಡಿ ಮಾತನಾಡುತ್ತಿರುವುದು. ವೇದಿಕೆಯಲ್ಲಿ ಸಚಿವ ಬಚ್ಚೇಗೌಡ, ರೈತನಾಯಕರಾದ ಮಾನ್ಪಡೆ, ಮಾಜಿ ಸ್ಪೀಕರ್ ರಮೇಶ್‌ಕುಮಾರ್, ವಿಜು, ಮತ್ತಿತರರು.

ಬೇಡಿಕೆಗಳ ಕುರಿತ ಸಮಾವೇಶದ ನಿರ್ಣಯ

ಸಮಾವೇಶವು ಈ ಕೆಳಕಂಡ ಬೇಡಿಕೆಗಳಿಗಾಗಿ ಕೇಂದ್ರ ರಾಜ್ಯ ಸರ್ಕಾರಗಳನ್ನು ಆಗ್ರಹಿಸುವ ನಿರ್ಣಯವನ್ನು ಕೈಗೊಂಡಿತು.

1. ಪ್ರಸ್ತುತ ಬಜೆಟ್‌ನಲ್ಲಿ ಕೇಂದ್ರ ಸರ್ಕಾರವು ರೇಷ್ಮೆ ಆಮದು ಸುಂಕವನ್ನು ಮೊದಲಿನಂತೆ ಶೇ.31ಕ್ಕೆ ಏರಿಸಬೇಕು.

2. ಹಣ ದುಬ್ಬರ, ಅತಿ ಹೆಚ್ಚಿನ ಪ್ರಮಾಣದ ಕೂಲಿ ವೆಚ್ಚ ಮುಂತಾದ ಅಂಶಗಳನ್ನು ಆಧರಿಸಿ ಕೇಂದ್ರ ಸರ್ಕಾರ ರೇಷ್ಮೆ ಗೂಡಿಗೆ ಕನಿಷ್ಠ ಬೆಂಬಲ ಬೆಲೆಯನ್ನು ತಕ್ಷಣ ಘೋಷಿಸಬೇಕು. ಡಾ॥ಸ್ವಾಮಿನಾಥನ್ ಆಯೋಗದ ಶಿಫಾರಸ್ಸನ್ನು ಜಾರಿ ಮಾಡಬೇಕು.

3. ಬೆಂಬಲ ಬೆಲೆ ನಿಗದಿ ಮಾಡುವವರೆಗೆ ಉತ್ಪಾದನಾ ವೆಚ್ಚಕ್ಕಿಂತ ಕಡಿಮೆಗೆ ಮಾರಾಟ ಮಾಡುತ್ತಿರುವುದರಿಂದ ವ್ಯತ್ಯಾಸದ ಹಣವನ್ನು ಮಾರ್ಚ್ 01, 2011ರಿಂದ ನೀಡಬೇಕು.

4. ಆಮದು ಸುಂಕ ಕಡಿತ ಮಾಡಲಾದ ನಂತರ ರೇಷ್ಮೆ ರೈತರು ಪಡೆದಿರುವ ಎಲ್ಲ ಸಾಲವನ್ನು ಮನ್ನಾ ಮಾಡಬೇಕು.

5. ಕೇಂದ್ರ ಸರ್ಕಾರ ದೇಶದಲ್ಲಿನ ರೇಷ್ಮೆ ಉತ್ಪಾದನೆಯ ನಿಜವಾದ ಪ್ರಮಾಣ, ಬೇಡಿಕೆ, ಕೊರತೆ, ಮತ್ತು ಕೊರತೆಯನ್ನು ನೀಗಿಸಲು ಅಗತ್ಯವಾದ ಕ್ರಮಗಳ ಕುರಿತು ನಿರ್ದಿಷ್ಟ ಕಾಲಮಿತಿಯೊಳಗೆ ಅಧ್ಯಯನ ಮಾಡಿ ವರದಿ ನೀಡಲು ಒಂದು ಸ್ವತಂತ್ರ ಸಂಸ್ಥೆಯನ್ನು ನೇಮಿಸಬೇಕು.

ರೇಷ್ಮೆ ಕೃಷಿ, ರೇಷ್ಮೆ ಉದ್ದಿಮೆಯ ಸಮಗ್ರ ಅಭಿವೃದ್ಧಿಗೆ ಅಗತ್ಯವಾದ ವಿಶೇಷ ನೀತಿಯನ್ನು ಸರ್ಕಾರ ಪ್ರಕಟಿಸಬೇಕು.

ಚಳುವಳಿಯ ನಿರ್ಧಾರ

ಇದೇ ಮಾರ್ಚ್ ತಿಂಗಳ 19 ರಂದು ರಾಜ್ಯ ಸರ್ಕಾರ, ಮಾರ್ಚ್ 21 ರಂದು ಕೇಂದ್ರ ಸರ್ಕಾರಗಳು ತಮ್ಮ ಬಜೆಟ್ ಮಂಡಿಸಲಿದ್ದು ಗಂಭೀರ ರೇಷ್ಮೆ ಬಿಕ್ಕಟ್ಟಿನ ಪರಿಹಾರದ ನಿಟ್ಟಿನಲ್ಲಿ ಸಮಾವೇಶ ಆಗ್ರಹಿಸಿರುವ ಕ್ರಮಗಳನ್ನು ಕೈಗೊಳ್ಳದಿದ್ದಲ್ಲಿ ಬೃಹತ್ ಪಾರ್ಲಿಮೆಂಟ್ ಚಲೋ ಹೋರಾಟ ಅಲ್ಲದೇ ಜೈಲ್ ಭರೋ ಚಳುವಳಿಯಂತಹ ಚಳುವಳಿಯ ಮೂಲಕ ಆಂದೋಲನವನ್ನು ತೀವ್ರಗೊಳಿಸಲು ಸಮಾವೇಶ ನಿರ್ಧರಿಸಿದೆ.


ನಕ್ಸಲ್ ಎಂದು ಕಿರುಕುಳ : ಆದಿವಾಸಿ ಹಕ್ಕು ಸಮಿತಿ ಕಾರ್ಯಕರ್ತನ ಬಂಧನ–ಬೆಳ್ತಂಗಡಿಯಲ್ಲಿ ಪ್ರತಿಭಟನೆ



ನಾಲ್ಕು ದಿನಗಳ ಹಿಂದೆ ಬೆಳ್ತಂಗಡಿ ತಾಲೂಕಿನ ಕುತ್ಲೂರು ಮಲೆಯ ನಿವಾಸಿ ಹಾಗೂ ಪ್ರಸ್ತುತ ಮಂಗಳೂರು ವಿವಿಯಲ್ಲಿ ಸ್ನಾತಕೋತ್ತರ ಅಧ್ಯಯನ ನಡೆಸುತ್ತಿರುವ ಎಸ್‌ಎಫ್‌ಐ ಸದಸ್ಯರಾದ ಅಮಾಯಕ ವಿಠಲ ಹಾಗೂ ಆತನ ತಂದೆ ಮತ್ತು ಸೋದರನನ್ನು ನಕ್ಸಲ ಪೋಷಕರೆಂದು ಆರೋಪ ಹೊರಿಸಿ ಪೋಲೀಸರು ಬಂಧಿಸಿ ವಿಚಾರಣೆಗೊಳಪಡಿಸಿದ್ದನ್ನು ದಲಿತ ಹಕ್ಕುಗಳ ಸಮಿತಿ, ಡಿವೈಎಫ್ಐ ಮತ್ತು ಆದಿವಾಸಿ ಹಕ್ಕುಗಳ ತಾಲೂಕು ಸಮಿತಿಗಳು ಪ್ರತಿಭಟಿಸಲು ಜೊತೆಗೂಡಿದ್ದವು. ವಿಠಲ ಆದಿವಾಸಿ ಹಕ್ಕುಗಳ ರಾಜ್ಯ ಸಮನ್ವಯ ಸಮಿತಿ ಸದಸ್ಯರಾಗಿದ್ದರು.

ಮಾರ್ಚ್ 7 ರಂದು ಬೆಳ್ತಂಗಡಿ ಮೂರು ರಸ್ತೆಯಲ್ಲಿ ಸೇರಿದ್ದ ಇನ್ನೂರಕ್ಕೂ ಮಿಕ್ಕಿ ಪ್ರತಿಭಟನಾಕಾರರು ಮುಖ್ಯರಸ್ತೆಯಿಂದಾಗಿ ಸಾಗಿ ತಾಲೂಕು ಕಚೇರಿಯ ಎದುರು ಪ್ರತಿಭಟನೆ ನಡೆಸಿದರು. ಎಸ್‌ಎಫ್‌ಐ ಡಿವೈಎಫ್‌ಐ ಸಂಘಟನೆಗಳ ಕಾರ್ಯಕರ್ತನೂ, ಸಿಪಿಎಂ ನೇತೃತ್ವದ ಆದಿವಾಸಿ ಹಕ್ಕುಗಳ ಸಮನ್ವಯ ಸಮಿತಿಯ ಸದಸ್ಯರಾದ ವಿಠಲ ನಕ್ಸಲ್‌ವಾದದ ಕಡು ವಿರೋಧಿಯಾಗಿದ್ದು, ಆತನನ್ನು ತಪ್ಪಾಗಿ ನಕ್ಸಲೀಯನೆಂದು ಆರೋಪಿಸಲಾಗಿದೆ ಎಂದು ಪ್ರತಿಭಟನೆಯನ್ನುದ್ದೇಶಿಸಿ ಮಾತನಾಡಿದ ಡಿವೈಎಫ್‌ಐ ಜಿಲ್ಲಾಧ್ಯಕ್ಷ ಮುನೀರ್ ಕಾಟಿಪಳ್ಳ ಹೇಳಿದರು. ನಕ್ಸಲ್ ನಿಗ್ರಹ ಪಡೆ ಪಶ್ಚಿಮ ಘಟ್ಟ ಪ್ರದೇಶಗಳಲ್ಲಿ ತಮ್ಮ ಕಾರ್ಯನಿರ್ವಹಣೆಯ ವೈಫಲ್ಯವನ್ನು ಮುಚ್ಚಿ ಹಾಕಲು ಅಮಾಯಕ ಆದಿವಾಸಿ ಮಲೆಕುಡಿಯರನ್ನು ಬಲಿಪಶು ಮಾಡುತ್ತಿದೆ ಎಂದು ಕಟುವಾಗಿ ಖಂಡಿಸಿದರು.

ಪ್ರತಿಭಟನಾಕಾರರನ್ನು ಉದ್ದೇಶಿಸಿ ಆದಿವಾಸಿ ಹಕ್ಕುಗಳ ರಾಜ್ಯಸಮನ್ವಯ ಸಮಿತಿ ಸಂಚಾಲಕ ಭರತ್ ಪಿ.ಆರ್, ಸಿಪಿಎಂ ಮುಖಂಡರಾದ ಶಿವ ಕುಮಾರ್, ಸುಕನ್ಯಾ, ಬಿ.ಎಂ.ಭಟ್ ಮಾತನಾಡಿದರು. ದಲಿತ ಹಾಗೂ ಆದಿವಾಸಿ ಹಕ್ಕು ಸಮಿತಿ ಹಾಗೂ ಡಿವೈಎಫ್‌ಐ ಬೆಳ್ತಂಗಡಿ ತಾಲೂಕು ಮುಖಂಡರಾದ ಶೇಖರ ಲಾಯಿಲ, ವಸಂತ ನಡ, ನಾರಾಯಣ, ಈಶ್ವರಿ, ದಾಮೋದರ ಭಟ್ ಮತ್ತಿತರರು ಪ್ರತಿಭಟನೆಯ ನೇತೃತ್ವ ವಹಿಸಿದ್ದರು.



ವರದಿ : ವಾ.ಉ.



ಅಕ್ಷರ ದಾಸೋಹ ಕಾರ್ಮಿಕರ ವಜಾ ವಿರುದ್ಧ ಬಂಟ್ವಾಳದಲ್ಲಿ ಪ್ರತಿಭಟನೆ

ಅಕ್ಷರ ದಾಸೋಹ ಕೆಲಸಗಾರರನ್ನು ಏಕಾಏಕಿ ಕೆಲಸದಿಂದ ವಜಾ ಮಾಡಿದುದನ್ನು ವಿರೋಧಿಸಿ ಅಕ್ಷರ ದಾಸೋಹ ಕೆಲಸಗಾರರ ಸಂಘ (ಸಿಐಟಿಯು) ಬಂಟ್ವಾಳ ತಾಲೂಕು ಸಮಿತಿ ವತಿಯಿಂದ ಮಾರ್ಚ್ 6ರಂದು ಬಿ.ಸಿ.ರೋಡ್‌ನಲ್ಲಿ ಬಂಟ್ವಾಳ ತಾಲೂಕು ಪಂಚಾಯತಿ ಕಚೇರಿ ಎದುರು ಪ್ರತಿಭಟನೆ ನಡೆಸಲಾಯಿತು.

ತಾಲೂಕಿನ ಬಂಡಿತಡ್ಕ ಶಾಲೆ ಮತ್ತು ಕುದ್ದು ಪದವು ಶಾಲೆಗಳಲ್ಲಿ 2003 ರಿಂದ ಬಿಸಿಯೂಟ ಯೋಜನೆಯಲ್ಲಿ ಕಾರ್ಯನಿರ್ವಹಿಸುತ್ತಿದ್ದ ಪ್ರೇಮಲತಾ ಮತ್ತು ಲತಾ ಎಂಬವರನ್ನು ಮುಖ್ಯೋಪಾಧ್ಯಾಯರು ಮುನ್ಸೂಚನೆ ನೀಡದೆ ಕೆಲಸದಿಂದ ವಜಾ ಮಾಡಿದ್ದರು. ಈ ಬಗ್ಗೆ ತಾ.ಪಂ. ಕಾರ್ಯನಿರ್ವಾಹಣಾಧಿಕಾರಿಗಳಿಗೆ ದೂರು ನೀಡಿದ್ದರೂ ಸ್ಪಂದಿಸದೇ ಇದ್ದ ಹಿನ್ನೆಲೆಯಲ್ಲಿ ಈ ಪ್ರತಿಭಟನೆಯನ್ನು ಹಮ್ಮಿಕೊಳ್ಳಲಾಗಿತ್ತು.

ಸಿಐಟಿಯು ರಾಜ್ಯ ಸಹ ಕಾರ್ಯದರ್ಶಿ ಬಿ.ಎಂ.ಭಟ್, ಜಿಲ್ಲಾಧ್ಯಕ್ಷ ಜೆ.ಬಾಲಕೃಷ್ಣ ಶೆಟ್ಟಿ, ಅಕ್ಷರ ದಾಸೋಹ ನೌಕರ ಸಂಘದ ತಾಲೂಕು ಮುಖಂಡರಾದ ರಾಮಣ್ಣ ವಿಟ್ಲ, ಕಾರ್ಮಿಕ ಮುಖಂಡ ಶೀನ ಬಂಗೇರ ಪ್ರತಿಭಟನೆ ಯನ್ನುದ್ದೇಶಿಸಿ ಮಾತನಾಡಿದರು. ಸಂಘದ ತಾಲೂಕು ಅಧ್ಯಕ್ಷೆ ಸುಂದರಿ ಮಲ್ಲಡ್ಕ, ಕಾರ್ಯದರ್ಶಿ ರೇವತಿ ಕುಲಾಲ್, ಪ್ರೇಮ ವಿಟ್ಲ ಮತ್ತಿತರರು ಪ್ರತಿಭಟನೆಯ ನೇತೃತ್ವ ವಹಿಸಿದ್ದರು.

ವಜಾ ಮಾಡಲಾದ ಮಹಿಳೆಯರಿಗೆ ಕೆಲಸ ನೀಡುವುದಾಗಿ ಭರವಸೆ ದೊರೆತ ಹಿನ್ನೆಲೆಯಲ್ಲಿ ಪ್ರತಿಭಟನೆಯನ್ನು ಹಿಂದಕ್ಕೆ ಪಡೆಯಲಾಯಿತು.



ಪತ್ರಕರ್ತರ ಮೇಲಿನ ಹಲ್ಲೆಗೆ ಸಿಪಿಐ(ಎಂ) ಪ್ರತಿಭಟನೆ

ಬೆಂಗಳೂರು ಸಿಟಿ ಸಿವಿಲ್ ನ್ಯಾಯಾಲಯದ ಸಂಕೀರ್ಣದಲ್ಲಿ ಮಾರ್ಚ್ 2 ರಂದು ಹಲವಾರು ಮಾಧ್ಯಮ ಪ್ರತಿನಿಧಿಗಳ ಮೇಲೆ ನ್ಯಾಯವಾದಿಗಳ ಪೋಷಾಕಿನಲ್ಲಿದ್ದ ಗೂಂಡಾ ಹಲ್ಲೆ ಮಾಡಿದ ವರದಿಗಳು ವಿವಿಧ ದೃಶ್ಯ ಮತ್ತು ಮುದ್ರಣ ಮಾಧ್ಯಮಗಳಲ್ಲಿ ಬಹಿರಂಗವಾಗಿವೆ. ಗೂಂಡಾಪ್ರವೃತ್ತಿಯ ಈ ಹೀನ ಕೃತ್ಯವನ್ನು ಪ್ರತಿಭಟಿಸಿ ಮಾರ್ಚ್ 3 ರಂದು ಮಂಗಳೂರು ಜಿಲ್ಲಾಧಿಕಾರಿ ಕಚೇರಿ ಎದುರು ಸಿಪಿಐ(ಎಂ) ದ.ಕ.ಜಿಲ್ಲಾ ಸಮಿತಿಯ ವತಿಯಿಂದ ಪ್ರತಿಭಟನೆಯನ್ನು ನಡೆಸಲಾಯಿತು. ಗೂಂಡಾಗಿರಿ ವಿರುದ್ಧ ಘೋಷಣೆ ಕೂಗಲಾಯಿತು.

ಪ್ರತಿಭಟನಾಕಾರರನ್ನು ಉದ್ದೇಶಿಸಿ ಮಾತನಾಡಿದ ಜಿಲ್ಲಾ ಸಮಿತಿ ಕಾರ್ಯದರ್ಶಿ ಬಿ.ಮಾಧವ ಮಾತನಾಡಿ, ದೃಶ್ಯ ಮಾಧ್ಯಮದಲ್ಲಿ ಕಾಣಿಸಿಕೊಂಡ ಹಲ್ಲೆಕೋರರನ್ನು ಕೂಡಲೇ ಬಂಧಿಸಬೇಕೆಂದೂ, ನ್ಯಾಯಾಂಗ ತನಿಖೆ ನಡೆಸುವ ಮೂಲಕ ಕಾಲಹರಣ ಮಾಡಕೂಡದೆಂದೂ ಆಗ್ರಹಿಸಿದರು. ಪತ್ರಕರ್ತರ ಮೇಲೆ ನಡೆದ ಹಲ್ಲೆಯು ಪೂರ್ವಯೋಜಿತ ಘಟನೆ ಎಂದೂ, ರಾಜ್ಯದ ಚರಿತ್ರೆಯಲ್ಲೇ ಫ್ಯಾಸಿಸ್ಟ್ ಮಾದರಿಯ ದೌರ್ಜನ್ಯ ನಡೆದಿದೆ ಎಂದೂ ದೂರಿದರು. ಪ್ರತಿಭಟನೆಯನ್ನುದ್ದೇಶಿಸಿ ಇನ್ನೊಬ್ಬ ಹಿರಿಯ ಪಕ್ಷ ಮುಖಂಡ ಕೆ.ಆರ್.ಶ್ರೀಯಾನ್ ಕೂಡಾ ಮಾತನಾಡಿದರು. ಸಿಪಿಐ(ಎಂ) ದ.ಕ.ಜಿಲ್ಲಾ ಕಾರ್ಯದರ್ಶಿ ಮಂಡಳಿ ಸದಸ್ಯರಾದ ಜೆ.ಬಾಲಕೃಷ್ಣ ಶೆಟ್ಟಿ, ಯು.ಬಿ.ಲೋಕಯ್ಯ, ವಸಂತ ಆಚಾರಿ, ಕೃಷ್ಣಪ್ಪ ಸಾಲ್ಯಾನ್, ಯಾದವ ಶೆಟ್ಟಿ, ಸುನಿಲ್ ಕುಮಾರ್ ಬಜಾಲ್ ಅಲ್ಲದೆ ಪಕ್ಷದ ಜಿಲ್ಲಾ ಸಮಿತಿ, ಮಂಗಳೂರು ನಗರ ಸಮಿತಿ ಸದಸ್ಯರೂ ಸೇರಿ ಐವತ್ತಕ್ಕೂ ಹೆಚ್ಚು ಮಂದಿ ಈ ಪ್ರತಿಭಟನೆಯಲ್ಲಿ ಭಾಗವಹಿಸಿದ್ದರು.

ಸ್ವಾತಂತ್ರ್ಯ ಭಾರತ

ಬರೆ ಮುರುಕು ಜೋಪಡಿಯ ಸಾಲುಗಳ ನೋಡಿ
ಭಾರತವು ಬಡ ದೇಶ ಅಂದು ಬಿಡಬೇಡಿ
ಶತಕೋಟಿ ಡಾಲರಿನ ಮನೆ ನೋಡಿ ಬನ್ನಿ
ಮಠ ಗುಡಿಯ ವೈಭವಕ್ಕೆ ಶರಣು ಶರಣನೆನ್ನಿ.

ಮೂರ್ತಿಗಳ ಜಾತಿ

ಲೂಟಿ ಮಾಡಿದ ಹಣದಿ ಕೊಂಡು ಬಂಗಾರ
ಕಲ್ಲು ಬಂಡೆಗೆ ಹಾಕಿ ರಚಿಸುತ್ತ ಹಾರ
ಆ ಕಲ್ಲು ಬಲ್ಲುದೇ ಹಣ ಬಂದ ರೀತಿ?
ಅಂತೆಯೇ ಗುಡಿಯೊಳದ ಮೂರ್ತಿಗಳ ಜಾತಿ.

–ವಿಡಂಬಾರಿ

ಮನೆ ನಿವೇಶನ, ಹಕ್ಕುಪತ್ರಕ್ಕೆ ಆಗ್ರಹಿಸಿ ಬೆಳ್ತಂಗಡಿಯಲ್ಲಿ ಧರಣಿ

ಮನೆ ನಿವೇಶನ, ಹಕ್ಕುಪತ್ರಕ್ಕೆ ಆಗ್ರಹಿಸಿ ಸಿಪಿಐ(ಎಂ) ತಾಲೂಕು ಸಮಿತಿ ನೇತೃತ್ವದಲ್ಲಿ ಮಾರ್ಚ್ 5 ರಂದು ಬೆಳ್ತಂಗಡಿ ತಾಲೂಕು ಕಚೇರಿ ಎದುರು ಧರಣಿ ಸತ್ಯಾಗ್ರಹ ನಡೆಸಲಾಯಿತು. ಬೆಳ್ತಂಗಡಿ ತಾಲೂಕಿನಲ್ಲಿ ನಿವೇಶನ ಹಾಗೂ ಹಕ್ಕುಪತ್ರಗಳಿಗಾಗಿ ಹಲವು ತಿಂಗಳುಗಳಿಂದಲೇ ಬಡ ಜನ ಅರ್ಜಿ ಸಲ್ಲಿಸುತ್ತಿದ್ದರೂ ಏನೊಂದೂ ಕ್ರಮ ಸರಕಾರದ ಕಡೆಯಿಂದ ಆಗದೆ ಇರುವುದನ್ನು ಖಂಡಿಸಿ ಪ್ರತಿಭಟನಾಕಾರರು ಆಕ್ರೋಶ ವ್ಯಕ್ತಪಡಿಸಿದರು.

ಧರಣಿಯ ಬಗ್ಗೆ ಮಾಹಿತಿ ಪಡೆದ ಶಾಸಕ ಕೆ.ವಸಂತ ಬಂಗೇರ ಧರಣಿ ನಿರತರ ಬಳಿಗೆ ಬಂದು ಮಾತುಕತೆ ನಡೆಸಿದರು. ಹಾಗೂ ಸಮಸ್ಯೆಯ ಪರಿಹಾರಕ್ಕೆ ಕ್ರಮ ಕೈಗೊಳ್ಳುತ್ತೇನೆ ಎಂದು ಭರವಸೆ ನೀಡಿದರು. ಬಳಿಕ ಪ್ರತಿಭಟನೆಯನ್ನು ಹಿಂತೆಗೆದುಕೊಳ್ಳಲಾಯಿತು.

ಪ್ರತಿಭಟನೆಯ ನೇತೃತ್ವವನ್ನು ಸಿಪಿಐ(ಎಂ) ತಾಲೂಕು ಕಾರ್ಯದರ್ಶಿ ಎಸ್.ಎಂ. ಶಿವಕುಮಾರ್, ಪಕ್ಷದ ದ.ಕ.ಜಿಲ್ಲಾ ಕಾರ್ಯದರ್ಶಿ ಮಂಡಳಿ ಸದಸ್ಯ ಬಿ.ಎಂ.ಭಟ್ ಅಲ್ಲದೆ ಶೇಖರ ಲಾಯಿಲ, ಜಯರಾಮ್ ಮಯ್ಯ ಮತ್ತಿತರರು ವಹಿಸಿದ್ದರು.


ಜನಶಕ್ತಿ
ಕನ್ನಡ ವಾರಪತ್ರಿಕೆ

ಜನತೆ ಮತ್ತೆ ಚುನಾವಣೆಗಳಲ್ಲಿ ಕಾಂಗ್ರೆಸನ್ನು ಮತ್ತು ಅದರ 'ಆಮ್ ಆದ್ಮಿ' ಪರ ಕಾಳಜಿಗಳ ನಟನೆಯನ್ನು ತಿರಸ್ಕರಿಸಿದ್ದಾರೆ, ಜತೆಗೆ ಬಿಜೆಪಿಯೂ ಭಿನ್ನವೇನಲ್ಲ ಎಂದು ನಿರ್ಧರಿಸಿದ್ದಾರೆ. ತಕ್ಷಣಕ್ಕಂತೂ ಯುಪಿಎ-2 ಸರಕಾರದ ಸ್ಥಿರತೆಗೆ ಬೆದರಿಕೆಯಿಲ್ಲ. ಆದರೂ, ಮುಂಬರುವ ಬಜೆಟ್ ಅಧಿವೇಶನದಲ್ಲಿ ಸಂಸತ್ತಿನಲ್ಲಿ ಯುಪಿಎ-2 ಸರಕಾರದ ಹಾದಿ ಸುಗಮವಾಗಿರುವುದಿಲ್ಲ ಎಂಬುದು ಸ್ಪಷ್ಟ. ಈ ಫಲಿತಾಂಶಗಳಿಂದ ಕಾಂಗ್ರೆಸ್ ನೇತೃತ್ವದ ಯುಪಿಎ-2 ಏನಾದರೂ ಪಾಠ ಕಲಿಯುತ್ತದೆಯೇ ಎಂಬುದೀಗ ಪ್ರಶ್ನೆ. ದುರದೃಷ್ಟವಶಾತ್, ಹಾಗೆ ಕಲಿಯುವ ಲಕ್ಷಣಗಳೇನೂ ಇಲ್ಲ.

ಕಾಂಗ್ರೆಸಿನ 'ಆಮ್ ಆದ್ಮಿ' ನಟನೆಗೆ ಮತದಾರರ ತಿರಸ್ಕಾರ

'ಪೀಪಲ್ಸ್ ಡೆಮಾಕ್ರಸಿ' ವಾರಪತ್ರಿಕೆಯ ಮಾರ್ಚ್ 08, 2012ರ ಸಂಚಿಕೆಯ ಸಂಪಾದಕೀಯ

ಇತ್ತೀಚೆಗೆ ರಾಜ್ಯ ವಿಧಾನ ಸಭೆಗಳಿಗೆ ನಡೆದ ಚುನಾವಣೆಗಳ ಫಲಿತಾಂಶಗಳ ವ್ಯಾಖ್ಯಾನಿಸುವ ಹಾಗೂ ಅವನ್ನು ಗ್ರಹಿಸಲು ಯತ್ನಿಸುವ ವಿಶ್ಲೇಷಣೆಗಳು ದಂಡಿಯಾಗಿ ಬಂದಿವೆ, ಬರುತ್ತಲೇ ಇರುತ್ತವೆ. ಆದರೆ ಇವೆಲ್ಲವುಗಳಲ್ಲೂ ಮೂಡಿ ಬರುವ ಒಂದು ಸಾಮಾನ್ಯ ಅಂಶವೆಂದರೆ, ಜನತೆಯ ನಡುವೆ, ತಮ್ಮ ಮೇಲೆ, ವಿಶೇಷವಾಗಿ ಬೆಲೆಯೇರಿಕೆಗಳ ಮೂಲಕ ಹೇರುತ್ತಲೇ ಇರುವ ಆರ್ಥಿಕ ಹೊರೆಗಳ ಬಗ್ಗೆ ಏರುತ್ತಿರುವ ಅಸಂತುಷ್ಟಿ ಅವರ ಈ ತೀರ್ಪಿನಲ್ಲಿ ಬಿಂಬಿತವಾಗಿದೆ. ಮತದಾರರು ತಮ್ಮ ಶೋಚನೀಯ ಪರಿಸ್ಥಿತಿಗೆ ಕೇಂದ್ರ ಸರಕಾರ ಮತ್ತು ಅದಕ್ಕೆ ನೇತೃತ್ವ ನೀಡುತ್ತಿರುವ ಕಾಂಗ್ರೆಸ್ ಪಕ್ಷವೇ ಹೊಣೆ ಎಂದು ತೀರ್ಪಿತ್ತಿದ್ದಾರೆ.



ಇದು ಸಾಮಾನ್ಯವಾಗಿ ಅಧಿಕಾರಸ್ಥರ-ವಿರುದ್ಧವಾಗಿ ಇರುವ ಭಾವನೆಯ ಪ್ರಯೋಜನವನ್ನು ಕೂಡ ಪಂಜಾಬಿನಲ್ಲಿ ಪಡೆಯಲು ಅದಕ್ಕೆ ಅಡ್ಡಿಯಾದಂತೆ ಕಾಣುತ್ತದೆ. ಉತ್ತರಾಖಂಡದಲ್ಲೂ ಸುಮಾರಾಗಿ ಹೀಗೇ ಆಗಿದೆ; ಕಾಂಗ್ರೆಸ್‌ಗೆ ಈಗ ಅಧಿಕಾರದಲ್ಲಿ ಇರುವ ಬಿಜೆಪಿಗಿಂತ ಕೇವಲ ಒಂದೇ ಸ್ಥಾನ ಹೆಚ್ಚು ಸಿಕ್ಕಿದೆ. ಮಣಿಪುರ ಮಾತ್ರವೇ ಇದಕ್ಕೆ ಏಕೈಕ ಅಪವಾದ. ಆದರೆ ಇದು ಕೂಡ ಬೇರೆ ರಾಜ್ಯಗಳಲ್ಲಿ ವ್ಯಕ್ತಗೊಂಡ ಮತದದಾರರ ವರ್ತನೆಯಲ್ಲಿರುವ ಸಮಾನ ಅಂಶಗಳನ್ನೇನೂ ನಿರಾಕರಿಸುವುದಿಲ್ಲ. ಆ ರಾಜ್ಯದ ಜನತೆಯನ್ನು ಪೀಡಿಸುತ್ತಿರುವ ನಿರ್ದಿಷ್ಟ ಸ್ಥಳೀಯ ಪರಿಸ್ಥಿತಿಗಳಷ್ಟೇ ಅದಕ್ಕೆ ಕಾರಣ ಎನ್ನಬಹುದು.

ಉತ್ತರ ಪ್ರದೇಶದಲ್ಲಿನ ಫಲಿತಾಂಶ ಮುಖ್ಯಮಂತ್ರಿಯಾಗಿ ಮುಲಾಯಂ ಸಿಂಗ್ ಅವರು ವಿಜಯಶಾಲಿಯಾಗಿ ಹಿಂದಿರುಗುವ ಅವಕಾಶ ಮಾಡಿಕೊಟ್ಟಿದೆ. ಸಮಾಜವಾದಿ ಪಕ್ಷದ ಗಮನಾರ್ಹ ವಿಜಯ ಮತದಾರರಲ್ಲಿ ಹೆಚ್ಚುತ್ತಿರುವ ಪ್ರೌಢತೆಗೆ ಸಾಕ್ಷಿ. ಕಳೆದ ಚುನಾವಣೆಗಳಲ್ಲಿ ಅಭೂತಪೂರ್ವ ಜನಾದೇಶ ಪಡೆದ ಬಹುಜನ ಸಮಾಜ ಪಕ್ಷವನ್ನು ರಾಜ್ಯದಲ್ಲಿ ತೊಲಗಿಸಬೇಕು ಎಂಬ ಅಭಿಪ್ರಾಯ ವ್ಯಾಪಕವಾಗಿ ಹರಡಿದ್ದು ಇದರಿಂದ ಸ್ಪಷ್ಟವಾಗುತ್ತದೆ. ಇದನ್ನು ಸಾಧಿಸಲು ಮತದಾರರು, ಚತುಷ್ಕೋಣ ಸ್ಪರ್ಧೆಯಲ್ಲಿ ಸಮಾಜವಾದಿ ಪಕ್ಷಕ್ಕೆ ಅಸಂದಿಗ್ಧ ಜನಾದೇಶ ನೀಡಿ ಅತ್ಯಂತ ಸುರಕ್ಷಿತ ದಾರಿಯನ್ನು ಆರಿಸಿಕೊಂಡಂತಿದೆ. ಇದು, ತ್ರಿಶಂಕು ವಿಧಾನ ಸಭೆ ಬರುತ್ತದೆ, ಇದರಿಂದ ಕೇಂದ್ರ ಮತ್ತು ರಾಜ್ಯದಲ್ಲಿ ಮರುಮೈತ್ರಿಗಳ ಸಾಧ್ಯತೆಗಳನ್ನು ತೆರೆಯಬಹುದು ಎಂಬೆಲ್ಲ ಊಹಾಪೋಹಗಳಿಗೆ ತೆರೆ ಎಳೆದಿದೆ. ಅಂದರೆ, ಉತ್ತರ ಪ್ರದೇಶದ ಮತದಾರರು ಕೊನೆಗೂ ಜಾತಿ, ಕೋಮುಗಳ ಬೇಲಿಗಳನ್ನು ಸ್ವಲ್ಪ ಮಟ್ಟಿಗಾದರೂ ದಾಟಿ ಹೋಗಿದ್ದಾರೆ ಎಂದೇನೂ ಮಾತ್ರ ಹೇಳುವಂತಿಲ್ಲ. ನಿಸ್ಸಂದೇಹವಾಗಿಯೂ ಆಡಳಿತ ಮತ್ತು ಸ್ಥಿರತೆಯ ಪ್ರಶ್ನೆಯೇ ಇಲ್ಲಿ ಮುಖ್ಯವಾಯಿತು. ಇದಕ್ಕೆ ಕಾಂಗ್ರೆಸ್ ಪಕ್ಷದ ಮುಖಂಡರು ತ್ರಿಶಂಕು ವಿಧಾನಸಭೆಯ ಸಂದರ್ಭದಲ್ಲಿ ಚುನಾವಣೋತ್ತರ ಮೈತ್ರಿಗಳ ಬಗ್ಗೆ ಆಗಾಗ ನೀಡಿದ ಪರಸ್ಪರ ವಿರೋಧಾಭಾಸಗಳ ಹೇಳಿಕೆಗಳು ಚೆನ್ನಾಗಿ ನೆರವಿಗೆ ಬಂದವು.

ಬಿಜೆಪಿಯದ್ದೂ ಅದೇ ಸ್ಥಿತಿ

ಬಿಜೆಪಿ ಗೋವಾದಲ್ಲಿ ಒಂದು ಬಲವಾದ ಅಧಿಕಾರಸ್ಥ-ವಿರೋಧಿ ಪ್ರವೃತ್ತಿಯ ಪ್ರಯೋಜನ ಪಡೆಯುವಲ್ಲಿ ಯಶಸ್ವಿಯಾದರೂ, ಬೇರೆ ರಾಜ್ಯಗಳಲ್ಲಿ, ವಿಶೇಷವಾಗಿ ಬಹಳ ಮಹತ್ವದ ಉತ್ತರ ಪ್ರದೇಶದಲ್ಲಿ ಅದರ ಗಳಿಕೆಗಳನ್ನು ನೋಡಿದರೆ, ಆರ್ಥಿಕ ಸಂಕಟಗಳ ಹೊರೆ ಹೊತ್ತಿರುವ ಜನತೆ ಈ ಪಕ್ಷ ಕೂಡ ಕಾಂಗ್ರೆಸಿಗಿಂತ ಏನೇನೂ ಭಿನ್ನವಲ್ಲ ಎಂದು ಕಂಡಿರುವುದು ದೃಢಪಡುತ್ತದೆ. ಆರ್ಥಿಕ ಧೋರಣೆಗಳ ವಿಷಯದಲ್ಲಿ ಬಿಜೆಪಿ ಸಂಸತ್ತಿನಲ್ಲಿ ಕಾಂಗ್ರೆಸ್ ನೇತೃತ್ವದ ಯುಪಿಎ-2 ಸರಕಾರ ತಂದ ಎಲ್ಲ ನವ-ಉದಾರವಾದಿ ಕ್ರಮಗಳನ್ನು ಬೆಂಬಲಿಸಿದೆ. ಭ್ರಷ್ಟಾಚಾರದ ವಿಷಯದಲ್ಲಿ ಬಿಜೆಪಿಯ ವಿಶ್ವಾಸಾರ್ಹತೆ ಕಾಂಗ್ರೆಸಿಗಿಂತ ಭಿನ್ನವಾಗೇನೂ ಇಲ್ಲ ಎಂಬುದನ್ನು ಜನತೆ ಸರಿಯಾಗಿಯೇ ಗ್ರಹಿಸಿದ್ದಾರೆ. ವಿವಿಧ ಭ್ರಷ್ಟಾಚಾರದ ಹಗರಣಗಳಲ್ಲಿ ಅದರ ಮುಖಂಡರ ಮೇಲಿನ ದೋಷಾರೋಪಣೆಗಳು, ವಿಶೇಷವಾಗಿ ಅದರ ರಾಜ್ಯ ಸರಕಾರವಿರುವ ಕರ್ನಾಟಕದಲ್ಲಿನ ಪ್ರಕರಣಗಳು ಅದರ ನೈತಿಕ ಅಧಿಕಾರ ಎಂಬುದನ್ನು ಇನ್ನಿಲ್ಲದಂತೆ ಶಿಥಿಲಗೊಳಿಸಿವೆ. ಈ ವಿಷಯದಲ್ಲೂ ಅದರ ನಟನೆಗಳೆಲ್ಲ ಬಯಲಾಗಿವೆ:

ಆದರೆ, ಆರೆಸ್ಸೆಸ್‌ನ ರಾಜಕೀಯ ಅಂಗವಾದ ಬಿಜೆಪಿ ಪ್ರತಿನಿಧಿಸುವ ಕೋಮುವಾದ ಇದರಿಂದ ಹಿನ್ನೆಲೆಗೆ ಸರಿದಿದೆ ಎಂದು ಭಾವಿಸುವ ಗಂಭೀರ ತಪ್ಪನ್ನು ಮಾಡಬಾರದು. ಕೋಮು ಭಾವೋದ್ವೇಗಗಳನ್ನು ಬಡಿದೆಬ್ಬಿಸುವ ಪ್ರಯತ್ನಗಳು ಮತಗಳಾಗಿ ಪರಿವರ್ತನೆಗೊಳ್ಳುವಲ್ಲಿ ಯಶಸ್ವಿಯಾಗಿಲ್ಲವೆಂದರೆ, ಭವಿಷ್ಯದಲ್ಲಿ ಇನ್ನೂ ಗಂಭೀರ ಸಂಗತಿಗಳು ಕಾದಿವೆ ಎಂಬುದರ ಸೂಚನೆ. ಜನತೆಯ ಹಿತಗಳಿಗೆ ಮತ್ತು ಆಧುನಿಕ ಭಾರತದ ಜಾತ್ಯಾತೀತ ಪ್ರಜಾಸತ್ತಾತ್ಮಕ ಬುನಾದಿಗೆ ಕೇಡು ತರುವ ರೀತಿಯಲ್ಲಿ ಆರೆಸ್ಸೆಸ್/ಬಿಜೆಪಿ ಕೋಮುವಾದಿ ಅಜೆಂಡಾಕ್ಕೆ ಮತ್ತೆ ಜೀವ ತುಂಬುವ ಪ್ರಯತ್ನ ಮಾಡಬಹುದು. ಇಂತಹ ಕೋಮುವಾದ ಧ್ರುವೀಕರಣ ತೀವ್ರಗೊಳ್ಳುವ ಸಾಧ್ಯತೆಯ ಬಗ್ಗೆ ದೇಶ ಮತ್ತು ಜನತೆ ಅದನ್ನೆದುರಿಸಲು ಸಿದ್ಧರಾಗಿರಬೇಕಷ್ಟೇ ಅಲ್ಲ, ಅದನ್ನು ಸೋಲಿಸಲೂ ಎದ್ದು ನಿಲ್ಲಬೇಕು.

ಅಭಿಪ್ರಾಯ ಸಂಗ್ರಹಗಳು ಅದರಲ್ಲೂ ಎಕ್ಸಿಟ್ ಪೋಲ್ ಅಂದರೆ ಮತಗಟ್ಟೆ ಅಭಿಪ್ರಾಯ ಸಂಗ್ರಹ ಎಂಬಂತವುಗಳು ಹೇಗೆ ನಂಬಲನರ್ಹವಾಗಿವೆ ಎಂಬುದನ್ನು ಮತ್ತೊಮ್ಮೆ ಈ ಫಲಿತಾಂಶಗಳು ತೋರಿಸಿ ಕೊಟ್ಟಿವೆ. ಎಕ್ಸಿಟ್ ಪೋಲ್ ಎಂಬುದು ರಂಗಪ್ರವೇಶ ಮಾಡಿದ ಸಮಯದಲ್ಲಿ, ಭಾರತೀಯ ಸನ್ನಿವೇಶದಲ್ಲಿ ಇದು ಉಂಟುಮಾಡಬಹುದಾದ ಗಂಡಾಂತರವನ್ನು ಅದಮ್ಯ ವ್ಯಂಗ್ಯ ಚಿತ್ರಕಾರ ಆರ್.ಕೆ.ಲಕ್ಷ್ಮಣ್ ತನ್ನ ಒಂದು ಕಾರ್ಟೂನಿನಲ್ಲಿ ಚಿತ್ರಿಸಿದ್ದರು. ಗಂಡನೊಬ್ಬ ಮನೆಗೆ ಬಂದು, ತಾನು ಮತಪತ್ರದಲ್ಲಿ(ಆಗಿನ್ನೂ ಮತಯಂತ್ರ ಬಂದಿರಲಿಲ್ಲ) ಬೇರೊಂದು ಚೌಕದಲ್ಲಿ ತಪ್ಪಾಗಿ ಮುದ್ರೆ ಒತ್ತಿದೆ ಎಂದು ಹೆಂಡತಿಗೆ ಹೇಳುತ್ತಾನೆ. ಆದರೆ ಹೊರಗೆ ಬಂದಾಗ ಮತಗಟ್ಟೆಯ ಬಳಿ ಮಾಡುತ್ತಿದ್ದ ಅಭಿಪ್ರಾಯ ಸಂಗ್ರಹದಲ್ಲಿ ಆ ತಪ್ಪನ್ನು ಸರಿಪಡಿಸಿದೆ ಎಂದು ಆಕೆಗೆ ಭರವಸೆ ಕೊಡುತ್ತಾನೆ! ಆದರೆ 'ಕಾಸಿಗಾಗಿ ಸುದ್ದಿ' ವ್ಯಾಪಕವಾಗಿರುವ ಈ ದಿನಗಳಲ್ಲಿ ಈ ಎಕ್ಸಿಟ್ ಪೋಲ್‌ಗಳ ಮೇಲೂ ಅವುಗಳ ಪ್ರಭಾವವಿದೆಯೆ ಎಂದು ತನಿಖೆ ಮಾಡುವುದು ಭಾರತೀಯ ಪ್ರಜಾಪ್ರಭುತ್ವದ ಹಿತದೃಷ್ಟಿಯಿಂದ ಒಳ್ಳೆಯದು.

ಕಾಂಗ್ರೆಸ್/ಯುಪಿಎ ಪಾಠ ಕಲಿಯುತ್ತವೆಯೇ?

ಈಗಿರುವ ಚರ್ಚಾಸ್ಪದ ಪ್ರಶ್ನೆಯೆಂದರೆ, ಈ ಫಲಿತಾಂಶಗಳಿಂದ ಕಾಂಗ್ರೆಸ್ ನೇತೃತ್ವದ

ಪುಟ 12ಕ್ಕೆ......

ಐದು ರಾಜ್ಯಗಳ ವಿಧಾನಸಭಾ ಚುನಾವಣೆ-2012ರ ಫಲಿತಾಂಶದ ಕುರಿತು

ಸಿಪಿಐ(ಎಂ) ಪಾಲಿಟ್ ಬ್ಯೂರೋ

ಉತ್ತರ ಪ್ರದೇಶ, ಪಂಜಾಬ್, ಉತ್ತರಾಖಂಡ್, ಗೋವಾ ಮತ್ತು ಮಣಿಪುರದ ವಿಧಾನಸಭಾ ಚುನಾವಣೆಯ ಒಟ್ಟು ಫಲಿತಾಂಶ ಕಾಂಗ್ರೆಸ್‌ಗೆ ದೊಡ್ಡ ಹಿನ್ನಡೆಯಾಗಿದೆ. ಗೋವಾದಲ್ಲಿ ಕಾಂಗ್ರೆಸ್ ಅಧಿಕಾರವನ್ನು ಕಳೆದುಕೊಂಡಿದೆ. ಪಂಜಾಬ್‌ನಲ್ಲಿ ಜಯ ಗಳಿಸಲು ಅದು ವಿಫಲವಾಗಿದೆ. ಅಕಾಲಿದಳದ ಆಡಳಿತವಿರೋಧಿ ಅಲೆ ಮತ್ತು ಐದು ವರ್ಷಕ್ಕೊಮ್ಮೆ ಸರ್ಕಾರ ಬದಲಾವಣೆಯಾಗುವ ಪರಿಸ್ಥಿತಿಯ ಲಾಭವನ್ನು ಪಡೆದುಕೊಳ್ಳಲು ಅದಕ್ಕೆ ಸಾಧ್ಯವಾಗಿಲ್ಲ.

ಕಾಂಗ್ರೆಸ್‌ನ ಸ್ಥಿತಿ ಉತ್ತರ ಪ್ರದೇಶದಲ್ಲಿ ಅತ್ಯಂತ ದಯನೀಯವಾಗಿದೆ. ಆಡಳಿತ ವಿರೋಧಿ ಅಲೆ ಇರುವ ಉತ್ತರಾಖಂಡ್‌ನಲ್ಲಿ ಒಂದು ಸ್ಥಾನ ಹೆಚ್ಚಿಗೆ ಪಡೆದು ನಿಟ್ಟುಸಿರುಬಿಟ್ಟಿದೆ. ಇದಕ್ಕೆ ಏಕೈಕ ಅಪವಾದವೆಂದರೆ ಮಣಿಪುರದ ಭರ್ಜರಿ ಜಯ. ಆದರೆ ಅಲ್ಲಿನ ನಿರ್ದಿಷ್ಟ ಮತ್ತು ಅಸಾಮಾನ್ಯವಾದ ಪರಿಸ್ಥಿತಿಯ ಕಾರಣದಿಂದಾಗಿ ಗಳಿಸಲಾದ ಈ ವಿಜಯಕ್ಕೆ ವ್ಯಾಪಕವಾದ ಮಹತ್ವವೇನೂ ಇಲ್ಲ.

ಕೇಂದ್ರದ ಕಾಂಗ್ರೆಸ್ ನೇತೃತ್ವದ ಯುಪಿಎ ಸರ್ಕಾರದ ಅವಧಿಯಲ್ಲಿ ನಡೆದ ವ್ಯಾಪಕ ಭ್ರಷ್ಟಾಚಾರ ಮತ್ತು ಬೆಲೆ ಏರಿಕೆಯಿಂದ ಜನ ತತ್ತರಿಸಿ ಹೋಗಿದ್ದಾರೆ. ಅದರ ಎಲ್ಲ ಪರಿಣಾಮ ಈ ಚುನಾವಣೆಯಲ್ಲಿ ಕಂಡಿದೆ.

ಉತ್ತರ ಪ್ರದೇಶದಲ್ಲಿ ಸಮಾಜವಾದಿ ಪಕ್ಷ ನಿಜಕ್ಕೂ ಭರ್ಜರಿ ಜಯವನ್ನು ಸಂಪಾದಿಸಿದೆ. ಇದು ಕೇವಲ ಮಾಯಾವತಿ ಸರ್ಕಾರದ ವಿರುದ್ಧದ ಜನಾದೇಶ ಮಾತ್ರವಲ್ಲ, ಜನ ಬಿಎಸ್‌ಪಿ ಜೊತೆ ಕಾಂಗ್ರೆಸ್ ಹಾಗೂ ಬಿಜೆಪಿಯನ್ನು ತಿರಸ್ಕರಿಸಿದ್ದಾರೆ. ಅದರಲ್ಲೂ ಮುಖ್ಯವಾಗಿ ಬಿಜೆಪಿಯ ಮುನ್ನಡೆಗೆ ಜನತೆ ಅವಕಾಶ ನೀಡಲಿಲ್ಲ.

ಬಿಜೆಪಿಯು ಕಾಂಗ್ರೆಸ್‌ಗೆ ವಿಶ್ವಾಸಾರ್ಹ ಪರ್ಯಾಯವಲ್ಲ ಎಂಬುದನ್ನು ಜನತೆ ನೀಡಿದ ತೀರ್ಪಿನಿಂದ ಸ್ಪಷ್ಟವಾಗಿ ಅರ್ಥವಾಗುತ್ತದೆ. ಉತ್ತರಪ್ರದೇಶದ ಜೊತೆಗೆ ಉತ್ತರಾಖಂಡ್‌ನಲ್ಲಿ ಬಿಜೆಪಿ ದಯನೀಯ ಸೋಲು ಅನುಭವಿಸಿದೆ. ಮತ್ತು ಪಂಜಾಬ್‌ನಲ್ಲಿ ಅದರ ಸಂಖ್ಯಾಬಲದಲ್ಲಿ ಇಳಿಕೆ ಕಂಡಿದೆ.

ಉತ್ತರಪ್ರದೇಶ ಮತ್ತು ಪಂಜಾಬ್‌ನಲ್ಲಿ ಸಿಪಿಐ(ಎಂ)ನ ಸಾಧನೆ ಅತ್ಯಂತ ನಿರಾಶಾದಾಯಕವಾಗಿದೆ. ಈ ಎರಡು ರಾಜ್ಯಗಳಲ್ಲಿ ಪಕ್ಷ ಮತ್ತು ಅದರ ಸಾಮೂಹಿಕ ಸಂಘಟನೆಗಳು ಜನರ ಮಧ್ಯೆ ಇನ್ನಷ್ಟು ಬಲಗೊಳ್ಳಬೇಕು ಎಂಬುದನ್ನು ಈ ಫಲಿತಾಂಶ ಹೇಳುತ್ತಿದೆ.

ಮಳೆಗಾಲದಲ್ಲಿ ಪಶ್ಚಿಮಘಟ್ಟದ ಪರ್ವತ ಶ್ರೇಣಿಗಳಲ್ಲಿ ಸುರಿದು ಸಮುದ್ರ ಸೇರುವ ಹೆಚ್ಚುವರಿ ನೀರನ್ನು ಕರ್ನಾಟಕದ ಬರ ಪೀಡಿತ ಜಿಲ್ಲೆಗಳಿಗೆ ಕುಡಿಯುವ ನೀರು ಮತ್ತು ನೀರಾವರಿ ಸೌಲಭ್ಯಕ್ಕಾಗಿ ಬಳಸಿಕೊಳ್ಳುವ ಮಹತ್ವದ ಯೋಜನೆಗಳನ್ನು ನೀರಾವರಿ ತಜ್ಞ ಡಾ.ಪರಮಶಿವಯ್ಯ ನಾಡಿನ ಮುಂದಿಟ್ಟಿದ್ದಾರೆ. ಪರಿಸರ ಸಂರಕ್ಷಣೆ ಹಾಗೂ ಅಭಿವೃದ್ಧಿ ಯೋಜನೆಗಳ ನಡುವೆ ಸಮತೋಲನ ಕಾಯುವ ಎಚ್ಚರದೊಂದಿಗೆ ನೀರಿಗೆ ಹಾಹಾಕಾರವಿರುವ ಜಿಲ್ಲೆಗಳ ಜನರ ದಾಹವನ್ನು ತೀರಿಸುವ ರಾಜಕೀಯ ಇಚ್ಛಾಶಕ್ತಿಯನ್ನು ನಮ್ಮ ಸರ್ಕಾರಗಳು ತೋರಿಸಬೇಕಿದೆ. ವರದಿಯ ಪ್ರಮುಖ ಅಂಶಗಳ ಸಾರ ಇಲ್ಲಿದೆ.

ಜಿ.ವಿ. ಶ್ರೀರಾಮರೆಡ್ಡಿ

ಶ್ರೀ ಜಿ.ಎಸ್.ಪರಮಶಿವಯ್ಯನವರ ಅಧ್ಯಕ್ಷತೆಯಲ್ಲಿ ಕರ್ನಾಟಕ ರಾಜ್ಯದಲ್ಲಿನ ದಕ್ಷಿಣ ಭಾಗದ ತುಮಕೂರು, ಕೋಲಾರ, ಚಿತ್ರದುರ್ಗ, ಬೆಂಗಳೂರು ಗ್ರಾಮಾಂತರ ಮುಂತಾದ ಬರಪೀಡಿತ ಜಿಲ್ಲೆಗಳಿಗೆ ಕುಡಿಯುವ ನೀರನ್ನು ಹಾಗೂ ಅಂತರ್ಜಲ ಅಭಿವೃದ್ಧಿ ಬಗ್ಗೆ ಅಧ್ಯಯನ ನಡೆಸಲು ಸಮಿತಿಯನ್ನು ಸರ್ಕಾರವು ದಿ: 26-08-2000ರಲ್ಲಿ ರಚಿಸಿತ್ತು. ಈ ಸಮಿತಿಯು 23-3-2001ರಂದು ಪಶ್ಚಿಮಾಭಿಮುಖವಾಗಿ ಹರಿಯುವ ನೇತ್ರಾವತಿ ನದಿಯಿಂದ ಗುರುತ್ವಾಕರ್ಷಣೆಯ ಮೂಲಕ 142 ಟಿಎಂಸಿ ನೀರನ್ನು ಮಾರ್ಗಾಂತರಿಸಿ, ಕುಡಿಯುವ ನೀರು ಮತ್ತು ಅಂತರ್ಜಲ ಅಭಿವೃದ್ಧಿಗಾಗಿ ಉಪಯೋಗಿಸುವ ಬಗ್ಗೆ ವರದಿಯನ್ನು ಸರ್ಕಾರಕ್ಕೆ ಸಲ್ಲಿಸಿತು.

ಈ ಮೇಲ್ಕಂಡ ಯೋಜನೆಯನ್ನು ಶ್ರೀ ಜಿ.ಎಸ್. ಪರಮಶಿವಯ್ಯನವರು ಹಲವಾರು ಬಾರಿ ಮಾರ್ಪಾಡು ಮಾಡಿ ಅಂತಿಮವಾಗಿ ದಿನಾಂಕ :10-09-2004ರಂದು ಸರ್ಕಾರಕ್ಕೆ ಮಾಸ್ಟರ್ ಪ್ಲಾನ್ ವರದಿಯನ್ನು ಸಲ್ಲಿಸಿರುತ್ತಾರೆ. ಮೊದಲನೆಯ ಭಾಗವು ಪಶ್ಚಿಮಾಭಿಮುಖವಾಗಿ ಹರಿಯುವ ನದಿಗಳ ಹೆಚ್ಚುವರಿ ನೀರನ್ನು ತಿರುವು ಯೋಜನೆಗಳ ಮೂಲಕ ಕರ್ನಾಟಕ ರಾಜ್ಯದ ಎಲ್ಲಾ ನಗರ, ಪಟ್ಟಣ ಮತ್ತು ಹಳ್ಳಿಗಳಲ್ಲಿ ಅಂತರ್ಜಲ ಅಭಿವೃದ್ಧಿ ಮತ್ತು ಕುಡಿಯುವ ನೀರು ಒದಗಿಸಲು ಪ್ರಾಥಮಿಕ ಸಾಧ್ಯತಾ ವರದಿಯನ್ನು ಒಳಗೊಂಡಿರುತ್ತದೆ. ಎರಡನೆಯ ಭಾಗವು ಕರ್ನಾಟಕ ರಾಜ್ಯದಲ್ಲಿ ನೀರಾವರಿ ಸೌಲಭ್ಯದ ಅಭಿವೃದ್ಧಿಗಾಗಿ ನೀರನ್ನು ಒದಗಿಸುವ ವರದಿಯನ್ನು ಒಳಗೊಂಡಿರುತ್ತದೆ. ಸದರಿ ಮಾಸ್ಟರ್ ಪ್ಲಾನ್‌ನಲ್ಲಿ ಶ್ರೀ ಜಿ.ಎಸ್. ಪರಮಶಿವಯ್ಯನವರು, 7 ಯೋಜನೆಗಳನ್ನು ಪ್ರಸ್ತಾಪಿಸಿರುತ್ತಾರೆ. ಮಾಸ್ಟರ್ ಪ್ಲಾನ್‌ನಲ್ಲಿ ಸೂಚಿಸಿರುವ ಯೋಜನೆಗಳಲ್ಲಿ ಒಟ್ಟು 3 ಯೋಜನೆಗಳನ್ನು ಮಾತ್ರ ವಿವರವಾದ ಯೋಜನಾ ವರದಿಯನ್ನು ತಯಾರಿಸಲು ಕ್ರಮವನ್ನು ಕೈಗೊಳ್ಳಲಾಗಿದೆ. ಈ 3 ಯೋಜನೆಗಳ ರೂಪರೇಷೆಗಳು ಈ ಕೆಳಕಂಡಂತಿವೆ.

ಯೋಜನಾ ಸಂಖ್ಯೆ : 1

ಈ ಯೋಜನೆಯಡಿಯಲ್ಲಿ 149 ಟಿ.ಎಂ.ಸಿ. ನೀರನ್ನು ನೇತ್ರಾವತಿ ಜಲಾನಯನ ಪ್ರದೇಶ, ಸೀತಾ ಜಲಾನಯನ ಪ್ರದೇಶ ಎಣ್ಣೆಹೊಳೆ ಜಲಾನಯನ ಪ್ರದೇಶಗಳಿಂದ ಬೆಂಗಳೂರು ನಗರ (3 ತಾಲೂಕು), ಬೆಂಗಳೂರು ಗ್ರಾಮಾಂತರ (8 ತಾ:), ತುಮಕೂರು (10 ತಾ:), ಹಾಸನ (4 ತಾ:), ಮಂಡ್ಯ (7 ತಾ:) ಮತ್ತು ಕೋಲಾರ (11 ತಾ:) ಇವುಗಳಿಗೆ ಕುಡಿಯುವ ನೀರು ಹಾಗೂ ಅಂತರ್ಜಲ ಅಭಿವೃದ್ಧಿಗಾಗಿ ನೀರನ್ನು 777 ಕಿ.ಮೀ ಉದ್ದದ ನಾಲಾ ಕಾಲುವೆ ಮೂಲಕ ಬಳಸುವ ಪ್ರಸ್ತಾವನೆ ಇರುತ್ತದೆ. ಈ ನಾಲಾ ಕಾಲುವೆಯ ಪ್ರಾರಂಭಿಕ ಮಟ್ಟ 942.0 ಮೀ. ಗಳಾಗಿರುತ್ತದೆ. ಇದರಲ್ಲಿ 1267 ಕಿ.ಮೀ ಉದ್ದದ ಸೇವಾ ಕಾಲುವೆಯೂ ಸೇರಿದೆ.

ಯೋಜನಾ ಸಂಖ್ಯೆ : 2

ಈ ಯೋಜನೆಯಡಿಯಲ್ಲಿ 86 ಟಿ.ಎಂ.ಸಿ. ನೀರನ್ನು ತುಂಗಾ ಹಾಗೂ ಭದ್ರಾ ಜಲಾನಯನ ಪ್ರದೇಶಗಳಿಂದ ಚಿಕ್ಕಮಗಳೂರು (3 ತಾ:), ಚಿತ್ರದುರ್ಗ (6 ತಾ:), ದಾವಣಗೆರೆ (6 ತಾ:) ಮತ್ತು ಬಳ್ಳಾರಿ (7 ತಾ:) ಇವುಗಳಿಗೆ ಕುಡಿಯುವ ನೀರು ಹಾಗೂ ಅಂತರ್ಜಲ ಅಭಿವೃದ್ಧಿಗಾಗಿ ನೀರನ್ನು 317 ಕಿ.ಮೀ ಉದ್ದದ ಮೇಲ್ಮಟ್ಟದ ಕಾಲುವೆ (HLC) ಮೂಲಕ ಬಳಸುವ ಪ್ರಸ್ತಾವನೆ ಇರುತ್ತದೆ. ಈ ಕಾಲುವೆಯ ಪ್ರಾರಂಭಿಕ ಮಟ್ಟ 808 ಮೀ. ಗಳಾಗಿರುತ್ತದೆ ಹಾಗೂ ನೀರನ್ನು 374 ಕಿ.ಮೀ ಉದ್ದದ ಕೆಳಮಟ್ಟದ ಕಾಲುವೆ (LLC) ಮೂಲಕ ಬಳಸುವ ಪ್ರಸ್ತಾವನೆ ಇರುತ್ತದೆ. ಈ ಕಾಲುವೆಯ ಪ್ರಾರಂಭಿಕ ಮಟ್ಟ 763 ಮೀ. ಗಳಾಗಿರುತ್ತದೆ. ಇದರಲ್ಲಿ 737 ಕಿ.ಮೀ ಉದ್ದದ ಸೇವಾ ಕಾಲುವೆಯೂ ಸೇರಿದೆ.



ಯೋಜನಾ ಸಂಖ್ಯೆ : 3

ಈ ಯೋಜನೆಯಡಿಯಲ್ಲಿ 109 ಟಿ.ಎಂ.ಸಿ. ನೀರನ್ನು ನೇತ್ರಾವತಿ ಜಲಾನಯನ ಪ್ರದೇಶ, ಸೀತಾ ಜಲಾನಯನ ಪ್ರದೇಶ ಹಾಗೂ ಎಣ್ಣೆಹೊಳೆ ಜಲಾನಯನ ಪ್ರದೇಶಗಳಿಂದ ಶಿವಮೊಗ್ಗ (4 ತಾ:), ಹಾವೇರಿ (7 ತಾ:), ಧಾರವಾಡ (6 ತಾ:) ಮತ್ತು ಗದಗ್ (5 ತಾ:) ಇವುಗಳಿಗೆ ಕುಡಿಯುವ ನೀರು ಹಾಗೂ ಅಂತರ್ಜಲ ಅಭಿವೃದ್ಧಿಗಾಗಿ ನೀರನ್ನು 714 + 100 ಕಿ.ಮೀ ಉದ್ದದ ನಾಲಾ ಕಾಲುವೆ ಬಳಸುವ ಪ್ರಸ್ತಾವನೆ ಇರುತ್ತದೆ. ಈ ಕಾಲುವೆಯ ಪ್ರಾರಂಭಿಕ ಮಟ್ಟ 742 ಮೀ. ಗಳಾಗಿರುತ್ತದೆ. ಇದರಲ್ಲಿ 460 ಕಿ.ಮೀ ಉದ್ದದ ಸೇವಾ ಕಾಲುವೆಯೂ ಸೇರಿದೆ.

ಈ 3 ಯೋಜನೆಗಳು ಕಾರ್ಯಗತಗೊಂಡಲ್ಲಿ ಕರ್ನಾಟಕದ 14 ಜಿಲ್ಲೆಗಳಿಗೆ ನಿರಂತರವಾಗಿ ಕುಡಿಯಲು ಹಾಗೂ ಅಂತರ್ಜಲ ಅಭಿವೃದ್ಧಿಗಾಗಿ ನೀರನ್ನು ಒದಗಿಸಬಹುದೆಂಬುದಾಗಿ ಶ್ರೀ ಜಿ.ಎಸ್. ಪರಮಶಿವಯ್ಯನವರು ತಿಳಿಸಿರುತ್ತಾರೆ.

ದಿನಾಂಕ :12-09-03ರಲ್ಲಿ ಪಶ್ಚಿಮ ಘಟ್ಟಗಳಲ್ಲಿ ಬೀಳುವ ಮಳೆ ನೀರನ್ನು ಪೂರ್ವಭಿಮುಖವಾಗಿ ತಿರುಗಿಸುವ ಯೋಜನೆಯ ಪರಿಶೀಲನೆ ಹಾಗೂ ಸಮೀಕ್ಷಾ ಕಾರ್ಯಗಳನ್ನು ಕೈಗೊಳ್ಳಲು ಮೆ : ಎನ್.ಆರ್.ಎಸ್.ಎ. ಸಂಸ್ಥೆ, ಹೈದರಾಬಾದ್ ಇವರೊಂದಿಗೆ ಒಡಂಬಡಿಕೆ ಒಪ್ಪಂದವನ್ನು ಮಾಡಿಕೊಳ್ಳಲಾಗಿದೆ. ಈ ಯೋಜನೆಯ ಸರ್ವೆ ಕಾರ್ಯ ಕೈಗೊಂಡು, ವಿವರವಾದ ಯೋಜನಾ ವರದಿಯನ್ನು ತಯಾರಿಸಲು ಮೂಲ ಅಂದಾಜು ವೆಚ್ಚ ಒಟ್ಟು 15.60 ಕೋಟಿ ರೂ.ಗಳಾಗಿರುತ್ತದೆ.

ಪಶ್ಚಿಮ ಘಟ್ಟಗಳಲ್ಲಿ ಬೀಳುವ ಮಳೆ ನೀರನ್ನು ಪೂರ್ವಭಿಮುಖವಾಗಿ ತಿರುಗಿಸುವ ನಾಲಾ ಕಾಲುವೆಯ ವೈಮಾನಿಕ ಸಮೀಕ್ಷೆ ಕಾರ್ಯವು ಮುಗಿದಿದ್ದು, ಸೇವಾ ಕಾಲುವೆಯ ವೈಮಾನಿಕ ಸಮೀಕ್ಷೆ ಕಾರ್ಯವು ಕೈಗೊಳ್ಳಬೇಕಾಗಿರುತ್ತದೆ.

ಮೆ: ಎನ್.ಆರ್.ಎಸ್.ಎ. ಸಂಸ್ಥೆಯು ಪೂರ್ಣಗೊಳಿಸಿರುವ ಕೆಲಸದ ಐಟಂಗಳಿಗೆ ಕರಾರಿನ ಪ್ರಕಾರ ಈವರೆಗೆ ಒಟ್ಟು ರೂ 657.85 ಲಕ್ಷಗಳನ್ನು ನೀಡಿ. ವರದಿ ಸರ್ಕಾರದ ಬಳಿ ಇರುತ್ತದೆ.

ಶ್ರೀ ಜಿ.ಎಸ್.ಪರಮಶಿವಯ್ಯನವರು ಪ್ರಸ್ತಾಪಿಸಿರುವ ಪಶ್ಚಿಮ ಘಟ್ಟಗಳಲ್ಲಿ ಬೀಳುವ ಮಳೆ ನೀರನ್ನು ಪೂರ್ವಭಿಮುಖವಾಗಿ ತಿರುಗಿಸುವ ಯೋಜನೆಯಡಿ ಲಾಭ ಹೊಂದುವ ಜಿಲ್ಲೆಗಳು ಹಾಗು ತಾಲ್ಲೂಕುಗಳು ಪ್ರತ್ಯೇಕವಾಗಿ ಬಾಕ್ಸ್‌ನಲ್ಲಿ ನೀಡಲಾಗಿದೆ.

ಕ್ರ	ಯೋಜನೆ ಸಂಖ್ಯೆ	ಜಿಲ್ಲೆಯ ಹೆಸರು	ತಾಲ್ಲೂಕಿನ ಹೆಸರು
1	1		ಬೆಂಗಳೂರು ಸಿಟಿ
		ತುಮಕೂರು	ತುಮಕೂರು, ಗುಬ್ಬಿ, ಕುಣಿಗಲ್. ತುರವೇಕೆರೆ, ಚಿಕ್ಕನಾಯಕನಹಳ್ಳಿ, ಮಧುಗಿರಿ, ಕೊರಟಗೆರೆ, ಪಾವಗಡ, ಸಿರ ಮತ್ತು ತಿಪಟೂರು
		ಬೆಂಗಳೂರು ನಗರ	ಬೆಂಗಳೂರು ಉತ್ತರ, ಬೆಂಗಳೂರು ದಕ್ಷಿಣ ಮತ್ತು ಆನೇಕಲ್
		ಬೆಂಗಳೂರು ಗ್ರಾಮಾಂತರ	ನೆಲಮಂಗಲ, ಮಾಗಡಿ, ದೊಡ್ಡಬಳ್ಳಾಪುರ, ದೇವನಹಳ್ಳಿ, ಹೊಸಕೋಟೆ, ಚೆನ್ನಪಟ್ಟಣ, ರಾಮನಗರ ಮತ್ತು ಕನಕಪುರ
		ಹಾಸನ	ಹಾಸನ, ಚನ್ನರಾಯಪಟ್ಟಣ, ಹೊಳೆನರಸೀಪುರ ಮತ್ತು ಅರಸೀಕೆರೆ
		ಮಂಡ್ಯ	ನಾಗಮಂಗಲ, ಮದ್ದೂರು, ಮಂಡ್ಯ, ಕೆ.ಆರ್. ಪೇಟೆ, ಪಾಂಡವಪುರ, ಎಸ್.ಆರ್. ಪಟ್ಟಣ ಮತ್ತು ಮಳವಳ್ಳಿ
		ಕೋಲಾರ	ಕೋಲಾರ, ಬಾಗೇಪಲ್ಲಿ, ಬಂಗಾರಪೇಟೆ, ಚಿಕ್ಕಬಳ್ಳಾಪುರ, ಚಿಂತಾಮಣಿ, ಗೌರಿಬಿದನೂರು, ಗುಡಿಬಂಡೆ, ಮಾಲೂರು, ಮುಳಬಾಗಿಲು, ಶಿಡ್ಲಘಟ್ಟ ಮತ್ತು ಶ್ರೀನಿವಾಸಪುರ
2	2	ಚಿಕ್ಕಮಗಳೂರು	ಚಿಕ್ಕಮಗಳೂರು, ಕಡೂರು ಮತ್ತು ತರಿಕೆರೆ
		ಚಿತ್ರದುರ್ಗ	ಚಿತ್ರದುರ್ಗ, ಚಳ್ಳಕೆರೆ, ಹಿರಿಯೂರು, ಹೊಳಲ್ಕೆರೆ, ಹೊಸದುರ್ಗ ಮತ್ತು ಮೊಳಕಾಲ್ಮೂರು
		ದಾವಣಗೆರೆ	ದಾವಣಗೆರೆ, ಚನ್ನಗಿರಿ, ಹರಪನಹಳ್ಳಿ, ಹರಿಹರ, ಹೊನ್ನಾಳಿ ಮತ್ತು ಜಗಳೂರು
		ಬಳ್ಳಾರಿ	ಬಳ್ಳಾರಿ, ಹಡಗಲಿ, ಹೊಸಪೇಟೆ, ಕೂಡ್ಲಗಿ, ಸಂಡೂರು, ಸಿರಗುಪ್ಪ ಮತ್ತು ಹಗರಿಬೊಮ್ಮನಹಳ್ಳಿ.
3	3	ಶಿವಮೊಗ್ಗ	ಶಿವಮೊಗ್ಗ, ಸಾಗರ, ಸೊರಬಮತ್ತು ಶಿಕಾರಿಪುರ
		ಹಾವೇರಿ	ಹಾವೇರಿ, ಬ್ಯಾಡಗಿ, ಹಾನಗಲ್, ಹಿರೆಕೇರೂರು, ರಾಣಿಬೆನ್ನೂರು, ಸಾವನೂರು ಮತ್ತು ಶಿಗ್ಗಾಂವ್
		ಧಾರವಾಡ	ಧಾರವಾಡ (ನಗರ ಮತ್ತು ಗ್ರಾಮಾಂತರ), ಹುಬ್ಬಳ್ಳಿ, ಕಲಘಟಗಿ, ಕುಂದಗೋಳ್, ಮತ್ತು ನವಲಗುಂದ
		ಗೆದಗ	ಗದಗ, ರೋಣ, ನರಗುಂದ, ಮುಂಡರಗಿ ಮತ್ತು ಶಿರಹಟ್ಟಿ.

ಅಡುಗೆ ಅನಿಲ ಅವ್ಯವಸ್ಥೆಗೆ ಸರ್ಕಾರಗಳೇ ಹೊಣೆ

ಇರಾನಿನಿಂದ ಕೊಳವೇ ಮಾರ್ಗದ ಅಗ್ಗದ ಅನಿಲ ತರುವ ಯೋಜನೆಗೆ ನಮ್ಮ ಸರ್ಕಾರ ಸಿದ್ಧವಿಲ್ಲ. ಅಮೆರಿಕದ ಬಾಲ ಬಡಿಯುವ ಕೆಲಸದಲ್ಲೆ ನಮ್ಮ ಆಳುವ ಜನಕ್ಕೆ ತೃಪ್ತಿ. ದೇಶದಲ್ಲಿರುವ ಅನಿಲ-ತೈಲ ಸಂಪತ್ತನ್ನು ಖಾಸಗಿಯವರಿಗೆ ಒಪ್ಪಿಸುವ ಹಂಬಲ. ಮತ್ತೊಂದೆಡೆ ಸಬ್ಸಿಡಿ ದರದ ಅನಿಲ ಪೂರೈಕೆ ಕಡಿತ ಮಾಡಿ, ದುಬಾರಿ ಖಾಸಗಿ ಅನಿಲ ಕೊಳ್ಳುವಂತೆ ಮಾಡುವ ಸಂಚು.......



ಬಿ.ರಾಜಶೇಖರಮೂರ್ತಿ

ಕಬ್ಬಿನ ರಸ ಹಿಂಡುವ ಯಂತ್ರಗಳಂತೆ ಆಳುವ ಸರ್ಕಾರಗಳು, ಕನಿಷ್ಠ ನಾಗರೀಕ ಸೌಲಭ್ಯಗಳನ್ನು ಒದಗಿಸದೆ ಬಡ - ಮಧ್ಯಮ ವರ್ಗದ ಜನತೆಯನ್ನು ಹಿಂಡುತ್ತಿವೆಂಬುದಕ್ಕೆ ಅಡುಗೆ ಅನಿಲದ ಅವ್ಯವಸ್ಥೆಗೆ ಬಲಿಯಾಗಿ ಪರದಾಡುವ ಜನತೆಯ ಚಿಂತಾಜನಕ ಸ್ಥಿತಿಯೇ ಎತ್ತಿ ತೋರಿಸುತ್ತಿದೆ. ಅನ್ ಲೈನ್ ಬುಕಿಂಗ್, ದಿನದ 24 ಘಂಟೆಯೂ ಅನಿಲವನ್ನು ಬುಕ್ ಮಾಡಬಹುದು. ಬುಕಿಂಗ್, ಮಾಡಿದ 48 ಘಂಟೆಯೊಳಗೆ ಮನೆ ಬಾಗಿಲಿಗೆ ಅನಿಲ ಬಂದು ನಿಲ್ಲುತ್ತದೆಂದು ಘೋಷಿಸಿ ಬಡಜನರ ಕಣ್ಣಿಗೆ ಮಣ್ಣೆರೆಚುವ ಕೆಲಸವನ್ನು ಸರ್ಕಾರಗಳು ಮಾಡುತ್ತಿವೆ ಎಂಬುದಕ್ಕೆ ಸ್ಪಷ್ಟ ಉದಾಹರಣೆಗಳು ನಮ್ಮ ಕಣ್ಣೆದುರಿಗಿವೆ.

ದುರುದ್ದೇಶ

ಅಡುಗೆ ಅನಿಲಕ್ಕಾಗಿ ಬುಕ್ ಮಾಡಿ 15-20 ಧಿವಸವಾದರೂ ಅನಿಲವನ್ನು ಮನೆಗಳಿಗೆ ವಿತರಿಸುವ ಖಾತರಿ ಇಲ್ಲ. ಇದರಿಂದಾಗಿ ದಿನ ಬೆಳಿಗ್ಗೆಯ ದೈನಂದಿನ ಬದುಕಿನ ಕೆಲಸ-ಕಾರ್ಯಗಳನ್ನು ಬಿಟ್ಟು ಅನಿಲ ವಿತಕರ (ಗ್ಯಾಸ್ ಏಜೆನ್ಸಿ) ಹತ್ತಿರ ಅಂಗಲಾಚುವ ಪರಿಸ್ಥಿತಿಯನ್ನು ಸರ್ಕಾರಗಳು ತಂದೊಡ್ಡಿವೆ. ಇಂತಹ ದುಸ್ಥಿತಿಗೆ ಮುಖ್ಯ ಕಾರಣ ಕೇಂದ್ರ-ರಾಜ್ಯ ಸರ್ಕಾರಗಳು ತಮ್ಮ ಬೊಕ್ಕಸದ ಹಣವನ್ನು ಇಚ್ಛಾಶಕ್ತಿಯಿಂದ ವ್ಯಯಿಸದಿರುವುದು. ಖಾಸಗಿ ಕಂಪನಿಗಳಿಗೆ ಲಾಭಕೋರತನಕ್ಕೆ ಅವಕಾಶ ಮಾಡಿ ಕೊಟ್ಟಿರುವುದು. ಉದಾಹರಣೆಗೆ ವಾಣಿಜ್ಯ ಬಳಕೆಯ (Comercial use) ಅನಿಲ ಯಾವಾಗಲೂ ಯಥೇಚ್ಚವಾಗಿ ದೊರಕುವಂತೆ ಕೇಂದ್ರ ಸರ್ಕಾರ ನೊಡಿಕೊಳ್ಳುತ್ತಿದೆ. ಇದಕ್ಕೆ ಮುಖ್ಯ ಕಾರಣವೇನೆಂದರೆ 19 ಕೆ.ಜಿ.ಯ ವಾಣಿಜ್ಯ ಬಳಕೆಯ ಒಂದು ಸಿಲೆಂಡರ್ ಅನಿಲಕ್ಕೆ ರೂ.1,634.50ಪೈಸೆ. ಅದೇ ರೀತಿಯಲ್ಲಿನ ವಾಣಿಜ್ಯ ಬಳಕೆಯ 5 ಕೆ.ಜಿ. ಯ ಒಂದು ಸಿಲೆಂಡರ್ ಅನಿಲಕ್ಕೆ ರೂ. 440.50 ಪೈಸೆ. ಅದೇ ರೀತಿಯಲ್ಲಿ ಅಟೋ ಅನಿಲ (ಎಲ್.ಪಿ.ಜಿ.)ದ ಒಂದು ಲೀಟರ್‌ಗೆ ರೂ.48.88 ಪೈಸೆ. (ಈ ಮೇಲಿನ ಮೂರು ರೀತಿಯ ಅನಿಲಗಳ ಬೆಲೆ ಈಗಿನ ದರ, ಪ್ರತಿ ತಿಂಗಳ ಮೊದಲ ತಾರೀಖಿನಂದು ದರ ಏರಿಕೆಯಾಗುತ್ತಿರುತ್ತದೆ.) ಇಷ್ಟೊಂದು ದುಬಾರಿ ವಾಣಿಜ್ಯ ಬಳಕೆಯ ಅನಿಲ ಪೂರೈಕೆಗೆ ಕೇಂದ್ರ-ರಾಜ್ಯ ಸರ್ಕಾರಗಳು ಯಾವುದೇ ಸಬ್ಸಿಡಿಯನ್ನು ನೀಡುವುದಿಲ್ಲ. ಬದಲಿಗೆ ಪ್ರತಿದಿನ ಕೋಟಿಗಟ್ಟಲೆ ವಾಣಿಜ್ಯ ಅನಿಲಗಳಿಂದ ಹಣ ಲಾಭವಾಗಿ ಬರುತ್ತಿದೆ. ಆದರೆ 14.05 ಕೆ.ಜಿ.ಯ ಒಂದು ಅಡುಗೆ ಅನಿಲ ಸಿಲೆಂಡರ್ ರೂ. 415.00 ಇದು ಎಲ್ಲರಿಗೂ ದೊರೆಯಬೇಕಿದ್ದು, ಇದಕ್ಕೆ ಕೇಂದ್ರಸರ್ಕಾರ ಪ್ರತಿ ದಿನ ನೂರಾರು ಕೋಟಿ ಹಣವನ್ನು ತನ್ನ ಸ್ವಾಮ್ಯದಲ್ಲೆ ಇರುವ ಆಯಿಲ್ ಕಂಪನಿಗಳಿಗೆ (ಇಂಡೇನ್, ಎಚ್.ಪಿ. ಭಾರತ್ ಗ್ಯಾಸ್) ನೀಡಬೇಕಿದೆ. ಈ ರೀತಿಯಲ್ಲಿ ಕೇಂದ್ರ ಸರ್ಕಾರದ ಬೊಕ್ಕಸದಿಂದ ಹಣ ವ್ಯಯಿಸುವ ಬದಲಾಗಿ ವರ್ಷದಲ್ಲಿ 3-4 ಬಾರಿ ಅಡುಗೆ ಅನಿಲದ ದರ ಏರಿಸುವುದು. ಸಬ್ಸಿಡಿ ನೀಡಿ ಸರಬರಾಜು ಮಾಡಬೇಕಿರುವ ಅಡುಗೆ ಅನಿಲ ಸರಬರಾಜನ್ನು ಉದ್ದೇಶ ಪೂರಕವಾಗಿ ತಡೆ ಹಿಡಿಯುವುದು. ಲಾಭ ತಂದು ಕೊಡುವ ವಾಣಿಜ್ಯ ಬಳಕೆಯ ಅನಿಲವನ್ನು ಯಥೇಚ್ಛವಾಗಿ ಸರಬರಾಜು ಆಗುವಂತೆ ನೋಡಿಕೊಳ್ಳುವುದು ಮಾಡಲಾಗುತ್ತಿದೆ.

ಭಾರತ್ ಗ್ಯಾಸ್, ಹೆಚ್.ಪಿ., ಇಡೇನ್ ಎಂಬ ಗ್ಯಾಸ್ ಕೇಂದ್ರ ಸರ್ಕಾರದ ಸ್ವಾಮ್ಯದಲ್ಲಿಲ್ಲ, ಇರುವ ಕಂಪನಿಗಳ ಸಬ್ಸಿಡಿ ಹಣವನ್ನು ನೂರಾರು ಕೋಟಿ ಬಾಕಿ ಉಳಿಸಿಕೊಂಡಿದೆ. ಇಂತಹ ಸಂದರ್ಭದಲ್ಲಿ ಅಗತ್ಯಕ್ಕೆ ತಕ್ಕಂತೆ ಸಬ್ಸಿಡಿ ದರದಲ್ಲಿನ ಅಡುಗೆ ಅನಿಲವನ್ನೂ ಪೂರೈಸಿದರೆ ಇನ್ನೂ ನೂರಾರು ಕೋಟಿ ಹಣವನ್ನು ಕೇಂದ್ರ ಸರ್ಕಾರ ಭರಿಸಬೇಕಿದೆ. ಆದ್ದರಿಂದ ವಾಣಿಜ್ಯ ಪೂರಕ ಅನಿಲವನ್ನು ಯಥೇಚ್ಛವಾಗಿ ಸರಬರಾಜು ಮಾಡಿಕೊಂಡು ಸಬ್ಸಿಡಿ ಅಡುಗೆ ಅನಿಲವನ್ನು ಭಾರತ್ ಗ್ಯಾಸ್, ಎಚ್.ಪಿ. ಇಂಡೀನ್ ಕಂಪನಿಗಳಿಂದಲೇ ಮಿತವಾಗಿ ಸರಬರಾಜು ಆಗುವಂತೆ ವ್ಯವಸ್ಥಿತವಾಗಿ ನೋಡಿಕೊಳ್ಳಲಾಗುತ್ತಿದೆ. ಹೀಗಾಗಿ ಅನಿಲ ವಿತರಕ ಹತ್ತಿರ ಹೋಗಿ ನಮ್ಮ ಅನಿಲ ಬುಕಿಂಗ್ ಹಾಗಿದೆ ಬುಕಿಂಗ್ ಸಂಖ್ಯೆ ನಮ್ಮಲ್ಲಿದೆ ನೋಡಿ ಎಂದು ಕೇಳಿದರೆ ಹೌದು ಅನ್‌ಲೈನ್ ಮುಖಾಂತರ ಆಗಿದೆ. ಆದರೆ ಅನಿಲ ನಿಮ್ಮ ಹೆಸರಿನಲ್ಲಿ ಕಂಪನಿಯಿಂದ ಸರಬರಾಜು ಆಗಿಲ್ಲವೆಂದು ಗ್ರಾಹಕರನ್ನು ಒಂದಿರುಗಿಸುತ್ತಿದ್ದಾರೆ. ವಾಣಿಜ್ಯ ಪೂರಕ ಅನಿಲ ಇದೆ. ದರ ಹೆಚ್ಚಿದೆ. ಬೇಕಿದ್ದರೆ ಪಡೆಯಿರಿ ಕೊಡುತ್ತೇವೆಂದು ಬಹುತೇಕ ಅನಿಲ ವಿತರಕರು ಹೇಳುತ್ತಿದ್ದಾರೆ.

ಮುಷ್ಕರ ನೆಪ

ಈ ರೀತಿಯಾಗಿ ಕೇಂದ್ರ ಸರ್ಕಾರವೇ ತನಗೆ ಲಾಭ ಇರುವ ವಾಣಿಜ್ಯ ಪೂರಕ ಅನಿಲಗಳನ್ನು ಯಥೇಚ್ಛವಾಗಿ ಸರಬರಾಜು ಮಾಡಿ ಅಡುಗೆ ಅನಿಲ ಪೂರೈಕೆಯನ್ನು ಮಿತಗೊಳಿಸಿದೆ. ಇದನ್ನು ಮರೆ ಮಾಚಲು ಎಲ್.ಪಿ.ಜಿ: ಸಾಗಿಸುವ ಟ್ಯಾಂಕರ್‌ಗಳ ಮಾಲೀಕರ, ಲಾರಿಗಳ, ಕಾರ್ಮಿಕರ ಮುಷ್ಕರಗಳಿಂದಾಗಿ ಅನಿಲ ಕೊರತೆ ಎಂದು ಮಾಧ್ಯಮಗಳು ಜನತೆಯನ್ನು ವಂಚಿಸುತ್ತಿವೆ. ವಾಸ್ತವವಾಗಿ ಇಡೀ ಏಷ್ಯ ಖಂಡದಲೇ ಎರಡನೇಯ ದೊಡ್ಡ ಅನಿಲ ಬಾಟ್ಲಲಿಂಗ್ ಪ್ಲಾಟ್ ಎಂದು ಹಿರಿಮೆ ಹೊಂದಿರುವ ಇಂಡಿಯನ್ ಕಂಪನಿಯ ಅನಿಲ ಸರಬರಾಜು ಆಗುವುದು ಲಾರಿಗಳ ಟ್ಯಾಂಕರ್‌ನಿಂದಲ್ಲ. ಬದಲಿಗೆ ರೈಲ್ವೆ ಟ್ಯಾಂಕರ್‌ಗಳಿಂದ. ಇನ್ನುಳಿದ ಹೆಚ್.ಪಿ. ಮತ್ತು ಭಾರತ್ ಗ್ಯಾಸ್ ಕಂಪನಿಯ ಅನಿಲವನ್ನು ಲಾರಿ ಟ್ಯಾಂಕರ್ಸ್ ಮುಖಾಂತರವೇ ಬರುವುದಾದರೂ ಟ್ಯಾಂಕರ್ಸ್ ಮಾಲೀಕರು ಮುಷ್ಕರ ಹೂಡುವ ಮೊದಲೇ ಕೇಂದ್ರ ಸರ್ಕಾರಕ್ಕೆ ಸಂಬಂಧ ಪಟ್ಟ ಕಂಪನಿಗಳೇ ತಮ್ಮ ಬೇಡಿಕೆಗಳನ್ವಯ ಮುಷ್ಕರದೆಳೆಯನ್ನು ಸೂಚಿಸುತ್ತಿರುತ್ತಾರೆ. ಇದಕ್ಕೆ ನಾಗರೀಕ ಸೇವೆಗಳ ಕಾನೂನು-ಕಾಯ್ದೆಗಳನ್ವಯವೇ ಮುಷ್ಕರ ಇತ್ಯಾದಿಯನ್ನು ಎಲ್ಲರೂ ಪಾಲಿಸಬೇಕಾಗಿರುತ್ತದೆ. ಹೀಗಿರುವಾಗ ಟ್ಯಾಂಕರ್‌ಗಳ ಮಾಲೀಕರು ಮುಷ್ಕರಕ್ಕೆ ಇಳಿಯುವ ಪೂರ್ವದಲ್ಲಿ ಕೇಂದ್ರ ಸರ್ಕಾರಕ್ಕೆ ಸಾಮಾನ್ಯ ಜನತೆಯ ಮೇಲೆ ಕಾಳಜಿ ಇದ್ದಲ್ಲಿ ಮುಂಗಡ ಸರಬರಾಜು ಮಾಡಿಸಿಕೊಳ್ಳಬೇಕು. ಇದು ಸಾಧ್ಯವಿದೆ ಎಂದು ಪರಿಣಿತರು ಹೇಳುತ್ತಾರೆ. ಜೊತೆಗೆ ನಾಗರಿಕರ ದೈನಂದಿನ ಜೀವನವಶ್ಯಕ ವಿಷಯವಾದ್ದರಿಂದ ಸರ್ಕಾರಗಳು ಮುನ್ನೆಚ್ಚರಿಕೆಯ ಕ್ರಮವನ್ನು ತೆಗೆದುಕೊಳ್ಳ ಬೇಕಾಗುತ್ತದೆ. ಇಂತಹ ಜವಾಬ್ದಾರಿಯನ್ನು ನಿರ್ವಹಿಸದೆ ತನ್ನ ಬೊಕ್ಕಸಕ್ಕೆ ನಷ್ಟ ಉಂಟಾಗುವ ಸಬ್ಸಿಡಿ ದರ ಅಡುಗೆ ಅನಿಲವನ್ನು ಮಿತಿಗೊಳಿಸಿ, ದುಬಾರಿ ಬೆಲೆಯ ಪೂರಕ ಅನಿಲವನ್ನು ಯಥೇಚ್ಛಗೊಳಿಸಿ ಮುಂಗಡ ದರ ಅನಿಲ ದರದ ಅನಿಲವನ್ನು ಬಳಸಿ ಎಂದು ಸಕಾರಗಳು ಜನತೆಯನ್ನು ಕೇಳುತ್ತಿವೆ. ಅನಿಲ ವಿತರಕರಿಗೆ ಸಿಲಿಂಡರ್‌ಗಳನ್ನು ಸರಬರಾಜು ಮಾಡುವ ಲಾರಿಗಳು ಮುಷ್ಕರ ಹೂಡುವ ಪ್ರಶ್ನೆಯೇ ಇಲ್ಲ. ಯಾಕೆಂದರೆ ನಾಗರಿಕರ ಸೇವೆಯ ಕಾಯ್ದೆ ಅನ್ವಯ ಟೆಂಡರ್ ಸಂಬಂಧದಲ್ಲೆ ಯಾವುದೇ ಕಾರಣ ಅನಿಲ ಸರಬರಾಜು ಮಾಡುವ ಲಾರಿಗಳ ಮುಷ್ಕರ ಹೂಡುವುದಿಲ್ಲ ಎಂದೂ ಒಪ್ಪಿ ಟೆಂಡರ್ ಪಡೆದಿರುತ್ತವೆ. ಇಂತಹ ಅವ್ಯವಸ್ಥೆಯ ಅಗರದಲ್ಲಿರುವ ಜನತೆಗೆ ಬಡ ಜನರನ್ನು ದ್ವೇಷಿಸುವಂತಹ ಬಿಜೆಪಿ ಸರ್ಕಾರ ಅನಿಲ ಅಡುಗೆ ಬಳಸುವ ಎಲ್ಲಾ ತಾವು ವಾಸಿಸುವ ಮನೆ, ವಿದ್ಯುತ್ತಿನ ಆರ್.ಆರ್. ಸಂಖ್ಯೆ ಗುರುತಿನ ಚೀಟಿ ಇತ್ಯಾದಿ ಕೊಟ್ಟರೆ ಮಾತ್ರ ಎಂದು ತಾಕೀತು ಹೊರಡಿಸಿತ್ತು.

ಅಡುಗೆ ಅನಿಲ ಬಳಸುವ ಎಲ್ಲರೂ ದಾಖಲಾತಿಗಳನ್ನು ಒದಗಿಸಿ ಬಂದಿದ್ದರು, ಇವುಗಳನ್ನು ಕ್ರಮವಾಗಿ ಪರಿಶೀಲಿಸಿ ಹೊಂದಿಸಿಕೊಳ್ಳದೆ ರಾಜ್ಯ ಸರ್ಕಾರ ನಿರ್ಲಕ್ಷ್ಯ ತೋರಿದೆ.

ಬೇಸತ್ತ ಜನ

ಹೀಗಾಗಿ 20-30 ದಿವಸ ಕಾಯ್ದು ಅನಿಲಕ್ಕಾಗಿ ಗ್ಯಾಸ್ ವಿತರಕರ ಹತ್ತಿರ ಹೋಗಿ ಗ್ರಾಹಕರು ನಮ್ಮ ಅಡುಗೆ ಅನಿಲ ಕೊಡಿ ಎಂದರೆ ನೀವೂ ಅಹಾರ ಸರಬರಾಜು ಇಲಾಖೆಗೆ ಹೋಗಿ ಅವರು ಕೇಳಿದ ದಾಖಲೆಗಳನ್ನು ಕೊಟ್ಟು ರಸೀದಿ ತನ್ನಿ. ಅದರ ಜೊತೆಗೆ ದಾಖಲೆಗಳ ಜೆರಾಕ್ಸ್ ತನ್ನಿ ನಂತರ ಗ್ಯಾಸ್ ಪಡೆಯಿರಿ ಎಂದು ಅನಿಲ ವಿತರಕರು ಸತಾಯಿಸುತ್ತಿದ್ದಾರೆ. ಇಂತಹ ಹೊಯ್ದಾಟದಲ್ಲಿ ಬೆಂದು ಬೇಸತ್ತ ಜನ ಸರ್ಕಾರಗಳಿಗೆ ಛೀಮಾರಿ ಹಾಕುತ್ತಿದ್ದಾರೆ. ಈ ಛೀಮಾರಿಯು ನೊಂದ ಜನತೆಯಲ್ಲಿ ಐಕ್ಯತೆ ಮೂಡಿಸಿ ಆಳುವ ಸರ್ಕಾರಗಳ ಪ್ರತಿನಿಧಿಗಳ ನೀತಿಗಳನ್ನು ಬಯಲಿಗೆಳೆಯಬೇಕು. ಹಾಗಾಗಬೇಕಾದರೆ ಪ್ರಗತಿಪರ-ಜನಪರ ಪ್ರಜಾಸತ್ತಾತ್ಮಕ ಸಂಘಟನೆಗಳು ಜವಾಬ್ದಾರಿ ನಿರ್ವಹಿಸಬೇಕಾಗುತ್ತದೆ.

ಕಾಂ.ಸವರಿದಾಸ್ ಇನ್ನಿಲ್ಲ

ಪುಟ 2 ರಿಂದ......

1951ರಲ್ಲಿ ನಂದಿದುರ್ಗ ಮೈನ್ಸ್‌ನಲ್ಲಿ ಬೆಂಕಿ ಆಕಸ್ಮಿಕದ ನೆಪದಲ್ಲಿ ಪಿತೂರಿಕೇಸ್ ಹಾಕಿ ವಾಸನ್, ಗೋವಿಂದನ್, ಕಾನರಸಿಂಹನ್, ಮತ್ತಿತರ ಜೊತೆಗೆ ಸವರಿ ದಾಸ್‌ರವರನ್ನು 6 ತಿಂಗಳು ಜೈಲಿಗಟ್ಟಲಾಯಿತು.

ಪಕ್ಷದ ಸಂಘಟನಾ ಜವಾಬ್ದಾರಿಗಳು

1952ರಲ್ಲಿ ಅವರಿಗೆ ಪಕ್ಷದ ಕೆಜಿಎಫ್ ಸಮಿತಿ ಕಾರ್ಯದರ್ಶಿಯಾಗಿದ್ದ ಕಾವಜ್ರವೇಲು ಚೆಟ್ಟಿಯಾರ್ ಚುನಾವಣೆಯಲ್ಲಿ ಸ್ಪರ್ಧಿಸಲು ಆಂಧ್ರದ ಕುಪ್ಪಂಗೆ ಹೋಗಬೇಕಾಗಿ ಬಂತು. ಆಗ ಸವರಿದಾಸ್ ಕೆಜಿಎಫ್ ಕಮಿಟಿ ಕಾರ್ಯದರ್ಶಿಯಾದರು. 1964 ಡಿಸೆಂಬರ್ 29 ರಂದು ಅವರನ್ನು ಮತ್ತೆ ಬಂಧಿಸಿ ಬಿಜಾಪುರ ಜಿಲ್ಲೆಯಲ್ಲಿ 18 ತಿಂಗಳ ಕಾಲ ಇಡಲಾಯಿತು. 3 ತಿಂಗಳು ವಾಣಿಯಂಬಾಡಿ ಜೈಲಿನಲ್ಲಿ ಭಯಂಕರ ಕ್ರಿಮಿನಲ್ ಕೈದಿಗಳೊಂದಿಗೆ ಕಳೆಯಬೇಕಾಗಿ ಬಂತು.

ಅವರು ಅವಿಭಜಿತ ಕಮ್ಯುನಿಸ್ಟ್ ಪಕ್ಷದ ರಾಜ್ಯಸಮಿತಿ ಸದಸ್ಯರಾಗಿಯೂ ಕೋಲಾರ ಜಿಲ್ಲಾ ಸಮಿತಿ ಕಾರ್ಯದರ್ಶಿಯಾಗಿಯೂ ಕಾರ್ಯನಿರ್ವಹಿಸಿದ್ದಾರೆ.

ಕೋಲಾರ ಜಿಲ್ಲೆಯಲ್ಲಿ ಹಲವಾರು ಯೂನಿಯನ್‌ಗಳನ್ನು ಸಂಘಟಿಸಿ, ರೈತ ಸಂಘಟನೆಯನ್ನು ಕಟ್ಟಿ ಪಕ್ಷವನ್ನು ಜಿಲ್ಲೆಯಾದ್ಯಂತ ವಿಸ್ತರಿಸಲು ಶ್ರಮಿಸಿದ್ದಾರೆ.

ಪರಿಷ್ಕರಣವಾದದ ವಿರುದ್ಧ......

ಪಕ್ಷದೊಳಗೆ ಪರಿಷ್ಕರಣವಾದದ ವಿರುದ್ಧದ ಹೋರಾಟದಲ್ಲಿ ದೃಢವಾಗಿ ನಿಂತವರಲ್ಲಿ ಕಾ। ಸವರಿದಾಸ್ ಕೂಡಾ ಒಬ್ಬರು. ಸಿಪಿಐ(ಎಂ) ಪಕ್ಷವನ್ನು ಕರ್ನಾಟಕದಲ್ಲಿ ಕಟ್ಟಲು ಶ್ರಮಿಸಿದ ಹಿರಿಯರಲ್ಲಿ ಕಾ.ಸವರಿದಾಸ್ ಕೂಡಾ ಒಬ್ಬರಾಗಿದ್ದಾರೆ.

ನಂತರ 1970ನೇ ಇಸವಿಯಲ್ಲಿ ಮತ್ತೆ ಪಕ್ಷ ಅವರನ್ನು ಕೆಜಿಎಫ್‌ಗೆ ಕರೆಸಿಕೊಂಡಾಗ ಕಾಟಿ.ಎಸ್. ಮಣಿ ಯವರ ಜೊತೆಗೂಡಿ ಪಕ್ಷವನ್ನು ಮುನ್ನಡೆಸಿದ್ದಲ್ಲದೆ ಬಿಜಿಎಂಎಲ್ ಸಿಐಟಿಯು ಯೂನಿಯನ್‌ನ ಅಧ್ಯಕ್ಷರಾಗಿ ದುಡಿದರು. 1980ರಲ್ಲಿ ಬಿಜಿಎಂಎಲ್‌ನ ಒಂದೇ ಯೂನಿಯನ್‌ಗಾಗಿ ನಡೆದ ಚುನಾವಣೆಯಲ್ಲಿ ಸಿಐಟಿಯು ಜಯಗಳಿಸಿದಾಗ ಅದರ ಪ್ರಧಾನ ಕಾರ್ಯದರ್ಶಿಯಾದರು.

ಅವಿಭಜಿತ ಕೋಲಾರ ಜಿಲ್ಲೆಯಲ್ಲಿ ಹಲವಾರು ಕಾರ್ಮಿಕ ಸಂಘಗಳನ್ನು ಸಂಘಟಿಸಿ ಅದರ ಅಧ್ಯಕ್ಷರಾಗಿ ದುಡಿದರು, ಬಿಇಎಂಇಎ ಯ ಸ್ಥಾಪನೆಗೆ ಮಾರ್ಗದರ್ಶನ ನೀಡಿದ ಮುಖಂಡರಲ್ಲಿ ಕಾಸವರಿದಾಸ್ ರವರೂ ಒಬ್ಬರಾಗಿದ್ದಾರೆ.

ಬಿಜಿಎಂಎಲ್‌ನ್ನು ರೋಗಗ್ರಸ್ತಗೊಳಿಸಿ ಕೇಂದ್ರ ಸರ್ಕಾರ ಗಣಿಯನ್ನು ಮುಚ್ಚುವ ತೀರ್ಮಾನ ತೆಗೆದುಕೊಂಡಾಗ ಇಲ್ಲಿದ್ದ ಎಲ್ಲ ಕಾರ್ಮಿಕ ಸಂಘಗಳನ್ನು ಒಂದು ಗೂಡಿಸಿ ಕಾಮಣಿ ಯವರ ನೇತೃತ್ವದಲ್ಲಿ "ಸೇವ್ ಕೆಜಿಎಫ್ ಕಮಿಟಿ"ಯನ್ನು ಸಂಘಟಿಸಿದರು. ಈ ಕಮಿಟಿಯ ಮೂಲಕ ಪ್ರಬಲವಾದ ಹೋರಾಟವನ್ನು ನಡೆಸಲಾಯಿತು.

ಕಾರ್ಮಿಕ ನಾಯಕರಾಗಿ

ಇದಲ್ಲದೆ ಮುನ್ಸಿಪಲ್ ವರ್ಕರ್ಸ್ ಯೂನಿಯನ್, ಬಿಜಿಎಂಎಲ್ ಹಾಸ್ಪಿಟಲ್ ವರ್ಕರ್ಸ್ ಯೂನಿಯನ್, ಕೆಜಿಎಫ್ ಇಂಡಸ್ಟ್ರಿಯಲ್ ಎಸ್ಟೇಟ್ ವರ್ಕರ್ಸ್ ಯೂನಿಯನ್‌ಗಳ ಅಧ್ಯಕ್ಷರಾಗಿ ದುಡಿದರು. ಬಿಇಎಂಎಲ್ ಕಾಂಟ್ರಾಕ್ಟ್ ವರ್ಕರ್ಸ್ ಯೂನಿಯನ್ ನನ್ನು ಸಂಘಟಿಸಿ ಅವರಿಗೆ ಶಾಶ್ವತವಾದ ಹಲವಾರು ಸೌಲಭ್ಯಗಳನ್ನು ದೊರಕಿಸಿಕೊಟ್ಟರು. ಕೋಲಾರ ಜಿಲ್ಲೆಯ ಬೀಡಿ ಕಾರ್ಮಿಕ ಸಂಘಟನೆಯ ಅಧ್ಯಕ್ಷರಾಗಿಯೂ ಕಾರ್ಯನಿರ್ವಹಿಸಿದರು.

ಮುನಿಸಿಪಲ್ ಕೌನ್ಸಿಲರ್ ಆಗಿ

1976 ರಲ್ಲಿ ಮತ್ತು 2006 ರಲ್ಲಿ ಕೆಜಿಎಫ್ ಮುನ್ಸಿಪಲ್ ಕೌನ್ಸಿಲರ್ ಆಗಿ ಈ ಪ್ರದೇಶದ ಅಭಿವೃದ್ಧಿಗಾಗಿ ಶ್ರಮಿಸಿದರು.

ಜನಾನುರಾಗಿಯಾಗಿದ್ದ ಅವರು ಎಲ್ಲಾ ರಾಜಕೀಯ ಪಕ್ಷಗಳ ಮುಖಂಡರು ಗೌರವಿಸುವ ಸ್ನೇಹ ಜೀವಿಯಾಗಿದ್ದರು. ಹೀಗೆ ತಮ್ಮ 90 ವಯಸ್ಸಿನ ವರೆಗೆ ಅವಿರತವಾಗಿ ಕಾರ್ಮಿಕ ಚಳುವಳಿಯ ನೇತಾರನಾಗಿ ದುಡಿದ ಅವರ ಚಟುವಟಿಕೆಗಳು ಕಳೆದ ಮೂರು ವರ್ಷಗಳಿಂದ ಮೀರಿದ ವಯಸ್ಸಿನ ಕಾರಣದಿಂದಾಗಿ ಸ್ಥಗಿತಗೊಂಡಿತು. ತಮ್ಮ ಜೀವನದ ಕೊನೆಯವರೆಗೂ ಸದಾ ಕಾರ್ಮಿಕರ ಬಗ್ಗೆ ಕಮ್ಯುನಿಸ್ಟ್ ಚಳವಳಿಯ ಬಗ್ಗೆ ತೀವ್ರವಾದ ಕಾಳಜಿಯನ್ನು ಅವರು ಹೊಂದಿದ್ದರು.

ಕೆಜಿಎಫ್ ಕಂಡ ಅತ್ಯಂತ ಹಿರಿಯ ಸ್ವಾತಂತ್ರ್ಯ ಹೋರಾಟಗಾರ, ಕಾರ್ಮಿಕ ಮುಖಂಡ, ಕಮ್ಯುನಿಸ್ಟ್ ನೇತಾರ ಕಾಸವರಿದಾಸ್‌ರವರ ನಿಧನದಿಂದ ಒಂದು ಹಿರಿಯ ತಲೆಮಾರಿನ ಕೊಂಡಿ ಕಳಚಿದಂತಾಗಿದೆ. ಇತ್ತೀಚೆಗೆ ನಡೆದ ಬಂಗಾರಪೇಟೆ ತಾಲ್ಲೂಕಿನ ಪಕ್ಷದ 10ನೇ ಸಮ್ಮೇಳನದಲ್ಲಿ ಕಾಸವರಿದಾಸ್‌ರವರನ್ನು ಚುನಾಯಿತ ತಾಲ್ಲೂಕು ಸಮಿತಿಗೆ ಖಾಯಂ ಆಹ್ವಾನಿತರನ್ನಾಗಿ ಆರಿಸಲಾಗಿತ್ತು.

ಶ್ರದ್ಧಾಂಜಲಿ : ಕಾಂ॥ದಾಸ್‌ರವರ ಅಂತಿಮಯಾತ್ರೆಯಲ್ಲಿ ಕಾಂ॥ವಿ.ಜೆ.ಕೆ.ನಾಯರ್ ರವರು ಭಾಗವಹಿಸಿ ರಾಜ್ಯ ಸಮಿತಿ ಪರವಾಗಿ ಶ್ರದ್ಧಾಂಜಲಿ ಅರ್ಪಿಸಿದರು.

ಮಾಹಿತಿ ಆಯೋಗಕ್ಕೇ ಮಾಹಿತಿ ನಿರಾಕರಣೆ!

ಮಾಹಿತಿ ಹಕ್ಕು ಕಾನೂನು ರೇಗಾ ಕಾನೂನಿನಂತೆ ಯುಪಿಎ-1 ಸರಕಾರ ಎಡಪಕ್ಷಗಳ ಒತ್ತಡದಿಂದ ತಂದ ಶಾಸನವಾದರೂ ಇವೆರಡೂ ತನ್ನದೇ ಮಹತ್ಸಾಧನೆಗಳು ಎಂದು ಬೆನ್ನು ತಟ್ಟಿಕೊಳ್ಳುತ್ತಲೇ ಅವನ್ನು ದುರ್ಬಲಗೊಳಿಸಲು ಯುಪಿಎ-2 ಸರಕಾರ ತನ್ನ 'ಕೈಲಾದ' ಪ್ರಯತ್ನಗಳನ್ನು ಮಾಡುತ್ತಿರುವುದನ್ನು ಈ ಅಂಕಣದಲ್ಲಿ ಹಿಂದೆ ಹಲವು ಬಾರಿ ಗಮನಿಸಿದ್ದೇವೆ. ಮಾಹಿತಿ ಹಕ್ಕು ಕಾನೂನಿನ ಅಡಿಯಲ್ಲಿ ಅತ್ಯುನ್ನತ ಸಂಸ್ಥೆಯಾದ ಕೇಂದ್ರೀಯ ಮಾಹಿತಿ ಆಯೋಗ(ಸಿಐಸಿ)ಕ್ಕೇ ಮಾಹಿತಿ ಕೊಡಲು ಯುಪಿಎ-2 ಸರಕಾರ ಸತತವಾಗಿ ನಿರಾಕರಿಸುತ್ತ ಬಂದಿದೆ ಎಂದು ಈ ವಾರ ವರದಿಯಾಗಿದೆ.

ಈ ಕಾನೂನಿನ ಪ್ರಕಾರ ಎಲ್ಲ ಸರಕಾರೀ ಇಲಾಖೆಗಳು, ಸಾರ್ವಜನಿಕ ಶೀರ್ಷಸ್ತ ಸಂಸ್ಥೆಗಳು ಪ್ರತಿ ವರ್ಷ ತಾವು ಈ ಕಾನೂನನ್ನು ಹೇಗೆ ಪಾಲಿಸುತ್ತಿದ್ದೇವೆ, ತಮಗೆ ಮಾಹಿತಿಗಾಗಿ ಬಂದ ಅರ್ಜಿಗಳೆಷ್ಟು, ಎಷ್ಟಕ್ಕೆ ಉತ್ತರ ಕೊಡಲಾಗಿದೆ, ಎಷ್ಟಕ್ಕೆ ಮಾಹಿತಿ ನಿರಾಕರಿಸಲಾಗಿದೆ ಇತ್ಯಾದಿಗಳ ವರದಿಯನ್ನು ಆಯೋಗಕ್ಕೆ ಸಲ್ಲಿಸಬೇಕು ಹಾಗೂ ಇದನ್ನಾಧರಿಸಿ ಆಯೋಗ ಸಂಸದೀಯ ಸಮಿತಿಗೆ ವಾರ್ಷಿಕ ವರದಿಗಳನ್ನು ಸಲ್ಲಿಸಬೇಕು. ಆದರೆ ಅಕ್ಟೋಬರ್ 2005ರಲ್ಲಿ ಈ ಕಾನೂನು ಜಾರಿಯಾದಂದಿನಿಂದಲೂ ಸರಕಾರ ಎಂದೂ ಪೂರ್ಣ ಮಾಹಿತಿಗಳನ್ನು, ಹಲವಾರು ಬಾರಿ ಕೇಳಿದ ನಂತರವೂ ಒದಗಿಸಿಲ್ಲ, ಆದ್ದರಿಂದ ಆಯೋಗ ಪ್ರತಿ ವರ್ಷವೂ ಅಪೂರ್ಣ ವರದಿಗಳನ್ನೇ ಸಂಸದೀಯ ಸಮಿತಿಗೆ ಸಲ್ಲಿಸಬೇಕಾಗಿ ಬಂದಿದೆ ಎಂದು ಆಯೋಗದ ಮುಖ್ಯ ಆಯುಕ್ತರು ಹೇಳಿದ್ದಾರೆ. ಎಲ್ಲ ಸರಕಾರೀ ಇಲಾಖೆಗಳು ಈ ಕಾನೂನಿನ ಅಂಶವನ್ನು ಪಾಲಿಸುವಂತೆ ಮಾಡಲು ಆಯೋಗ ನಡೆಸಿದ ಪ್ರಯತ್ನಗಳೆಲ್ಲವೂ ನಿಷ್ಫಲವಾಗಿವೆಯಂತೆ. ಇದರಿಂದಾಗಿ ಸ್ವತಃ ಆಯೋಗ ಸಮಯಕ್ಕೆ ಸರಿಯಾಗಿ ತನ್ನ ವಾರ್ಷಿಕ ವರದಿಗಳನ್ನು ಸಲ್ಲಿಸಲಾಗದೆ ಸಂಸದೀಯ ಸಮಿತಿಯಿಂದ ನಕಾರಾತ್ಮಕ ಟಿಪ್ಪಣಿಗಳನ್ನು ಎದುರಿಸಬೇಕಾಗಿ ಬಂದಿದೆಯಂತೆ. ಆಯೋಗ ಸಂಸದೀಯ ವ್ಯವಹಾರಗಳ ಇಲಾಖೆಗೆ ಇದರಲ್ಲಿ ನೆರವಾಗಲು ಕೇಳಿದರೆ, ಇದು ತನಗೆ ಸಂಬಂಧಪಟ್ಟದಲ್ಲ, ಸಿಬ್ಬಂದಿ ಮತ್ತು ತರಬೇತಿ ಇಲಾಖೆಯನ್ನು ಕೇಳಿ ಎಂದಿದೆಯಂತೆ.

ಯುಪಿಎ-2 ಸರಕಾರದಿಂದ ಸಹಕಾರದ ನಿರೀಕ್ಷೆಯಿಲ್ಲದೆ, ಕೇಂದ್ರೀಯ ಮಾಹಿತಿ ಆಯೋಗ ಈಗ ಸಂಸದೀಯ ಸಮಿತಿಯಿಂದಲೇ ಈ ಬಗ್ಗೆ ಸಹಾಯ ಕೇಳಲು ನಿರ್ಧರಿಸಿದೆಯಂತೆ. ಉದ್ಯೋಗಗಳಲ್ಲಿ ಮೀಸಲಾತಿಯ ಜಾರಿಯನ್ನು ಕುರಿತಂತೆ ವರದಿ ಮಾಡುವುದು ಎಲ್ಲ ಸರಕಾರೀ ಇಲಾಖೆಗಳಿಗೆ ಅನಿವಾರ್ಯವಾಗಿರುವಂತೆ, ಮಾಹಿತಿ ಹಕ್ಕಿನ ಜಾರಿಯ ಕುರಿತೂ ವರದಿ ಕೊಡುವುದನ್ನು ಎಲ್ಲ ಸರಕಾರೀ ಇಲಾಖೆಗಳಿಗೆ ಅನಿವಾರ್ಯಗೊಳಿಸಿ, ಇಂತಹ ಒಂದು ನಿಯಮವಿದ್ದರೆ, ಆಗ ಪೂರ್ಣ ಚಿತ್ರ ಪಡೆಯಲು ಅನುಕೂಲವಾಗುತ್ತದೆ ಎಂದು ಅದು ಸೂಚಿಸಲಿದೆಯಂತೆ.

ಬೆಂಗಳೂರು ಸಿಟಿ ಸಿವಿಲ್ ಕೋರ್ಟು ಆವರಣದಲ್ಲಿ ನಡೆದ ಗಲಭೆ-ತನಿಖೆಗೆ ಸಿಪಿಐ(ಎಂ) ಆಗ್ರಹ

ಬೆಂಗಳೂರಿನ ಸಿಟಿ ಸಿವಿಲ್ ಕೋರ್ಟಿನ ಆವರಣದಲ್ಲಿ ವಕೀಲರ ಒಂದು ಗುಂಪು, ಪರ್ತಕರ್ತರು ಹಾಗೂ ಪೋಲೀಸರ ಮೇಲೆ ನಡೆಸಿದ ಧಾಳಿಯನ್ನು ಭಾರತ ಕಮ್ಯೂನಿಸ್ಟ್ ಪಕ್ಷ(ಮಾರ್ಕ್ಸ್‌ವಾದಿ)ದ ರಾಜ್ಯ ಕಾರ್ಯದರ್ಶಿ ಮಂಡಳಿ ತೀವ್ರವಾಗಿ ಖಂಡಿಸುತ್ತದೆ.


ಟಿ.ವಿ ಮಾಧ್ಯಮದಲ್ಲಿ ಬರುತ್ತಿರುವ ಮಾಹಿತಿಯ ಪ್ರಕಾರ ಗಲಭೆಯಿಂದಾಗಿ ಪೋಲಿಸ್ ಪೇದೆಯೊಬ್ಬರು ಸತ್ತಿದ್ದಾರೆ. (ಯಾವುದೇ ಸಾವು ಸಂಭವಿಸಿಲ್ಲ) ಪತ್ರಕರ್ತನೊಬ್ಬನ ಮೇಲೆ ನಾಲ್ಕಾರು ಜನ ವಕೀಲರು ಸೇರಿ ಸಿಕ್ಕಾಪಟ್ಟೆ ಹೊಡೆದಿದ್ದಾರೆ. ನ್ಯಾಯಾಲಯಗಳಲ್ಲಿ ನ್ಯಾಯಾಕ್ಕಾಗಿ ವಾದ ಮಾಡುವ ವಕೀಲ ಸಮೂಹಕ್ಕೆ ಇದು ಶೋಭೆ ತರುವ ಸಂಗತಿಯಲ್ಲ.

ವಕೀಲರ ಒಂದು ಸಣ್ಣ ವಿಭಾಗ ಪದೇ ಪದೇ ಕಾನೂನನ್ನು ಕೈಗೆತ್ತಿಕೊಳ್ಳುತ್ತಿರುವುದು ಖಂಡನೀಯ. ವಕೀಲರ ಸಂಘದ ಅಧ್ಯಕ್ಷರಾಗಲೀ, ಪದಾಧಿಕಾರಿಗಳಾಗಲೀ ಇದನ್ನು ನಿಯಂತ್ರಿಸದಿರುವುದು ಅವರ ಅದಕ್ಷತೆಗೆ ಸಾಕ್ಷಿಯಾಗಿದೆ.

ಬೆಂಗಳೂರಿನಲ್ಲಿ ವಕೀಲರ ದುಂಡಾವರ್ತನೆಯನ್ನು ತಹಬಂದಿಗೆ ತರಲು ಸರಕಾರಕ್ಕೆ ಸಾಧ್ಯವಾಗಿಲ್ಲ. ಇದು ಸರಕಾರದ ನಿಷ್ಕ್ರಿಯತೆಯನ್ನು ಎತ್ತಿ ತೋರಿಸುತ್ತದೆ. ಈ ಘಟನೆ ಪೂರ್ವ ಯೋಜಿತವೇ ಎಂಬುದು ವಿವರವಾದ ತನಿಖೆಯಿಂದ ಮಾತ್ರ ತಿಳಿಯಬಹುದು. ಹಿಂದೊಮ್ಮೆ ನಡೆದ ಇದೇ ರೀತಿಯ ಘಟನೆಯ ವಿಷಯದಲ್ಲಿ ಪೋಲೀಸರಿಗೂ ವಕೀಲರಿಗೂ ನಡುವೆ ಮನೆ ಮಾಡಿಕೊಂಡಿರುವ ಸೇಡಿನ ಭಾವನೆ ಈ ಘಟನೆಗೆ ಕಾರಣವಾಗಿರಬಹುದು. ಇತ್ತೀಚೆಗೆ ಸದನದಲ್ಲಿ ಮಂತ್ರಿಗಳು ಅಶ್ಲೀಲ ಚಿತ್ರ ನೋಡುತ್ತಿರುವುದನ್ನು ವರದಿ ಮಾಡಿದ ಪತ್ರಕರ್ತರ ಮೇಲೆ ಆ ಮಂತ್ರಿಗಳ ಹಾಗೂ ಸರಕಾರದ ಬೆಂಬಲಿಗರ ಆಕ್ರೋಶ ಈ ರೀತಿಯಾಗಿ ಸ್ಫೋಟಗೊಂಡಿರಬಹುದು. ವಿಚಾರಣೆಗಾಗಿ ಕೋರ್ಟಿಗೆ ತರಲಾದ ಮಾಜಿ ಮಂತ್ರಿ ಜನಾರ್ದನರೆಡ್ಡಿಯವರ ಕಡೆಯವರ ಬಗ್ಗೆಯೂ ಅನುಮಾನ ವ್ಯಕ್ತವಾಗುತ್ತದೆ.

ಆದ್ದರಿಂದ ಪೂರ್ಣ ಪ್ರಮಾಣದ ತನಿಖೆಯಿಂದ ಮಾತ್ರ ಇದರ ಹಿಂದೆ ಯಾರ್‍ಯಾರ ಕೈವಾಡವಿದೆ ಎಂಬುದನ್ನು ಬಯಲುಗೊಳಿಸಲು ಸಾಧ್ಯ. ಘಟನೆಗಳಿಗೆ ಕಾರಣರಾದ ತಪ್ಪಿತಸ್ಥರನ್ನು ಪತ್ತೆಹಚ್ಚಿ ಬಂಧಿಸಬೇಕು ಮತ್ತು ಇಂತಹ ಘಟನೆಗಳು ಮರು ಕಳಿಸದಂತೆ ಸರಕಾರ ದೃಢವಾದ ಕ್ರಮಕೈಗೊಳ್ಳಬೇಕೆಂದು ಸಿಪಿಐ(ಎಂ) ಆಗ್ರಹಿಸುತ್ತದೆ.

ಮಾರ್ಚ್ 2,2012 ರಂದು ನೀಡಲಾದ ಹೇಳಿಕೆ.



ಬಿಜೆಪಿ ದರ್ಬಾರ್

ಆರ್.ರಾಮಕೃಷ್ಣ

ರಾಜ್ಯದ ಕಾನೂನು-ಸುವ್ಯವಸ್ಥೆ ಆ 'ದೇವರಿಗೆ ಪ್ರೀತಿ'!

ರಾಜ್ಯದ ಮುಖ್ಯಮಂತ್ರಿಗಳ ತವರು ಜಿಲ್ಲೆಯಲ್ಲಿ ಬಜರಂಗದಳ, ಸಂಘ ಪರಿವಾರದ ಕಟ್ಟಾಳುಗಳು ಅಲ್ಲಿನ ಪೋಲಿಸರು ತಾವು ಹೇಳಿದವರನ್ನು ಅಪರಾಧಿಗಳೆಂದು ಪರಿಗಣಿಸಿ, ಸರಿಯಾಗಿ 'ರಿಪೇರಿ' ಮಾಡಲಿಲ್ಲ ಎಂದು ಪೋಲಿಸರ ಮೇಲೆ-ಪೋಲಿಸ್ ಠಾಣೆಯ ಮೇಲೆ ದಾಳಿ ಮಾಡಿ ಪೋಲಿಸರನ್ನು 'ರಿಪೇರಿ' ಮಾಡಿದ್ದು ನಮಗೆಲ್ಲಾ. ಗೊತ್ತಿದೆ. ಇದೇ ಕರಾವಳಿ ಜಿಲ್ಲೆಯ ಇಲಾಖೆಗೆ ಸಂಬಂಧಿಸಿದ ಮತ್ತೊಂದು ಮುಖ ನೋಡಿ.

ದಕ್ಷಿಣ ಕನ್ನಡ ಜಿಲ್ಲೆಯ ಕದ್ರಿಯಲ್ಲಿ ಕೆಲವು ಮಹಿಳೆಯರು ಒಂದು ಬ್ಯೂಟಿ ಪಾರ್ಲರ್ ನಡೆಸುತ್ತಿದ್ದರು. ಈ ದುಡಿಯುವ ಮಹಿಳೆಯರಿಂದ ಸರಿಯಾಗಿ ಲಂಚ ಕೀಳಬೇಕೆಂದು ನಿರ್ದರಿಸಿದ ಕದ್ರಿ ಠಾಣೆ ಪೋಲಿಸರು, ಪೋಲಿಸ್ ಅಧಿಕಾರಿಗಳು ಅದಕ್ಕಾಗಿ ಪೀಡಿಸುತ್ತಾರೆ. ಇದೇ ಪ್ರಯತ್ನದ ಭಾಗವಾಗಿ ಸ್ವತ: ಪೋಲಿಸರೇ ಪಾರ್ಲರ್‌ನಲ್ಲಿ ಗರ್ಭ ನಿರೋಧಕ ಸಾಧನವಾದ ಕಾಂಡೋಮ್ ಅನ್ನು ಇಟ್ಟು ಅಲ್ಲಿ ವೇಶ್ಯಾವಾಟಿಕೆ ನಡೆಯುತ್ತಿತ್ತು ಎಂದು ಆರೋಪಿಸಿ ಮಹಿಳೆಯರನ್ನು ಬಂಧಿಸುತ್ತಾರೆ. ರಹಸ್ಯ ಕ್ಯಾಮರಾದಲ್ಲಿ ಈ ನೀಚ ಕೆಲಸ ಪೂರ್ಣ ದಾಖಲು ಆಗಿರುವುದು ಮತ್ತು ಅದು ಸುರಕ್ಷಿತವಾಗಿ ಸಿಕ್ಕಿರುವದರಿಂದ ದುಡಿಯುವ ಮಹಿಳೆಯರು ಸುಲಭವಾಗಿ ಪಾರಾಗಿದ್ದಾರೆ. ಇಲ್ಲವಾಗಿದ್ದರೆ ಅವರು ಎಂತಹ ಹೋರಾಟವನ್ನು ನಡೆಸಬೇಕಾದ ಸನ್ನಿವೇಶ ಬರುತ್ತಿತ್ತು.

ಇನ್ನು ಸಿಂಧಗಿ ತಹಸೀಲ್ದಾರರ ಕಛೇರಿಯ ಆವರಣದಲ್ಲಿ ಕತ್ತಲ ನಸುಕಿನಲ್ಲಿ ತಾವೇ ಪಾಕಿಸ್ತಾನದ ಧ್ವಜ ಹಾರಿಸಿ ಬೆಳಕು ಹರಿದ ಮೇಲೆ ಪಾಕಿಸ್ತಾನದ ಧ್ವಜ ಹಾರಿಸಿದ 'ದೇಶದ್ರೋಹಿ'ಗಳನ್ನು ಬಂಧಿಸಬೇಕೆಂದು ಗದ್ದಲ ಎಬ್ಬಿಸಲು ಯತ್ನಿಸಿದ ಕೇಸರಿ ವೀರರು ರಹಸ್ಯ ಕ್ಯಾಮರಾದಲ್ಲಿ ಸಾಕ್ಷಿ ಸಮೇತ ಸಿಕ್ಕಿ ಬಿದ್ದು ಈಗ ಕೋಮು ಗಲಭೆ ಹಬ್ಬಿಸುವ ವಂಚಕತನ ಬಯಲಾಗಿರುವುದು ಇವೆಲ್ಲಾ ಜನರಿಗೆ ಗೊತ್ತಿರುವುದೇ.

ದಕ್ಷಿಣ ಕನ್ನಡದಲ್ಲಿ, ದಾವಣಗೆರೆಯಲ್ಲಿ, ಆದಿ ಉಡುಪಿಯಲ್ಲಿ ಚರ್ಚ್‌ಗಳ ಮೇಲೆ, ಮುಸ್ಲಿಂ ಅಲ್ಪ ಸಂಖ್ಯಾತರ ಮೇಲೆ ಅನಾಗರೀಕ ದಾಳಿಗಳು ನಡೆಸಿದರೂ ಅಪರಾಧಿಗಳು ಬಚಾವಾಗಿ ಮೀಸೆ ತಿರುವುತ್ತ ತಿರುಗುತ್ತಿರುವುದು... ನೊಂದವರೇ ಮತ್ತೆ ಆಡಳಿತ ಯಂತ್ರದ ದಾಳಿಗೆ ಗುರಿಯಾಗಿದ್ದು...ಇವೆಲ್ಲವನ್ನೂ ರಾಜ್ಯದ ಜನತೆ ನೋಡಿದ್ದಾಗಿದೆ.

ಇನ್ನು ಮೊನ್ನೆ ಬೆಂಗಳೂರು ನಗರದ ಸಿಟಿ ಸಿವಿಲ್ ನ್ಯಾಯಾಲಯದ ಆವರಣದೊಳಗೆ, ನ್ಯಾಯಾಲದೊಳಗೆ ಏನು ನಡೆದಿದೆ ಎಂದು ಹೆಚ್ಚು ವಿವರಿಸ ಬೇಕಾದ ಅಗತ್ಯವೇ ಇಲ್ಲ.

ವಕೀಲರ ಕೆಲ ವಿಭಾಗ ಗೂಂಡಾಗಿರಿಗಿಳಿದು ಮಾಧ್ಯಮದವರ ಮೇಲ ಮೊದಲು ಹಲ್ಲೆ ಮಾಡುವಾಗ ಪೋಲಿಸರು ಕೈ ಕಟ್ಟಿಕೊಂಡು ನಿಲ್ಲುತ್ತಾರೆ. ಪೋಲೀಸರ ಕಣ್ಣೆದುರೇ ವರದಿಗಾರರು, ಛಾಯಾಗ್ರಾಹಕರುಗಳ ಮೇಲೆ ವಕೀಲರು ಗುಂಪು ದಾಳಿ ನಡೆಸುತ್ತದೆ. ಇವೆಲ್ಲಾ ನಡೆದು ದಾಳಿ ಪೋಲಿಸರ ವಿರುದ್ಧ ತಿರುಗಿದಾಗ ಪೋಲಿಸರು ಲಾಠಿ ಪ್ರಹಾರಕ್ಕೆ ಇಳಿಯುತ್ತಾರೆ.



ಇವೆಲ್ಲಾ ಏನನ್ನು ತೋರಿಸುತ್ತಿದೆ ? ಇದರ ಅರ್ಥ ಏನು ? ರಾಜ್ಯದ ಸಚಿವ ಸಂಪುಟದಲ್ಲಿ 'ಗೃಹ ಮಂತ್ರಿ' ಎಂಬ ಹೆಸರಿನಲ್ಲಿ ಬಂಗಲೆ, ಕಾರು, ವೇತನ, ಟಿ.ಎ., ಡಿ.ಎ.ಫೋನು, ಫ್ಯಾಕ್ಸು, ಸರ್ಕಾರದ ಸಕಲ ಸೌಲಭ್ಯಗಳನ್ನೂ ಅನುಭವಿಸುತ್ತಿರುವ ಪುಣ್ಯಾತ್ಮರು ನಿಜಕ್ಕೂ ಏನು ಮಾಡುತ್ತಿದ್ದಾರೆ !!! ಅವರು ಯಾವುದಾದರೂ ಯೋಗನಿದ್ರೆಯೊಳಗೆ ತಲ್ಲೀನರಾಗಿದ್ದಾರೋ ? ಅಥವಾ ಅವರು ಎಚ್ಚರ ಇದ್ದು ಅವರ ನಿರ್ದೇಶನದಂತೆಯೇ ರಾಜ್ಯದ ಈ ಕಾನೂನು ಸುವ್ಯವಸ್ಥೆ ಎಂಬ ಸಿನಿಮಾದ ಶೂಟಿಂಗ್ ಈ ಪರಿಯಾಗಿ ನಡೆಯುತ್ತಿದೆಯೋ ಎಂಬ ಪ್ರಶ್ನೆಯನ್ನು ನಾವು ಕೇಳ ಬೇಕಾಗಿದೆ. ಪ್ರಶ್ನೆಯನ್ನೇನೋ ನಾವು ಕೇಳುತ್ತೇವೆ. ಉತ್ತರ ಹೇಳುವವರು ಯಾರಿದ್ದಾರೆ ಇಲ್ಲಿ.

ತೊಗರಿ ಖರಿದಿಗೆ ಕೊಟ್ಟ ಹಣ ಖಾಲಿ

ರಾಜ್ಯದಲ್ಲಿ ತೊಗರಿ ಬೆಳೆದ ರೈತರ ಪಾಡು... ಆಮೇಲೆ ತೀರಾ ತಡವಾಗಿ ಸರ್ಕಾರ ಖರೀದಿ ಕೇಂದ್ರ ಶುರುಮಾಡಿದ್ದು... ಎಲ್ಲ ಈಗಾಗಲೇ ಇದೇ ಅಂಕಣದಲ್ಲಿ ಓದಿದ್ದೀರಿ. ಈ ಮಧ್ಯೆ ಮತ್ತೆ ಅಲ್ಲಿ ಏನು ನಡೆಯಿತು ನೋಡಿ. ಖರೀದಿ ಕೇಂದ್ರ ಆರಂಭವಾದ ಸ್ವಲ್ಪ ದಿನಕ್ಕೆ ತೊಗರಿ ಮಂಡಳಿಯ ಹಣ ಖಾಲಿ. ಮತ್ತೆ ಖರಿದಿ ಸ್ಥಗಿತ. ರೈತರು ಕಂಗಾಲು. ಗದ್ದಲ. ಆಮೇಲೆ ಸರ್ಕಾರದಿಂದ 5 ಕೋಟಿ ಬಿಡುಗಡೆ. ಈ ಮಧ್ಯೆ ಎಷ್ಟು ರೈತರು ದರ್ದು ನಿಮಿತ್ತ ಖಾಸಗಿಯವರಿಗೆ ತೊಗರಿ ಮಾರಿಕೊಂಡರೋ ಏನೋ.


ಒಂದೇ ಸಾರಿ ಅಗತ್ಯ ಇರುವಷ್ಟು ಹಣವನ್ನು ಸರಿಯಾಗಿ ಅಂದಾಜು ಮಾಡಿ ಕೊಡಲು ಸರ್ಕಾರಕ್ಕೆ ಏನು ದಾಡಿ ಅಂತೀರಾ ? ಹಾಗೆ ಒಂದೇ ಸಾರಿ ಕೊಟ್ಟು ಬಿಡುವುದಕ್ಕೆ ತೊಗರಿ ಮಂಡಳಿ ಏನು ಬಿಜೆಪಿಗೆ ಮತ ಹಾಕಿಸಲು ಹೆಣಗುವ ಜಾತಿವಾದಿ ಮಠವೇ ? ಇಲ್ಲ ಯಡಿಯೂರಪ್ಪನವರಿಗೆ ವರ ಪ್ರಸಾದ ಕರುಣಿಸುವ ದೇವಸ್ಥಾನವೇ ?

ಇನ್ನಷ್ಟು ಹೆದ್ದಾರಿ ಸುಲಿಗೆ

ಬಿಜೆಪಿ ಸರ್ಕಾರದ ಲೋಕೋಪಯೋಗಿ ಸಚಿವ ರಿಂದ ಮತ್ತೊಂದು ಪ್ರಕಟಣೆ ಹೊರಬಿದ್ದಿದೆ. ರಾಜ್ಯದ 2000 ಕಿ.ಮಿ.ಗಳಷ್ಟು ವ್ಯಾಪ್ತಿಯ ಹೆದ್ದಾರಿಯಲ್ಲಿ ರಸ್ತೆ ನಿರ್ವಹಣೆಗಾಗಿ ಶುಲ್ಕ ಸಂಗ್ರಹ ಮಾಡಲಾಗುವುದಂತೆ. ಇನ್ನು ಮುಂದೆ 'ಹಗುರ ಜೇಬಿನ ಜನಗಳು' ಹೆದ್ದಾರಿಗಳಲ್ಲಿ ಅಷ್ಟು ಸುಲಭವಾಗಿ ಓಡಾಡುವಂತಿಲ್ಲ. ಭಾರ ಜೇಬಿನ ಜನರಿಗೆ ರಸ್ತೆಯಲ್ಲಿ ಸರಾಗ ಚಲನೆಗೆ ಅವಕಾಶ. ಇಲ್ಲಿ ಮತ್ತೊಂದು ಸ್ವಾರಸ್ಯಕರವಾದ ವಿಷಯ ಇದೆ. ಈ ಶುಲ್ಕ ಸಂಗ್ರಹ ಯಾಕಾಗಿ ಗೊತ್ತೆ ? ಸಚಿವರೇ ಹೇಳಿದ್ದಾರೆ. ರಸ್ತೆಗಳಲ್ಲಿ ಎಲ್ಲೆಲ್ಲೂ ಉಂಟಾಗಿರುವ ಗುಂಡಿಗಳನ್ನು ಮುಚ್ಚಿ ಹಾಕಲು ಈ ಶುಲ್ಕ ಬೇಕಂತೆ. ಇದರ ಜೊತೆಗೆ ಸಚಿವರು ಕೊಟ್ಟ ಈ ಮಾಹಿತಿ ಕೇಳಿ. ಅದು ವಿಶೇಷ. ರಸ್ತೆಗಳ ಗುಂಡಿಗಳನ್ನು ಮುಚ್ಚಲು ಅಮೆರಿಕದಿಂದ ಯಂತ್ರವನ್ನು ತರಿಸಲಾಗುವುದಂತೆ.

ರಸ್ತೆಗಳ ನಿರ್ಮಾಣ, ನಿರ್ವಹಣೆ ಇತ್ಯಾದಿಗಳಿಗಾಗಿ ಈಗಾಗಲೇ ಜನರ ಮೇಲೆ ಹಾಕಲಾಗುತ್ತಿರುವ ತೆರಿಗೆ, ಶುಲ್ಕಗಳಿಂದ ಸಂಗ್ರಹವಾದ ಹಣವೆಲ್ಲ ಎಲ್ಲಿ ಹೋಗುತ್ತಿದೆ ಅಂತ ಕೇಳ್ತಾ ಇದ್ದೀರಾ !! ಛೇ ಛೇ.

ರಸ್ತೆ ಅಭಿವೃದ್ಧಿಯ ಬಗೆಗೆ, ಕರ್ನಾಟಕ ರಾಜ್ಯವನ್ನು ಅಭಿವೃದ್ಧಿ ಮಾಡುವ ಬಗೆಗೆ ನಿಮಗೆ ಏನೇನೂ ಕಾಳಜಿ ಇಲ್ಲ ಬಿಡಿ. ಸುಮ್ಮೆ ಏನೇನೋ ಪ್ರಶ್ನೆ ಕೇಳಿ ಅಭಿವೃದ್ಧಿ ಕೆಲಸಗಳಿಗೆ ಅಡ್ಡಿ ಮಾಡ್ತಾ ಇದ್ದಿರ. ಇದನ್ನು ದೇಶ ಭಕ್ತರ ಪಕ್ಷ ಸಹಿಸುವುದಿಲ್ಲ. ಎಚ್ಚರ ಎಚ್ಚರ.



ಕೃಪೆ : ಪ್ರಜಾವಾಣಿ

ಬಿಜೆಪಿ ಪಕ್ಷ ಕಟ್ಟಲು, ಚುನಾವಣೆ ಗೆಲ್ಲಲು ಗಣಿ ಲೂಟಿಕೋರರ 260 ಕೋಟಿ ! ?

ಬಿಜೆಪಿ ಒಂದು ಅನನ್ಯ ದೇಶ ಭಕ್ತರ ಪಕ್ಷ. ಅದಕ್ಕೆ ಸರಿ ಸಾಟಿಯೇ ಇಲ್ಲ. ಧರ್ಮ-ಸಂಸ್ಕೃತಿಯ ರಕ್ಷಣೆಯನ್ನು ಅವರೇ ಗುತ್ತಿಗೆ ತೆಗೆದುಕೊಂಡಿರುವುದು. ದೇಶವನ್ನು, ಕರ್ನಾಟಕ ರಾಜ್ಯವನ್ನು ಸ್ವಚ್ಛಗೊಳಿಸಲು ಬಿಜೆಪಿ ಪಕ್ಷವನ್ನು ಬಿಟ್ಟು ಬೇರೆ ಯಾರಿಗೂ ಸಾಧ್ಯವಿಲ್ಲ. ಇಂತಹ ಅರ್ಹತೆಯ ಪಕ್ಷ ಅಧಿಕಾರಕ್ಕೆ ಬರಬೇಕು. ಅಧಿಕಾರಕ್ಕೆ ಬರಬೇಕೆಂದರೆ ಪಕ್ಷ ಬಲಗೊಳ್ಳಬೇಕು. ಇವೆಲ್ಲದಕ್ಕೂ ದುಡ್ಡು ಬೇಕು. ದುಡ್ಡು ಎಲ್ಲಿಂದ ಬರುತ್ತದೆ....? ಇದು ಬಲು ಕಷ್ಟದ ಪ್ರಶ್ನೆ, ನಮಗಲ್ಲ- ಬಿಜೆಪಿ ಮುಖಂಡರಿಗೆ.

ಆದರೆ ಈ ಪ್ರಶ್ನೆ ಉತ್ತರಿಸುವವರು ಇದ್ದಾರೆ. ಈಗ ಬಿಜೆಪಿಯಲ್ಲಿರುವವರಲ್ಲ. ಮೊನ್ನೆ ಮೊನ್ನೆವರೆಗೆ ಬಿಜೆಪಿ ಸರ್ಕಾರದ ಮೂಗುದಾರ ಹಿಡಿದು ಜಗ್ಗುತ್ತಾ ಇದ್ದ ಪ್ರಭಾವಿ ಸಚಿವ ಶ್ರೀರಾಮುಲು. ಮಾಜಿ ಬಿಜೇಪಿಗರು.

2007ರಲ್ಲಿ ಬಿಜೆಪಿ ಪಕ್ಷವನ್ನು 'ಕಟ್ಟಲು' ಹಣ ಬೇಕೆಂದು ಯಡಿಯೂರಪ್ಪನವರು ಕೇಳಿದ್ದರಿಂದ 'ಸನ್ಮಾನ್ಯ' ಗಣಿಲೂಟಿಕೋರ ಸಚಿವರ ತಂಡದ ಪ್ರಮುಖ ಸಚಿವ ಶ್ರೀರಾಮುಲು ಅವರು ತಿಂಗಳಿಗೆ 10 ಕೋಟಿಗಳಂತೆ 6 ತಿಂಗಳು ನಿಧಿ ಕೊಟ್ಟರಂತೆ. ಆಮೇಲೆ 2008ರ ರಾಜ್ಯ ವಿಧಾನ ಸಭಾ ಚುನಾವಣೆಯಲ್ಲಿ ದೇಶಭಕ್ತ ಬಿಜೆಪಿ ಪಕ್ಷದ ಚುನಾವಣಾ ಖರ್ಚಿಗೆ 200 ರೂಪಾಯಿಗಳನ್ನು ನೀಡಲಾಯಿತಂತೆ.

ಹೌದು ಹಣ ಕೊಟ್ಟ ಈ ಎಲ್ಲ ವಿವರವನ್ನು ಕೊಟ್ಟಿದ್ದು ಯಾರು ಅಂದ್ರ ? ಸ್ವತಃ ಶ್ರೀರಾಮುಲು. ಅವರು ಗದಗ್‌ನಲ್ಲಿ ಈ ಮಾಹಿತಿಯನ್ನು ಅಧಿಕೃತವಾಗಿ ಮಾಧ್ಯಮದವರಿಗೆ ನೀಡಿದ್ದಾರೆ. ಈ ಮಾಹಿತಿ ಅವರಿಗೆ ಅಧಿಕೃತವಾಗಿ ನೀಡಲು ಸಾಧ್ಯವಾಗಿರುವುದು ಮಾತ್ರ. ಅವರಿಗೂ ನೀಡಲು ಸಾಧ್ಯವಾಗದ ಮಾಹಿತಿಗಳು ಅವರ ಮಿದುಳಿನಲ್ಲಿ ಇನ್ನೂ ಎಷ್ಟೋ ಇರಬಹುದು. ಪಾಪ ಹೇಳಲಾಗದ ವೇದನೆ ಇನ್ನೂ ತುಂಬಾ ಇದ್ದಂತಿದೆ. ಎಷ್ಟೇ ಆದರೂ ದೇಶಭಕ್ತರ ಪಕ್ಷದ ವ್ಯವಹಾರ. ಎಲ್ಲವನ್ನೂ ಎಲ್ಲಿ ಹೇಳಲು ಸಾಧ್ಯ. ಅಲ್ಲವೇ ? ಅಂದ ಹಾಗೇ ಆಪರೇಷನ್ ಕಮಲ ಚುನಾವಣೆ ಮುಗಿದ ಮೇಲೂ ನಡೆಯುತ್ತಲೇ ಹೋಯಿತು. ಅದೂ ಪಕ್ಷ ಕಟ್ಟುವ ಕೆಲಸವೇನೆ. ಅದಕ್ಕೆ ಎಷ್ಟು ಕೋಟಿ ಪಡಕೊಂಡರೋ ಗೊತ್ತಿಲ್ಲ; ಅವೆಲ್ಲ ಸ್ವಲ್ಪ ಗುಪ್ ಗುಪ್ ವ್ಯವಹಾರ. ಪತ್ರಿಕಾಗೋಷ್ಠಿ [illegible] ಹೇಳಲಾಗದು. ನೇರವಾಗಿ ಹೋಗಿ ಕಿಂವಿ [illegible]

ಮುತ್ತಿನ ಮಳೆ ಹೊಯ್ಯುವಾಗ.... ಸಿಡಿಲು ಬಡಿದು ಸತ್ತವರೆ..... ಹಸಿವನುಂಡ ಜನಗಳೇ....

ದಲಿತರ ಬೇಡಿಕೆಗಳ ಈಡೇರಿಕೆಗೆ ಸಿಪಿಐ(ಎಂ) ಪ್ರತಿಭಟನೆ



ಉಡುಪಿ ಜಿಲ್ಲೆಯ ಕುಂದಾಪುರದಲ್ಲಿ ಮಾರ್ಚ್ 06ರಂದು ತಾಲೂಕು ತಹಶೀಲ್ದಾರರ ಕಛೇರಿ ಎದುರು ಸಿಪಿಐ(ಎಂ) ಪಕ್ಷದ ತಾಲ್ಲೂಕು ಸಮಿತಿ ನೇತೃತ್ವದಲ್ಲಿ ಪ್ರತಿಭಟನೆ ನಡೆಸಿ ಮನವಿ ಸಲ್ಲಿಸಲಾಯಿತು.

ಸಿಪಿಐ(ಎಂ)ನ ತಾಲೂಕು ಕಾರ್ಯದರ್ಶಿ ಮಹಾಬಲ ವಡೇರಹೋಬಳಿ ಮಾತನಾಡಿ ಬಹುದೊಡ್ಡ ಸಂಖ್ಯೆಯಲ್ಲಿರುವ ಭೂ ರಹಿತ ದಲಿತರಿಗೆ ಭೂಮಿಯನ್ನು ಹಂಚಬೇಕು. ದಲಿತರ ಹಸಿವನ್ನು ನೀಗಿಸಲು ಎಲ್ಲರಿಗೂ ಅಂತ್ಯೋದಯ ಕಾರ್ಡ್ ನೀಡಬೇಕು, ಇಲ್ಲವೇ ದಲಿತರನ್ನು ಆಹಾರ ಭದ್ರತಾ ಕಾಯ್ದೆಗೆ ಒಳಪಡಿಸಬೇಕು, ಪ್ರತಿ ವರ್ಷ ಸಾಮಾಜಿಕ ಆಡಿಟಿಂಗ್ ನಡೆಸಬೇಕು, ತೊಂದರೆ ನಿವಾರಣಾ ಕೇಂದ್ರ ರಚಿಸಿ ಮೂರು ತಿಂಗಳೊಳಗೆ 'ದೂರು'ಗಳ ವಿಲೇವಾರಿ ಆಗುವಂತೆ ಮಾಡಬೇಕು. ಯೋಜನಾ ಆಯೋಗದ ಅಡಿಯಲ್ಲಿ ಸಾಮಾಜಿಕ ನ್ಯಾಯ ವಿಭಾಗವನ್ನು ರಚಿಸಬೇಕು. ರಾಜ್ಯದಲ್ಲಿ ಖಾಲಿ ಇರುವ ಬ್ಯಾಕ್‌ಲಾಗ್ ಹುದ್ದೆಗಳನ್ನು ಕೂಡಲೇ ತುಂಬಬೇಕು. ಹೆಚ್ಚಿನ ಇಲಾಖೆಯಲ್ಲಿ ಬಡ್ತಿಯಲ್ಲಿ ಆಗುತ್ತಿರುವ ಅನ್ಯಾಯ ತಪ್ಪಿಸಬೇಕು ಖಾಸಗಿ ವಲಯದಲ್ಲಿ ಮೀಸಲಾತಿ ಜಾರಿಯಾಗಬೇಕು. ಸಫಾಯಿ ಕರ್ಮಚಾರಿಗಳಿಗೆ ಪುನರ್ವಸತಿ ಕಲ್ಪಿಸಬೇಕು, ಮಲಹೊರುವ ಪದ್ಧತಿ ರದ್ದುಗೊಳಿಸಬೇಕು. ಮರಣ ಹೊಂದಿದ ಕಾರ್ಮಿಕರಿಗೆ ತಲಾ 5 ಲಕ್ಷ ರೂ. ಪರಿಹಾರ ನೀಡಬೇಕು. ಅವರ ಕುಟುಂಬ ಸದಸ್ಯರಿಗೆ ಸರಕಾರಿ ನೌಕರಿ ನೀಡಬೇಕು ಎಂದು ಒತ್ತಾಯಿಸಿದರು. ಪ್ರತಿಭಟನೆಯಲ್ಲಿ ನೂರಾರು ದಲಿತರು, ಸಿಪಿಐ(ಎಂ) ಪಕ್ಷದ ಕಾರ್ಯಕರ್ತರು ಭಾಗವಹಿಸಿದ್ದರು. ನೇತೃತ್ವವನ್ನು ಹೆಚ್.ನರಸಿಂಹ, ಕೃಷಿಕೂಲಿಕಾರರ ಸಂಘದ ತಾ॥ ಅಧ್ಯಕ್ಷರಾದ ರಾಜೀವ ಪಡುಕೋಣೆ, ಸುರೇಶ ಕಲ್ಲಾಗರ್, ಡಿ.ಲಕ್ಷ್ಮಣರವರು ವಹಿಸಿದ್ದರು.

ಉಡುಪಿಯಲ್ಲಿ ಪ್ರತಿಭಟನಾ ಬಹಿರಂಗ ಸಭೆಯನ್ನು ನಡೆಸಲಾಗಿದೆ.

ಚಿಕ್ಕಬಳ್ಳಾಪುರ

ಜಿಲ್ಲೆಯ ಬಾಗೇಪಲ್ಲಿ ತಾಲೂಕಿನಲ್ಲಿ 500ಕ್ಕೂ ಹೆಚ್ಚು ಜನರು ತಾಲೂಕು ಕಛೇರಿ ಮುಂಭಾಗ ಧರಣಿ ನಡೆಸಿ, ಮನವಿ ನೀಡಲಾಗಿದೆ. ದಲಿತ ಹಕ್ಕುಗಳ ಸಮಿತಿಯ ಸಂಚಾಲಕರಾದ ಜಿ.ನಾಗರಾಜ್, ರಂಗೇನಾಯ್ಕ, ಜಿ.ಕೃಷ್ಣಪ್ಪ ಮುಂತಾದವರು ಭಾಗವಹಿಸಿದ್ದರು. ಗುಡಿಬಂಡೆಯಲ್ಲಿ 200ಕ್ಕೂ ಹೆಚ್ಚು ಜನ ತಹಶಿಲ್ದಾರ್ ಕಛೇರಿ ಮುಂಭಾಗ ಪ್ರತಿಭಟನೆ ಮಾಡಿ ಮನವಿ ನೀಡಿದ್ದಾರೆ. ಗೌರಿಬಿದನೂರು ತಾಲೂಕಿನಲ್ಲಿ 300ಕ್ಕೂ ಹೆಚ್ಚು ಜನ ಪ್ರತಿಭಟನೆ ಮಾಡಿ ಮನವಿ ನೀಡಿದ್ದಾರೆ. ನಾಗರಾಜ್, ವೆಂಕಟರಮಣಪ್ಪ, ಸಿ.ಸಿ.ಅಶ್ವಥಪ್ಪ ಮುಂತಾದ ಮುಖಂಡರು ಭಾಗವಹಿಸಿದ್ದರು.

ಕೋಲಾರ : ಕೋಲಾರದಲ್ಲಿ ಜಿಲ್ಲಾಧಿಕಾರಿ ಕಛೇರಿ ಬಳಿ ಪ್ರತಿಭಟನೆಯನ್ನು ನಡೆಸಿ ಜಿಲ್ಲಾಧಿಕಾರಿಗಳಿಗೆ ಮನವಿ ನೀಡಿದ್ದಾರೆ. ಬಂಗಾರಪೇಟೆ, ಶ್ರೀನಿವಾಸಪುರ, ಮಾಲೂರು ತಾಲೂಕು ಕಛೇರಿಗಳ ಮುಂಭಾಗ ಪ್ರತಿಭಟನೆ ನಡೆಸಿ ತಹಶಿಲ್ದಾರ್‌ರವರಿಗೆ ಮನವಿ ನೀಡಿದ್ದಾರೆ. ಸುಮಾರು ನೂರಕ್ಕೂ ಹೆಚ್ಚು ಕಾರ್ಯಕರ್ತರು ಭಾಗವಹಿಸಿದ್ದರು. ಗಾಂಧಿನಗರ ನಾರಾಯಣಸ್ವಾಮಿ, ಅರ್ಜುನನ್, ಸಿ.ಶ್ರೀನಿವಾಸ್, ಎಲ್.ರಾಮಚಂದ್ರ, ಅಚ್ಯುತಾ, ಹನುಮಂತರಾಯ, ಮುಂತಾದ ಮುಖಂಡರು ಭಾಗವಹಿಸಿದ್ದರು.

ಗುಲ್ಬರ್ಗಾ : ಜಿಲ್ಲೆಯ ಚಿಂಚೋಳಿಯಲ್ಲಿ ಪ್ರತಿಭಟನೆ ಮಾಡಿ ತಹಶೀಲ್ದಾರ್‌ರವರಿಗೆ ಮನವಿ ನೀಡಿದ್ದಾರೆ. ಗುಲ್ಬರ್ಗಾದಲ್ಲಿ ನೂರಕ್ಕೂ ಜನ ಪ್ರತಿಭಟನೆ ನಡೆಸಿ ಜಿಲ್ಲಾಧಿಕಾರಿಗಳಿಗೆ ಮನವಿ ನೀಡಿದ್ದಾರೆ.


ಬೆಂಗಳೂರು : ಮೈಸೂರು ಬ್ಯಾಂಕ್ ವೃತ್ತದಲ್ಲಿ ಪ್ರತಿಭಟನೆಯನ್ನು ನಡೆಸಿ, ಜಿಲ್ಲಾಧಿಕಾರಿಗಳಿಗೆ ಮನವಿ ನೀಡಿದ್ದಾರೆ.

ಬಳ್ಳಾರಿ ಜಿಲ್ಲೆಯ ಬಳ್ಳಾರಿಯಲ್ಲಿ 100ಕ್ಕೂ ಹೆಚ್ಚು ಜನ ಬೆಳಿಗ್ಗೆಯಿಂದ ಸಂಜೆಯವರೆಗೂ ಪ್ರತಿಭಟನೆ ನಡೆಸಿ ಜಿಲ್ಲಾಧಿಕಾರಿಗಳಿಗೆ ಮನವಿ ನೀಡಿದ್ದಾರೆ. ಸಿರಗುಪ್ಪ, ಹೊಸಪೇಟೆ, ಹಗರಿಬೊಮ್ಮನಹಳ್ಳಿ ತಾಲೂಕು ಕಛೇರಿಗಳ ಮುಂಭಾಗ ನೂರಕ್ಕೂ ಹೆಚ್ಚು ಜನರು ಬೆಳಿಗ್ಗೆಯಿಂದ ಸಂಜೆಯವರೆಗೂ ಪ್ರತಿಭಟನಾ ಧರಣಿ ನಡೆಸಿ, ತಹಶೀಲ್ದಾರ್‌ರವರಿಗೆ ಮನವಿ ನೀಡಿದ್ದಾರೆ.

ರಾಯಚೂರು ಜಿಲ್ಲೆಯಲ್ಲಿ ಜಿಲ್ಲಾಧಿಕಾರಿ ಕಛೇರಿ ಮುಂಭಾಗ 150ಕ್ಕೂ ಹೆಚ್ಚು ಜನರು ಧರಣಿ ನಡೆಸಿ, ಜಿಲ್ಲಾಧಿಕಾರಿಗಳಿಗೆ ಮನವಿ ನೀಡಿದ್ದಾರೆ. ದೇವದುರ್ಗಾ, ಸಿಂಧನೂರು, ಲಿಂಗಸೂರು ತಾಲೂಕು ಕಛೇರಿಗಳ ಮುಂಭಾಗ 100ಕ್ಕೂ ಹೆಚ್ಚು ಜನರು ಪ್ರತಿಭಟನೆ ನಡೆಸಿ ತಹಶಿಲ್ದಾರ್‌ರವರಿಗೆ ಮನವಿ ನೀಡಿದ್ದಾರೆ. ಕೆ.ಜಿ.ವೀರೇಶ್, ಶಿವಣ್ಣ, ನರಸಿಂಹಪ್ಪ, ವೆಂಕಟೇಶಪ್ಪ, ಅಪ್ಪಣ್ಣ ಮುಂತಾದವರು ಭಾಗವಹಿಸಿದ್ದರು.

ಮಂಡ್ಯ ಜಿಲ್ಲೆಯ ಮಳವಳ್ಳಿ ಮತ್ತು ಮದ್ದೂರು ತಾಲೂಕು ಕಛೇರಿ ಮುಂಭಾಗ ಪ್ರತಿಭಟನೆ ನಡೆಸಿ, ತಹಶಿಲ್ದಾರ್‌ರವರಿ ಮನವಿ ನೀಡಿದ್ದಾರೆ. ಮಂಡ್ಯದಲ್ಲಿ ಜಿಲ್ಲಾಧಿಕಾರಿ ಕಛೇರಿ ಮಂಭಾಗ ಧರಣಿ ನಡೆಸಿ ಮನವಿ ನೀಡಲಾಗಿದೆ.

ಬಿಜಾಪುರ ಜಿಲ್ಲಾ ಕೇಂದ್ರದಲ್ಲಿ ಅಂಬೇಡ್ಕರ್ ವೃತ್ತದಿಂದ ಮುಖ್ಯ ಬೀದಿಗಳಲ್ಲಿ ಮೆರವಣಿ ಹೊರಟು ಜಿಲ್ಲಾಧಿಕಾರಿಗಳ ಕಛೇರಿ ಮುಂದೆ ಪ್ರತಿಭಟನಾ ಧರಣಿ ಮಾಡಿ, ಜಿಲ್ಲಾಧಿಕಾರಿಗಳಿಗೆ ಮನವಿ ನೀಡಲಾಗಿದೆ. 100ಕ್ಕು ಹೆಚ್ಚು ಕಾರ್ಯಕರ್ತರು ಭಾಗವಹಿಸಿದ್ದರು. ಸಿಪಿಐ(ಎಂ) ಜಿಲ್ಲಾ ಕಾರ್ಯದರ್ಶಿ ಭೀಮಸಿ ಕಲಾದಗಿ, ದಲಿತ ಹಕ್ಕುಗಳ ಸಮಿತಿಯ ಜಿ.ಎಸ್.ಇಂಗಳಗಿ,



ವ್ಹಿ.ಎಂ.ಸೊನ್ನದ, ಸುರೇಖಾ ರಜಪೂತ, ಎ.ಎಚ್.ಹೊನ್ನಟಗಿ, ಮುಂತಾದವರು ಭಾಗವಹಿಸಿದ್ದರು.

ತುಮಕೂರು ಜಿಲ್ಲೆಯಲ್ಲಿ ಜಿಲ್ಲಾಧಿಕಾರಿ ಕಛೇರಿ ಮುಂಭಾಗ ಪ್ರತಿಭಟನೆ ನಡೆಸಿ ಮನವಿ ನೀಡಿದ್ದಾರೆ. ಕೊರಟಗೆರೆ ಮತ್ತು ಮಧುಗಿರಿ ತಾಲ್ಲೂಕಿನಲ್ಲಿ ಧರಣಿ ನಡೆಸಿ ತಹಶಿಲ್ದಾರ್‌ರವರಿಗೆ ಮನವಿ ನೀಡಿದ್ದಾರೆ.

ಹಾಸನ, ಗದಗ, ಮೈಸೂರು, ಚಿತ್ರದುರ್ಗಾ, ದಾವಣಗೆರೆ ಜಿಲ್ಲೆಗಳಲ್ಲಿ ಪ್ರತಿಭಟನೆಗಳು ನಡೆದು ಜಿಲ್ಲಾಧಿಕಾರಿಗಳಿಗೆ ಮನವಿ ನೀಡಲಾಗಿದೆ.

...ನಟನೆಗೆ ಮತದಾರರ ತಿರಸ್ಕಾರ

ಪುಟ 7ರಿಂದ.....

ಯುಪಿಎ-2 ಏನಾದರೂ ಪಾಠ ಕಲಿಯುತ್ತದೆಯೇ ಎಂಬುದು. ದುರದೃಷ್ಟವಶಾತ್, ಹಾಗೆ ಕಲಿಯುವ ಲಕ್ಷಣಗಳೇನೂ ಇಲ್ಲ. ಹಾಗೇನಾದರೂ ಕಲಿತಿದ್ದರೆ ಮುಂಬರುವ ಬಜೆಟಿನಲ್ಲಿ ಅದು ಕಾಣಿಸಬೇಕು. ಈ ಹಿಂದೆ ಹಲವು ಬಾರಿ ಈ ಅಂಕಣದಲ್ಲಿ, ಕಾರ್ಪೋರೇಟುಗಳಿಗೆ, ಸೂಪರ್ ಶ್ರೀಮಂತರಿಗೆ ಭಾರೀ ಪ್ರಮಾಣದ ತೆರಿಗೆ ರಿಯಾಯ್ತಿಗಳನ್ನು ಕೊಡುವ ಬದಲು, ಅದೇ ಹಣವನ್ನು ನಮಗೆ ಬಹುವಾಗಿ ಅಗತ್ಯವಿರುವ ಮೂಲರಚನೆಗಳನ್ನು ಕಟ್ಟಲು ಬೃಹತ್ ಪ್ರಮಾಣದ ಸಾರ್ವಜನಿಕ ಖರ್ಚುಗಳಿಗೆ ಕೊಟ್ಟರೆ ಭಾರೀ ಪ್ರಮಾಣದ ಉದ್ಯೋಗಾವಕಾಶ ನಿರ್ಮಾಣವಗುತ್ತಿತ್ತಷ್ಟೇ ಅಲ್ಲ, ಜನಗಳ ಖರೀದಿ ಸಾಮರ್ಥ್ಯ ಹೆಚ್ಚುತ್ತಿತ್ತು. ಇದು ದೇಶದ ಆರ್ಥಿಕದಲ್ಲಿ ಆಂತರಿಕ ಬೇಡಿಕೆಯ ಪ್ರಮಾಣವನ್ನು ಹೆಚ್ಚಿಸಿ ಭಾರತವನ್ನು ಒಂದು ಬಹುಕಾಲ ಬಾಳಿಯುವ ಮತ್ತು ನಿಜವಾಗಿಯೂ ಎಲ್ಲರನ್ನು ಒಳಗೊಳ್ಳುವ ಬೆಳವಣಿಗೆಯ ಹಾದಿಯಲ್ಲಿ ತರುತ್ತಿತ್ತು ಎಂದು ನಾವು ಮತ್ತೆ-ಮತ್ತೆ ಹೇಳಿದ್ದೇವೆ. ಹೀಗೆ ಮಾಡದಿದ್ದರೆ, ಜನತೆ ಮುಂದೆಯೂ ಚುನಾವಣೆಗಳಲ್ಲಿ ಕಾಂಗ್ರೆಸನ್ನು ಮತ್ತು ಅದರ 'ಆಮ್ ಆದ್ಮಿ' ಪರ ಕಾಳಜಿಗಳ ನಟನೆಯನ್ನು ತಿರಸ್ಕರಿಸುತ್ತಲೇ ಇರುತ್ತಾರೆ.

ಸದ್ಯಕ್ಕೆ ಸಮಾಜವಾದಿ ಪಕ್ಷ ಮತ್ತು ಬಹುಜನ ಸಮಾಜ ಪಾರ್ಟಿ ಇವೆರಡೂ ಕೇಂದ್ರದಲ್ಲಿ ಯುಪಿಎ-2 ಸರಕಾರವನ್ನು ಹೊರಗಿನಿಂದ ಬೆಂಬಲಿಸುವುದನ್ನು ಮುಂದುವರೆಸುತ್ತವೆ. ಇದು ಬದಲಾಗದಿದ್ದರೆ, ತಕ್ಷಣಕ್ಕಂತೂ ಯುಪಿಎ-2 ಸರಕಾರದ ಸ್ಥಿರತೆಗೆ ಬೆದರಿಕೆಯಿಲ್ಲ. ಬಿಎಸ್‌ಪಿ ರಾಜ್ಯ ಮತ್ತು ಕೇಂದ್ರ ಸರಕಾರವನ್ನು ಒಟ್ಟಿಗೇ ಎದುರು ಹಾಕಿಕೊಳ್ಳುವ ಪ್ರಯತ್ನ ನಡೆಸದಷ್ಟು ವಿವೇಕ ಮತ್ತು ವ್ಯಾವಹಾರಿಕತೆಯನ್ನು ತೋರಬಹುದು. ಸಮಾಜವಾದಿ ಪಕ್ಷಕ್ಕೆ ಕೇಂದ್ರ ಸರಕಾರದ ಉತ್ತಮ ಮರ್ಜಿಯೇ ಹೆಚ್ಚು ಅನುಕೂಲಕರ ಎನಿಸಬಹುದು.

ಆದರೂ, ಮುಂಬರುವ ಬಜೆಟ್ ಅಧಿವೇಶನದಲ್ಲಿ ಸಂಸತ್ತಿನಲ್ಲಿ ಯುಪಿಎ-2 ಸರಕಾರದ ಹಾದಿ ಸುಗಮವಾಗಿರುವುದಿಲ್ಲ ಎಂಬುದು ಸ್ಪಷ್ಟ. ಈ ಸರಕಾರ ಮತ್ತು ಕಾಂಗ್ರೆಸ್ ಪಕ್ಷ ಈ ಫಲಿತಾಂಶಗಳಿಂದ ಸರಿಯಾದ ಪಾಠಗಳನ್ನು ಕಲಿಯುತ್ತದೆಯೇ, ತನ್ನ ನವ-ಉದಾರವಾದಿ ಆರ್ಥಿಕ ಧೋರಣೆಗಳ ವ್ಯವಸ್ಥೆಯನ್ನು ಬದಲಿಸುತ್ತದೆಯೇ ಎಂಬುದರ ಮೇಲೆ ಇದು ನಿಂತಿದೆ. ಆದರೆ ಲಕ್ಷಣಗಳೆಲ್ಲ ತದ್ವಿರುದ್ಧವಾಗಿರುವುದರಿಂದ ಸರಕಾರ ಈ ವಿನಾಶಕಾರಿ ಆರ್ಥಿಕ ಧೋರಣೆಯ ದಿಕ್ಕನ್ನು ಬದಲಿಸುವಂತೆ ಜನತೆಯ ಮತ್ತಷ್ಟು ಒತ್ತಡಗಳ ಮೂಲಕ ದಾಳಿ ನಡೆಸಬೇಕಾಗಿದೆ. ●

ಐದು ರಾಜ್ಯಗಳ ವಿಧಾನಸಭಾ ಚುನಾವಣೆಗಳ ಫಲಿತಾಂಶಗಳು ಬಂದಿವೆ. ಯುಪಿಎ-2 ಸರಕಾರದ ನೇತೃತ್ವದಲ್ಲಿರುವ ಕಾಂಗ್ರೆಸ್ ಗಮನಾರ್ಹ ಹಿನ್ನಡೆ ಕಂಡಿದೆ. ಯುಪಿಎ-2 ಸರಕಾರದ ಬೆಲೆಯೇರಿಕೆ ಮತ್ತು ಭ್ರಷ್ಟಾಚಾರದ ನೀತಿಗಳ ವಿರುದ್ಧ ಜನಗಳ ಅಸಂತುಷ್ಟಿಯನ್ನು ಇದು ಬಿಂಬಿಸಿದೆ ಎಂದು ಮೇಲ್ನೋಟಕ್ಕೇ ಕಾಣುತ್ತದೆ(ಈ ಬಗ್ಗೆ ವಿಶ್ಲೇಷಣೆಗೆ ಈ ಸಂಚಿಕೆಯಲ್ಲಿ ಪ್ರಕಟವಾಗಿರುವ ಪೀಪಲ್ಸ್ ಡೆಮಾಕ್ರಸಿ ಸಂಪಾದಕೀಯವನ್ನು ನೋಡಿ). ಕಾರ್ಮಿಕರ ಸಾರ್ವತ್ರಿಕ ಮುಷ್ಕರದ ನಂತರ ಇಂತಹ ಫಲಿತಾಂಶದಿಂದ ನವ-ಉದಾರವಾದಿಗಳಿಗೆ ನಡುಕವುಂಟಾಗಿರುವಂತೆ ಕಾಣುತ್ತದೆ. ಮನಮೋಹನ ಸಿಂಗ್ ಸರಕಾರಕ್ಕೆ 'ಆರ್ಥಿಕ ಸುಧಾರಣೆ'ಗಳನ್ನು ತ್ವರಿತಗೊಳಿಸಲು ಇರುವ ಅವಕಾಶ ಈ ಒಂದು ವರ್ಷ ಮಾತ್ರ, ಏಕೆಂದರೆ ಮುಂದಿನ ವರ್ಷ, ಚುನಾವಣೆಯನ್ನು ಎದುರಿಸಬೇಕಾದ ವರ್ಷವಾದ್ದರಿಂದ ಜನರ ಕಣ್ಣಿಗೆ ಮಣ್ಣೆರಚಲು 'ಸುಧಾರಣೆ'ಗಳನ್ನು ಪಕ್ಕಕ್ಕೆ ಇಡಬೇಕಾಗಿತ್ತು, ಆದರೆ ಈ ಫಲಿತಾಂಶದ ನಂತರ ಈಗಿನಿಂದಲೇ ಅಂತಹ ಕೆಲಸ ಮಾಡುವ ಒತ್ತಡ ಉಂಟಾಗಬಹುದು ಎಂದು ಕೆಲವು ಉದಾರವಾದಿಗಳು ಪರಿತಪಿಸಿದರೆ, ಇನ್ನು ಕೆಲವರು, ಇಂತಹ ಸಂದರ್ಭಗಳಲ್ಲೇ ಸರಕಾರ, 'ಧೈರ್ಯವಾಗಿ' (ಅಂದರೆ ಜನತೆಯ ಬಗ್ಗೆ ಭಂಡ ಉಪೇಕ್ಷೆಯಿಂದ) ಮುಂದುವರೆಯಬೇಕಾಗಿದೆ ಎಂದು ಸಲಹೆ ಮಾಡುತ್ತಿದ್ದಾರೆ. ಈ ನಡುವೆ ಯುಪಿಎ-2 ಸರಕಾರ 2ಜಿ ತೀರ್ಪನ್ನು ಸುಪ್ರಿಂ ಕೋರ್ಟ್ ಮರುಪರಿಶೀಲಿಸಬೇಕು ಎಂದು ಅರ್ಜಿ ಸಲ್ಲಿಸಿದೆ, ಸರಕಾರದ ನವ-ಉದಾರವಾದಿ ಧೋರಣೆಗಳನ್ನು ಪ್ರಶ್ನಿಸುವುದು ತರವಲ್ಲ ಎಂದಿದೆ. ಅತ್ತ ಕೃಷಿರಂಗದಲ್ಲಿ, ಉದ್ಯಮ ರಂಗದಲ್ಲಿ ಜನ-ವಿರೋಧಿ, ನವ-ಉದಾರವಾದಿ ಕ್ರಮಗಳು ಜನತೆಯ ಹಿತಗಳ ಭಂಡ ಉಪೇಕ್ಷೆಯೊಂದಿಗೆ ಈ ವಾರವೂ ಮುಂದುವರೆದಿವೆ. ಇಂತಹ ಸರಕಾರ ಇತ್ತೀಚಿನ ಚುನಾವಣಾ ಫಲಿತಾಂಶಗಳಿಂದ ಸರಿಯಾದ ಪಾಠ ಕಲಿಯುತ್ತದೆ ಎಂದು ನಿರೀಕ್ಷಿಸುವುದು ಕಷ್ಟವೇ.



ವೇದರಾಜ ಎನ್.ಕೆ.

ರಸಗೊಬ್ಬರ ಸಬ್ಸಿಡಿ ಕಡಿತಕ್ಕೆ ಯುಪಿಎ-2 ಸಂಪುಟದ ನಿರ್ಧಾರ

2012-13 ಹಣಕಾಸು ವರ್ಷದಲ್ಲಿ ಪೋಸ್ಫೇಟಿಕ್ ಮತ್ತು ಪೊಟ್ಯಾಶಿಕ್ ರಸಗೊಬ್ಬರಗಳಿಗೆ ನೀಡುವ ಒಟ್ಟು ಸಬ್ಸಿಡಿಯಲ್ಲಿ 28ಶೇ.ದ ವರೆಗೆ ಕಡಿತ ಮಾಡಲು ಕೇಂದ್ರ ಸಂಪುಟ ಮಂಜೂರಾತಿ ನೀಡಿದೆಯೆಂದು ವರದಿಯಾಗಿದೆ. ರಸಗೊಬ್ಬರ ಕಂಪನಿಗಳಿಗೆ ಬೆಲೆಗಳನ್ನೇರಿಸಲು ಇಷ್ಟು ನೆವ ಸಾಕು. ಅಂತರ್ರಾಷ್ಟ್ರೀಯ ಬೆಲೆಗಳಲ್ಲಿ ಇಳಿಕೆಯಾಗಿರುವುದರಿಂದ ಇದರಿಂದ .ರೈತರಿಗೇನೂ ತೊಂದರೆಯಾಗುವುದಿಲ್ಲ ಎಂಬ ಸಮರ್ಥನೆ ಅರ್ಥವಿಲ್ಲದ್ದು. ಏಕೆಂದರೆ ಕೇವಲ ಲಾಭವನ್ನು ಗರಿಷ್ಟಗೊಳಿಸಲು ಕಾತುರವಾಗಿರುವ ರಸಗೊಬ್ಬರ ಕಂಪನಿಗಳು ಅಂತರ್ರಾಷ್ಟ್ರೀಯ ಬೆಲೆಗಳಲ್ಲಿನ ಇಳಿತದಿಂದ ರೈತರಿಗೇನೂ ಪ್ರಯೋಜನವಾಗಲು ಬಿಡುವುದಿಲ್ಲ. ಆದ್ದರಿಂದ ರಸಗೊಬ್ಬರದ ಬೆಲೆಗಳ ಮೇಲಿನ ಹತೋಟಿಯನ್ನು ತೆಗೆಯುವ ನಿರ್ಧಾರವನ್ನು ತಕ್ಷಣವೇ ಹಿಂತೆಗೆದುಕೊಳ್ಳಬೇಕು, ರಸಗೊಬ್ಬರಗಳಿಗೆ ಸಬ್ಸಿಡಿ ದರಗಳಲ್ಲಿ 'ಗರಿಷ್ಟ ಚಿಲ್ಲರೆ ಬೆಲೆ'(ಎಂಆರ್‌ಪಿ) ನಿಗದಿ ಮಾಡಿ ರೈತರಿಗೆ ಪರಿಹಾರ ನೀಡಬೇಕು ಎಂದು ಅಖಿಲ ಭಾರತ ಕಿಸಾನ್ ಸಭಾ ಆಗ್ರಹಿಸಿದೆ.

ಸಬ್ಸಿಡಿಗಳು ನಿಗದಿತ, ಆದರೆ ಬೆಲೆಗಳಿ ನಿಗದಿತವಲ್ಲ ಎಂಬ ಸೂತ್ರವನ್ನಾಧರಿಸಿದ 'ಪೋಷಕ-ಆಧಾರಿತ ಸಬ್ಸಿಡಿ ವ್ಯವಸ್ಥೆ' ಮತ್ತು ಜತೆಗೆ ರಸಗೊಬ್ಬರಗಳ ಮೇಲಿನ ಬೆಲೆ ಹತೋಟಿ ರದ್ದತಿ ಯುಪಿಎ-2 ಸರಕಾರ ಕಾರ್ಪೊರೇಟ್ ಹಿತಗಳ ಉತ್ತೇಜನೆಗೆಂದೇ ತಂದಿರುವ ವ್ಯವಸ್ಥೆ. ಇದರಿಂದಾಗಿ ವಿಶ್ವ ಮಾರುಕಟ್ಟೆಯಲ್ಲಿ ರಸಗೊಬ್ಬರ ಬೆಲೆಗಳೇರಿದಾಗ ತಕ್ಷಣವೇ ಇಲ್ಲಿಯೂ ಅವುಗಳ ಬೆಲೆಗಳನ್ನು ಏರಿಸಲಾಗುತ್ತದೆ, ಆದರೆ, ಇಳಿದಾಗ



ಇಳಿಸುವುದಿಲ್ಲ- ಇದು ಇದುವರೆಗಿನ ಅನುಭವ.

ವಾಸ್ತವವಾಗಿ, ಸರಕಾರದ ಈ ವ್ಯವಸ್ಥೆಯಲ್ಲಿ ಎಪ್ರಿಲ್ 2010ರಲ್ಲಿ ಟನ್ನಿಗೆ 9,350ರೂ. ಇದ್ದ ಡಿಎಪಿ ಗೊಬ್ಬರದ ಬೆಲೆ ಈಗ ಸುಮಾರು 20,000 ರೂ. ಹತ್ತಿರ ಬಂದಿದೆ, ಎಂಒಪಿ ರಸಗೊಬ್ಬರದ ಬೆಲೆ 4,455ರೂ.ನಿಂದ 12,000 ರೂ. ಗೇರಿದೆ. ಕೆಲವು ರಾಜ್ಯಗಳಲ್ಲಿ ಕೃತಕ ಕೊರತೆಗಳನ್ನು ನಿರ್ಮಿಸಿ ವರ್ತಕರು ಡಿಎಪಿ ಗೊಬ್ಬರದ ಬೆಲೆಯನ್ನು 26,000 ರೂ.ಗಳ ವರೆಗೂ ಏರಿಸಿದ್ದಾರೆ. ರಸಗೊಬ್ಬರ ಕಂಪನಿಗಳು ಪಡೆಯುವ ಸಬ್ಸಿಡಿಗಳ ಫಲವಾಗಿ ಚಿಲ್ಲರೆ ಬೆಲೆಗಳಲ್ಲಿ ಇಳಿಕೆ ಮಾಡಬೇಕು, ಹಾಗೆ ಮಾಡದಿದ್ದರೆ ಶಿಕ್ಷೆಗೊಳಗಾಗಬೇಕಾಗುತ್ತದೆ ಎಂಬ ಕಾನೂನೇನೂ ಇಲ್ಲವಾದ್ದರಿಂದ, ರೈತರನ್ನು ಸುಲಿದು ಲಾಭ ರಾಶಿ ಹಾಕಲು ರಸಗೊಬ್ಬರ ಕಂಪನಿಗಳಿಗೆ ಅವಕಾಶವಾಗಿದೆ ಎಂದು ಕಿಸಾನ್ ಸಭಾ ಹೇಳಿದೆ.

ಯುಪಿಎ-2 ಸರಕಾರದ ಇತ್ತೀಚಿನ ನಿರ್ಣಯದ ಪ್ರಕಾರ ಸಬ್ಸಿಡಿಗಳಲ್ಲಿ ಆಗುವ ಕಡಿತದ ಪ್ರಮಾಣ ಹೀಗಿದೆ: ಡಿಎಪಿ ಗೊಬ್ಬರ- 27.4ಶೇ.; ಎಂಒಪಿ - 10ಶೇ.; ಸಾರಜನಕ ಪೋಷಕಾಂಶ- 11.6ಶೇ.; ಫಾಸ್ಫೇಟ್ ಅಂಶ- 32.6ಶೇ. ಮತ್ತು ಪೊಟಾಶ್ ಪೋಷಣಾಂಶ- 10.3ಶೇ. ಇದು ರಸಗೊಬ್ಬರದ ಬೆಲೆಗಳನ್ನು ಏರಿಸಿ ರೈತರ ಸಂಕಟಗಳನ್ನು ಏರಿಸುತ್ತದೆ ಮತ್ತು ಕೃಷಿಯ ಉತ್ಪಾದಕತೆಯನ್ನು ಇಳಿಸುತ್ತದೆಯಾದ್ದ ರಿಂದ ಈ ರೈತ-ವಿರೋಧಿ ಪ್ರಯತ್ನವನ್ನು ಕೈಬಿಡಬೇಕು, ರಸಗೊಬ್ಬರದ ಬೆಲೆಗಳನ್ನು ರೈತರ ಕೈಗೆಟಕುವಂತೆ ನಿಗದಿ ಮಾಡಬೇಕು ಎಂದು ಅಖಿಲ ಭಾರತ ಕಿಸಾನ್ ಸಭಾ ಆಗ್ರಹಿಸಿದೆ.

ಭಾರತದಲ್ಲಿ ಅಮೆರಿಕನ್ ವಿಶೇಷ ಪಡೆಗಳಿವೆಯೇ?

ಇವೆ ಎಂದಿದ್ದಾರೆ ಸ್ವತಃ ಅಮೆರಿಕಾದ ಸಶಸ್ತ್ರ ಪಡೆಗಳ ಪ್ಯಾಸಿಫಿಕ್ ಕಮಾಂಡಿನ(ಶಾಂತಸಾಗರ ಪ್ರದೇಶವನ್ನು ಒಳಗೊಳ್ಳುವ ಪ್ರದೇಶದ) ಸೇನಾಪತಿ. ಅಮೆರಿಕಾದ ಸಂಸತ್ತಿನ ಸ್ಥಾಯೀ ಸಮಿತಿಯ ಮುಂದೆ ಒಂದು ವಿಚಾರಣೆಯ ಸಂದರ್ಭದಲ್ಲಿ ಅವರು ಭಾರತ, ನೇಪಾಳ, ಬಾಂಗ್ಲಾದೇಶ, ಶ್ರೀಲಂಕಾ ಮತ್ತು ಮಾಲ್ಡಿವ್ಸ್‌ನಲ್ಲಿ ಅಮೆರಿಕಾದ ವಿಶೇಷ ನೆರವು ಪಡೆಗಳಿವೆ ಎಂದು ಹೇಳಿದ್ದಾರೆ. ವಿಶೇಷವಾಗಿ ಆಂತರಿಕ ಭಯೋತ್ಪಾದನೆ ಮತ್ತು ಬಂಡುಕೋರತನದ ಸವಾಲುಗಳನ್ನು ಎದುರಿಸುವಲ್ಲಿ ನೆರವಾಗಲು ಈ ಪಡೆಗಳಿವೆಯಂತೆ.

ಆದರೆ ಯುಪಿಎ-2 ಸರಕಾರ ಅಂತಹುದೇನೂ ಇಲ್ಲ ಎಂದಿದೆ. ಹಾಗಿದ್ದರೆ ಅಮೆರಿಕಾದ ಸೇನಾಪತಿಯೊಬ್ಬರು ಇಂತಹ ಹೇಳಿಕೆ ಕೊಡಲು ಹೇಗೆ ಸಾಧ್ಯವಾಗಿದೆ?. ಅಮೆರಿಕಾ ಸರಕಾರ ಕೂಡ ಇದನ್ನು ನಿರಾಕರಿಸಿಲ್ಲ. ಅಮೆರಿಕಾದೊಂದಿಗೆ ಈ ಸರಕಾರ ನಡೆಸಿರುವ ವ್ಯವಹಾರವೇನು ಎಂದೇನೂ ದೇಶಕ್ಕೆ ಯುಪಿಎ-2 ಸರಕಾರ ತಿಳಿಸಿಲ್ಲ. ಅದರೊಂದಿಗೆ ಎಂತಹ ನೇರ ಅಥವ ಪರೋಕ್ಷ ಮಿಲಿಟರಿ ಮತ್ತು ಭದ್ರತಾ ಸಂಬಂಧಗಳಿವೆ ಎಂಬುದನ್ನು ಅದು ಸ್ಪಷ್ಟವಾಗಿ ತಿಳಿಸಬೇಕಾಗಿದೆ ಎಂದು ಸಿಪಿಐ(ಎಂ) ಹೇಳಿದೆ.

ಸಾರ್ವತ್ರಿಕ ಮುಷ್ಕರದಂದೇ ಒಎನ್‌ಜಿಸಿ ಶೇರು ಮಾರಾಟ

ಯುಪಿಎ-2 ಸರಕಾರದ ಗೋಸುಂಬೆತನಕ್ಕೆ ಪಾರವೇ ಇದ್ದಂತಿಲ್ಲ. ಕೇಂದ್ರೀಯ ಕಾರ್ಮಿಕ ಸಂಘಗಳು ದೇಶದ ಕೋಟ್ಯಂತರ ಕಾರ್ಮಿಕರ 10 ಬೇಡಿಕೆಗಳನ್ನು ಅದರ ಮುಂದೆ ಸಲ್ಲಿಸಿ, ಇವುಗಳ ಬಗ್ಗೆ ಸರಕಾರದ ನಿರ್ಲಕ್ಷ್ಯದತ್ತ ಗಮನ ಸೆಳೆಯಲು ಸಾರ್ವತ್ರಿಕ ಮುಷ್ಕರಕ್ಕೆ ಕರೆ ನೀಡಿದಾಗಲೂ ಉಪೇಕ್ಷಿಸಿದ್ದ ಸರಕಾರ ಮುಷ್ಕರದ ಎರಡು ದಿನಗಳ ಮೊದಲಷ್ಟೇ ಕಾರ್ಮಿಕ ಸಂಘಗಳು ಎತ್ತಿರುವ ಪ್ರಶ್ನೆಗಳನ್ನು ಸಾಕಷ್ಟು ಮಟ್ಟಿಗೆ ಪರಿಶೀಲಿಸಿರುವುದರಿಂದ ಮುಷ್ಕರವನ್ನು ಹಿಂತೆಗೆದುಕೊಳ್ಳಬೇಕು' ಎಂದು 'ಮನವಿ'ಮಾಡಿತ್ತು. ಇದು ಪ್ರಾಮಾಣಿಕ ಮನವಿಯೇನೂ ಅಲ್ಲ ಎಂಬ ಕಾರ್ಮಿಕ ಸಂಘಗಳ ಹೇಳಿಕೆಯನ್ನು ಸಾರ್ವತ್ರಿಕ ಮುಷ್ಕರದಂದೇ ಸ್ವತಃ ಯುಪಿಎ-2 ಸರಕಾರವೇ ಸಾಬೀತು ಮಾಡಿತು.

ಲಾಭ ಗಳಿಸುತ್ತಿರುವ ಸಾರ್ವಜನಿಕ ವಲಯದ ಕಂಪನಿಗಳ ಶೇರು ಮಾರಾಟವನ್ನು ನಿಲ್ಲಿಸಬೇಕು ಎಂಬುದು ಈ 10 ಬೇಡಿಕೆಗಳಲ್ಲಿ ಒಂದು ಪ್ರಮುಖ ಬೇಡಿಕೆ. ಆದರೆ ಕಾರ್ಮಿಕರ ಬೇಡಿಕೆಗಳನ್ನು ಪರಿಶೀಲಿಸಲಾಗಿದೆ ಎಂದ ಸರಕಾರ ಫೆಬ್ರುವರಿ 28ರಂದೇ ಸಾರ್ವಜನಿಕ ವಲಯದ ಒಂದು 'ಮಹಾರತ್ನ' ಕಂಪನಿ ಒಎನ್‌ಜಿಸಿ(ತೈಲ ಮತ್ತು ನೈಸರ್ಗಿಕ ಅನಿಲ ಕಂಪನಿ)ಯ 5ಶೇ. ಶೇರುಗಳ ಮಾರಾಟ ಮಾಡುವುದಾಗಿ ಘೋಷಿಸಿತು. 18 ಸಾವಿರ ಕೋಟಿ ರೂ.ಗಳ ವಾರ್ಷಿಕ ಲಾಭವಿರುವ ಮತ್ತು 1ಲಕ್ಷ ಕೋಟಿ ರೂ.ಗಳಿಗಿಂತಲೂ ಹೆಚ್ಚು ಮೀಸಲು ಮತ್ತು ಹೆಚ್ಚುವರಿ ನಿಧಿಯಿರುವ ಈ ಕಂಪನಿಗೆ ಹಣದ ಅಗತ್ಯವೇನೂ ಇಲ್ಲ. ಆದರೆ ಸರಕಾರಕ್ಕೆ ತನ್ನ ಬಜೆಟ್ ಕೊರತೆಯನ್ನು ಕಡಿಮೆ ಮಾಡಲು ಹಣ ಬೇಕಾಗಿತ್ತು.

ಈ ಶೇರು ಮಾರಾಟದಿಂದ ಸರಕಾರ 'ಗಳಿಸಿದ್ದು' 12,767 ಕೋಟಿ ರೂ.ಗಳನ್ನು (ಅದೂ ಎಲ್‌ಐಸಿ ಮಾರಾಟಕ್ಕಿದ್ದ ಶೇರುಗಳಲ್ಲಿ 95ಶೇ.ದಷ್ಟನ್ನು ಖರೀದಿಸುವಂತೆ ಮಾಡಿದ ನಂತರ). ಹಣಕಾಸು ಕೊರತೆಯನ್ನು ನೀಗಿಸಲು ಲಾಭದಲ್ಲಿರುವ ಸಾರ್ವಜನಿಕ ವಲಯದ ಕಂಪನಿಗಳ ಶೇರುಗಳ ಮಾರಾಟ ಮಾಡಬೇಕಿಲ್ಲ, ವ್ಯಕ್ತಿಗಳ ಮತ್ತು ಖಾಸಗಿ ಕಂಪನಿಗಳ 3 ಲಕ್ಷ ಕೋಟಿರೂ.ಗಳಷ್ಟಿರುವ ತೆರಿಗೆ ಬಾಕಿ ವಸೂಲಾತಿಗೆ ಮುಂದಾಗಿ ಎಂದು ಕಾರ್ಮಿಕ ಸಂಘಗಳ ಸೂಚನೆಯನ್ನು ಪರಿಶೀಲಿಸಿದ್ದರೆ ಸಾಕಿತ್ತು.

ಒಎನ್‌ಜಿಸಿಯ 5ಶೇ. ಶೇರುಗಳನ್ನು ಮಾರಾಟಕ್ಕಿಡುವ ಬದಲು, ತೆರಿಗೆ ಬಾಕಿಯ 5ಶೇ. ವಸೂಲಾತಿಗೆ ಮುಂದಾಗಿದ್ದರೂ ಇದಕ್ಕಿಂತ ಹೆಚ್ಚು ಆದಾಯ ಪಡೆಯಬಹುದಾಗಿತ್ತು ಎಂದು ಸಿಐಟಿಯು ಈ ಶೇರು ಮಾರಾಟವನ್ನು ಖಂಡಿಸಿದೆ. ವಿಧಾನಸಭಾ ಚುನಾವಣೆಗಳು ಮುಗಿಯುತ್ತಿರುವಂತೆಯೇ ಪೆಟ್ರೋಲಿಯಂ ಉತ್ಪನ್ನಗಳ ಬೆಲೆಗಳನ್ನು ಏರಿಸುವ ಹುನ್ನಾರದ ಬಗ್ಗೆ ಟಿಪ್ಪಣಿ ಮಾಡುತ್ತಾ, ಚುನಾವಣೆಗಳ ಸಮಯದಲ್ಲಿ ಈ ಬೆಲೆಗಳ ಏರಿಕೆಯನ್ನು ತಡೆದು ನಿಲ್ಲಿಸುವುದು ಸರಕಾರಕ್ಕೆ ಸಾಧ್ಯವಾಗಿದ್ದರೆ, ಚುನಾವಣೆ ಇಲ್ಲದ ಸಮಯದಲ್ಲೂ ಅದನ್ನು ಮಾಡಲು ಏಕೆ ಸಾಧ್ಯವಿಲ್ಲ ಎಂದು ಪ್ರಶ್ನಿಸುತ್ತ, ಈ ಕ್ರಮಗಳ ಹಿಂದಿರುವ ಸರಕಾರದ ಗೋಸುಂಬೆತನವನ್ನು ಸಿಐಟಿಯು ಖಂಡಿಸಿದೆ ಹಾಗೂ ಕಾರ್ಮಿಕ ವರ್ಗ ಇದಕ್ಕೆ ಬಲವಾದ ಪ್ರತಿಭಟನೆಯನ್ನು ವ್ಯಕ್ತ ಪಡಿಸಬೇಕೆಂದು ಕರೆ ನೀಡಿದೆ.

ಜಗದಗಲ

ಶರತ್‌ಚಂದ್ರ

ಪುಟಿನ್ ಪುನಃ ರಶ್ಯನ್ ಅಧ್ಯಕ್ಷ



ವ್ಲಾಡಿಮಿರ್ ಪುಟಿನ್ ಪುನಃ ರಶ್ಯದ ಅಧ್ಯಕ್ಷರಾಗಿ ಚುನಾಯಿತರಾಗಿದ್ದಾರೆ ಎಂದು ಚುನಾವಣಾ ಅಕ್ರಮಗಳ ತೀವ್ರ ಆಪಾದನೆಗಳು ಮತ್ತು ವಿರೋಧ ಪಕ್ಷಗಳ ಪ್ರತಿಭಟನೆಗಳ ನಡುವೆ ಘೋಷಿಸಲಾಗಿದೆ. ಇದೇ ಮೊದಲ ಬಾರಿಗೆ ಅಧ್ಯಕ್ಷರ ಅವಧಿಯನ್ನು ಆರು ವರ್ಷಗಳಿಗೆ ವಿಸ್ತರಿಸಲಾಗಿದ್ದು, (ಪುನರಾಯ್ಕೆಯಾದರೆ) ಎರಡು ಅವಧಿಗಳ ವರೆಗೆ ಅಂದರೆ 12 ವರ್ಷಗಳ ಕಾಲ ಅಧ್ಯಕ್ಷರಾಗಿರಬಹುದು. ಚುನಾವಣಾ ಕಮಿಶನ್ ಪ್ರಕಾರ ಯುನೈಟೆಡ್ ರಶ್ಯಾ ಪಕ್ಷದ ಪುಟಿನ್ ಶೇ. 64 ಮತಗಳಿಸಿದ್ದಾರೆ. ಪ್ರಮುಖ ವಿರೋಧಿ ಅಭ್ಯರ್ಥಿ ಕಮ್ಯುನಿಸ್ಟ್ ಪಕ್ಷದ ಗೆನ್ನಾಡಿ ಝುಗನೋವ್ ಶೇ.18 ಮತ ಗಳಿಸಿದ್ದಾರೆ. ಕೋಟ್ಯಾಧಿಪತಿ ಉದ್ಯಮಿ ಪಕ್ಷೇತರ ಅಭ್ಯರ್ಥಿ ಮಿಖೈಲ್ ಪ್ರೊಖೊರೊವ್ ಶೇ. 8 ಮತ ಗಳಿಸಿ ಎಲ್ಲರನ್ನೂ ಚಕಿತಗೊಳಿಸಿದ್ದಾರೆ. ಬಲಪಂಥೀಯ ರಾಷ್ಟ್ರೀಯ-ಜನಾಂಗೀಯವಾದಿ ಲಿಬರಲ್ ಡೆಮೊಕ್ರಾಟಿಕ್ ಪಕ್ಷದ ಅಭ್ಯರ್ಥಿ ವ್ಲಾಡಿಮೀರ್ ಝಿರಿನೊವಸ್ಕಿ ಶೇ.6.2 ಮತ ಗಳಿಸಿದ್ದಾರೆ. ಜಸ್ಟ್ ರಶ್ಯಾ ಪಕ್ಷದ ಸರ್ಜಿ ಮಿರೊನೊವ್ ಶೇ.3.6 ಮತ ಗಳಿಸಿದ್ದಾರೆ. ರಶ್ಯಾದಲ್ಲಿ ಅಭ್ಯರ್ಥಿಗಳು ರಿಜಿಸ್ಟರ್ ಮಾಡುವ ಅಗತ್ಯ ಇದ್ದು ಯಾಬ್ಲೊಕೊ ಪಕ್ಷದ ಮತ್ತು ಇತರ 10 ಪಕ್ಷೇತರ ಅಭ್ಯರ್ಥಿಗಳ ಅರ್ಜಿಯನ್ನು ತಿರಸ್ಕರಿಸಲಾಗಿತ್ತು.

ಸ್ಪರ್ಧಿಸಿದ ಮೂರು ಪಕ್ಷಗಳ ಪ್ರತಿನಿಧಿಗಳಿರುವ ಲೀಗ್ ಆಫ್ ವೋಟರ್ಸ್, ತೀವ್ರ ಅಕ್ರಮಗಳ ಆಪಾದನೆ ಮಾಡಿ ಫಲಿತಾಂಶ ಒಪ್ಪಿಕೊಳ್ಳಲು ನಿರಾಕರಿಸಿದ್ದಾರೆ. ಅಂತರ್ರಾಷ್ಟ್ರೀಯ ವೀಕ್ಷಕರೂ ಮತದಾನದಲ್ಲೂ ಅದಕ್ಕೂ ಹೆಚ್ಚಾಗಿ ಮತ ಎಣಿಕೆಯ ಪ್ರಕ್ರಿಯೆಯಲ್ಲಿ ಪಾರದರ್ಶಕತೆಯ ಅಭಾವ ಇದೆ ಮತ್ತು ತೀವ್ರ ಅಕ್ರಮಗಳು ನಡೆದಿವೆ ಎಂದಿದ್ದಾರೆ. ಇತರ ಹಲವು ಸ್ವತಂತ್ರ ವೀಕ್ಷಕರೂ ಸುಮಾರು 4 ಸಾವಿರ ನಿರ್ದಿಷ್ಟ ಅಕ್ರಮಗಳ ಆಪಾದನೆ ಸಂಗ್ರಹಿಸಿದ್ದಾರೆ. ಇಂತಹ ಒಂದು ಸಂಘಟನೆ ಪ್ರಕಾರ, ಪುಟಿನ್‌ಗೆ ನಿಜವಾದ ಬಂದ ಮತ ಶೇ.50 ಕ್ಕಿಂತಲೂ ಕಡಿಮೆ. ಎರಡನೇ ಸುತ್ತಿನ ಮತದಾನಕ್ಕೆ ಹೋಗುವುದನ್ನು ತಡೆಯಲು ಈ ಅಕ್ರಮಗಳನ್ನು ಎಸಗಲಾಗಿದೆ ಎಂದು ಹೇಳಿದೆ. ಪಾರ್ಲಿಮೆಂಟರಿ ಚುನಾವಣೆಗಳಲ್ಲಿ ಎಸಗಿದ ಅಕ್ರಮಗಳ ಆಪಾದನೆಯ ಸರಿಯಾದ ವಿಚಾರಣೆಗಳೂ ಆಗಿಲ್ಲ ಎಂದು ಪ್ರತಿಭಟನೆಗಳು ಇನ್ನೂ ನಡೆಯುತ್ತಿರುವ ಹಿನ್ನೆಲೆಯಲ್ಲಿ ಈ ಚುನಾವಣೆಗಳು ನಡೆದಿದ್ದವು. ಈ ಚುನಾವಣೆಗಳ ಬಗೆಗೂ ಮಾಸ್ಕೊ ಮತ್ತು ಇತರ ನಗರಗಳಲ್ಲಿ ಭಾರೀ ಪ್ರತಿಭಟನೆಗಳು ನಡೆದಿವೆ. ಪ್ರತಿಭಟನೆ ಶಾಂತಿಯುತವಾಗಿ ನಡೆಯಲು ಬಿಟ್ಟರೂ ಆ ಮೇಲೆ ನೂರಾರು ಪ್ರತಿಭಟನಾಕಾರರನ್ನು ಬಂಧಿಸಲಾಗಿದೆ.

ರಶ್ಯದಲ್ಲಿ 1991ರಿಂದ ಆರಂಭಿಸಿ ಯಾವ ಚುನಾವಣೆಗಳೂ ಅಕ್ರಮಗಳಿಂದ ಮುಕ್ತವಾಗಿರಲಿಲ್ಲ. ಆಳುವ ಪಕ್ಷಕ್ಕೆ ಎಲ್ಲಾ ಸವಲತ್ತುಗಳು, ವಿರೋಧ ಪಕ್ಷಗಳಿಗೆ ಎಲ್ಲಾ ತೊಡಕುಗಳೂ ಇದ್ದವು. ವಿರೋಧ ಪಕ್ಷವಾಗಿ ಕೆಲಸ ಮಾಡಲೇ ಹಲವು ಕಾನೂನಿನ ಪ್ರಾಯೋಗಿಕ ಅಡೆತಡೆಗಳನ್ನು ಒಡ್ಡಲಾಗಿತ್ತು. ಮಾಧ್ಯಮಗಳಲ್ಲಿ ಅವುಗಳಿಗೆ ಅವಕಾಶವೇ ಇರಲಿಲ್ಲ. ಆಳುವ ಪಕ್ಷದ್ದೇ ತುತ್ತೂರಿ. ಈ ಬಾರಿ ಸರ್ಕಾರಿ ಮಾಧ್ಯಮದಲ್ಲಿ ಎಲ್ಲಾ ಪಕ್ಷಗಳಿಗೆ ನಾಮಮಾತ್ರಕ್ಕೆ ಸ್ವಲ್ಪ ಅವಕಾಶ ಕೊಡಲಾಗಿತ್ತು. ಆದರೆ ಖಂಡಿತ ಅದು ಸಮಾನ ಅವಕಾಶ ಆಗಿರಲಿಲ್ಲ. ಅಪಾರ ಹಣ ಮತ್ತು ಎಲ್ಲಾ (ಸರ್ಕಾರಿ ಮತ್ತು ಖಾಸಗಿ) ಮಾಧ್ಯಮಗಳ ಮೇಲೆ ನಿಯಂತ್ರಣ ಇರುವ ಆಳುವ ಪಕ್ಷದ್ದೆ ಸಿಂಹ ಪಾಲು.

ಪುಟಿನ್ ಚುನಾವಣಾ ಪ್ರಚಾರದ ದೇಶಪ್ರೇಮ ಬಡಿದೆಬ್ಬಿಸುವ ಅಮೆರಿಕನ್ ವಿರೋಧಿ ಅಂಶಕ್ಕೆ ಒತ್ತು ಕೊಟ್ಟಿದ್ದರು ಚುನಾವಣಾ ಅಕ್ರಮಗಳ ಹಿನ್ನೆಲೆಯಲ್ಲಿ ತವ ಮತ್ತು ಆಳುವ ಪಕ್ಷದ ವಿರುದ್ಧ ನಡೆಯುತ್ತಿರು ಪ್ರತಿಭಟನೆಗಳು ಅಮೆರಿಕ ಪ್ರೇರಿತ ಮತ 'ಬಣ್ಣದ ಕ್ರಾಂತಿ' ಮೂಲಕ ಕೈಗೊಂಬೆ ಸರ್ಕಾ ಸ್ಥಾಪಿಸುವ ಹುನ್ನಾರ ಎಂದು ಆಪಾದಿಸಿದ್ದರ ಸಿರಿಯಾವನ್ನು ಲಿಬ್ಯಾ ಆಗುವುದ ಬಿಡುವುದಿಲ್ಲ ಎಂದು ಘೋಷಿಸಿದ್ದರು. ರಶ ಪುನಃ ಸೂಪರ್ ಪವರ್ ಆ ಅಂತರ್ರಾಷ್ಟ್ರೀಯ ರಂಗದಲ್ಲಿ ಪ್ರಮುಖ ಪಾ ವಹಿಸುವುದು ತಮ್ಮ ಗುರಿ ಎಂದು ಸಾರಿದ್ದರು ಇದು ದೇಶದ ನಿಜವಾದ ಸಮಸ್ಯೆಗಳ ಬ ಚರ್ಚೆ ಟೀಕೆಗಳಿಂದ ತಪ್ಪಿಸಿಕೊಳ್ಳು ಹುನ್ನಾರವಲ್ಲದೆ ಮತ್ತೇನಲ್ಲ. ರಶ್ಯದ ವಿಪು ತೈಲ ಸಂಪನ್ಮೂಲ ಮತ್ತು ಶಸ್ತ್ರಾಸ್ತ್ರಗಳ ಮೇ ಆಧಾರಿತ ರಫ್ತು ವ್ಯಾಪಾರ ಬಿಟ್ಟರೆ ಯಾವುದ ರೀತಿಯ ಕೈಗಾರಿಕಾ ಅಭಿವೃದ್ಧಿಯನ್ ಕಡೆಗಣಿಸಲಾಗಿದೆ. ಸಮಾಜವಾದಿ ಘಟ್ಟದ ಸ್ಥಾಪಿತವಾದ ವಿಜ್ಞಾನ-ತಂತ್ರಜ್ಞಾನ ಮತ ಕೈಗಾರಿಕಾ ಬುನಾದಿಯನ್ನು ಮುಂದಕ್ಕೊಯ್ಯು ಬದಲು ನಾಶಮಾಡಲಾಗಿದೆ. ಅಸಮಾನತ ನಿರುದ್ಯೋಗ, ಅಪರಾಧ ಮತ್ತು ಭ್ರಷ್ಟಾಚಾ ತಾಂಡವವಾಡುತ್ತಿದೆ. ಯುರೋ ಬಿಕ್ಕಟ ರಶ್ಯಾವನ್ನೂ ತಟ್ಟದೆ ಬಿಟ್ಟಿಲ್ಲ. ಈ ಸಮಸ್ಯೆಗಳನ ಎದುರಿಸಲು ಪುಟಿನ್ ಬಳಿ ಯಾವುದ ಕಾರ್ಯಕ್ರಮ ಇಲ್ಲ. ಪುಟಿನ್ ಅಧ್ಯಕ್ಷತೆಯ ಮೂರನೇಯ ಅವದಿಯಲ್ಲಿ ತೀವ್ರ ಅತೃ ರಾಜಕೀಯ ದಂಗೆಯ ರೂಪ ಪಡೆಯು ಎಲ್ಲಾ ಸಾಧ್ಯತೆಗಳು ಇವೆ. ●

ಜಾಗತಿಕ ಕಾರ್ಯಾಚರಣೆಗಳಿಗೆ ಡಬ್ಲ್ಯೂ.ಎಫ್.ಟಿ.ಯು. ಕರೆ

ದಕ್ಷಿಣ ಆಫ್ರಿಕಾದ ಜೊಹಾನ್ಸ್ ಬರ್ಗ್‌ನಲ್ಲಿ ಫೆಬ್ರುವರಿ 8 ರಿಂದ 10 ರ ವರೆಗೆ ಡಬ್ಲ್ಯೂ.ಎಫ್.ಟಿ.ಯು. (ಟ್ರೇಡ್ ಯೂನಿಯನುಗಳ ಜಾಗತಿಕ ಫೆಡರೇಶನ್) ಅಧ್ಯಕ್ಷೀಯ ಮಂಡಳಿ ಸಭೆ ಸೇರಿತ್ತು. 2012 ರಲ್ಲಿ ಜಾರಿ ಮಾಡಬೇಕಾದ ಜಾಗತಿಕ ಕಾರ್ಯಾಚರಣೆಗಳು ಮತ್ತು ಕಾರ್ಯಕ್ರಮಗಳ ಬಗ್ಗೆ ವಿವರವಾಗಿ ಚರ್ಚಿಸಿ ಅವುಗಳ ಘೋಷಣೆ ಮಾಡಿತು. ದಕ್ಷಿಣ ಆಫ್ರಿಕಾದ ಕೊಸಾಟು ಡಬ್ಲ್ಯೂ.ಎಫ್.ಟಿ.ಯು. ಸದಸ್ಯ ಅಲ್ಲದಿದ್ದರೂ ಅದರ ಅಂಗಸಂಸ್ಥೆಗಳಾದ ಕೆಲವು ಟಿಯು ಫೆಡರೇಶನುಗಳು ಈ ಸಭೆ ಸಂಘಟಿಸಲು ನೆರವು ನೀಡಿದ್ದವು. ಕೊಸಾಟು ಅದರ ಮುಂದಿನ ಸಮ್ಮೇಳನದಲ್ಲಿ ಡಬ್ಲ್ಯೂ.ಎಫ್.ಟಿ.ಯು. ಸೇರುವ ನಿರ್ಧಾರ ಕೈಗೊಳ್ಳುವುದು ಎಂದು ನಿರೀಕ್ಷಿಸಲಾಗಿದೆ.

ಅಕ್ಟೋಬರ್ 3 ರಂದು ಆಹಾರ ವಸತಿ ಆರೋಗ್ಯ ಮತ್ತಿತರ ವಿಷಯಗಳಿಗೆ ಹಕ್ಕೊತ್ತಾಯಗಳ ಬೆಂಬಲಾರ್ಥ ಕಾರ್ಯಾಚರಣೆಯ ಅಂತರ್ರಾಷ್ಟ್ರೀಯ ದಿನ ಆಚರಣೆ; ನಿರುದ್ಯೋಗದ ಬಗ್ಗೆ ಇಡೀ ವರ್ಷ ಪ್ರಚಾರ-ಪ್ರಕ್ಷೋಭೆಗಳು; ಟ್ರೇಡ್ ಯೂನಿಯನ್ ಅಧ್ಯಯನ, ಮಾಹಿತಿ ವಿನಿಮಯ ಮತ್ತು ಶಿಕ್ಷಣದ ಹಲವು ಕಾರ್ಯಕ್ರಮಗಳು; ಎಪ್ರಿಲ್ 29-30 ರಂದು ಕ್ಯೂಬಾದ ಹವಾನಾದಲ್ಲಿ ದುಡಿಯುವ ಯುವಜನತೆಯ ಎರಡನೇ ಅಂತರ್ರಾಷ್ಟ್ರೀಯ ಸಮ್ಮೇಳನ; ನವದೆಹಲಿಯಲ್ಲಿ ದುಡಿಯುವ ಮಹಿಳೆಯರ ಅಂತರ್ರಾಷ್ಟ್ರೀಯ ಸಭೆ; ಮಹಿಳಾ ದಿನ (ಮಾರ್ಚ್ 8) ಮತ್ತು ಮೇದಿನ (ಮೇ 1) ಗಳ ಜಾಗತಿಕ ಆಚರಣೆ - ಇವು ಡಬ್ಲ್ಯೂ.ಎಫ್.ಟಿ.ಯು. ಅಧ್ಯಕ್ಷೀಯ ಮಂಡಳಿ ಆಖೈರುಗೊಳಿಸಿದ ಕೆಲವು ಕಾರ್ಯಕ್ರಮಗಳು. ಮಂಡಳಿ ದಕ್ಷಿಣ ಆಫ್ರಿಕಾದ ಅಧ್ಯಕ್ಷರನ್ನು ಭೇಟಿ ಮಾಡಿತು. ಒಟ್ಟು 30 ಸದಸ್ಯರಿರುವ ಅಧ್ಯಕ್ಷೀಯ ಮಂಡಳಿ ಮತ್ತು ಕೆಲವು ಆಹ್ವಾನಿತರು ಸೇರಿ 38 ದೇಶಗಳಿಂದ ಪ್ರತಿನಿಧಿಗಳು ಬಂದಿದ್ದರು. ಭಾರತದಿಂದ ಬಂದ ಐವರಲ್ಲಿ ಸಿಐಟಿಯುನ ಎ.ಕೆ.ಪದ್ಮನಾಭನ್ ಮತ್ತು ಸ್ವದೇಶೀ ದೇವ್ ರಾಯ್ ಸೇರಿದ್ದರು. ಕೊಸಾಟು ಸಂಘಟಿಸಿದ ಮಾರ್ಚ್ 7 ರ ಕಂಟ್ರಾಕ್ಟ್ ಪದ್ಧತಿ ವಿರುದ್ಧ ಮತ್ತಿತರ ಹಕ್ಕೊತ್ತಾಯಗಳ ಬೆಂಬಲಾರ್ಥ, ಇಂಡಿಯಾ ಟಿಯುಗಳು ಸಂಘಟಿಸಿದ ಸಾರ್ವತ್ರಿಕ ಮುಷ್ಕರಗಳಿಗೆ ಸಭೆ ಸೌಹಾರ್ದ ಬೆಂಬಲ ಸೂಚಿಸಿತು.

'ಯುದ್ಧದ ಹುಸಿ ಬೆದರಿಕೆ ಬೇಡ'

ಹೀಗಂತ ಯಾರು ಹೇಳಿರಬಹುದು? ಯುದ್ಧ-ವಿರೋಧಿ ಚಳುವಳಿಯ ವಕ್ತಾರರು ಇರಬಹುದೆ? ಇಲ್ಲ. ಅಮೆರಿಕನ್ ಇಸ್ರೇಲಿ ಪಬ್ಲಿಕ್ ಅಫೇರ್ಸ್ ಕಮಿಟಿಯ ಸಮಾವೇಶದ 13 ಸಾವಿರ ಪ್ರತಿನಿಧಿಗಳನ್ನು ಉದ್ದೇಶಿಸಿ ಮಾಡುತ್ತಾ ಈ ಕಿವಿಮಾತು ಹೇಳಿದ್ದು ಅಧ್ಯಕ್ಷ ಒಬಾಮಾ ಇಸ್ರೇಲಿ ಸರ್ಕಾರಕ್ಕೆ. ಇರಾನಿನ ಅಣು ಕಾರ್ಯಕ್ರಮದ ವಿಷಯವನ್ನು ರಾಜತಾಂತ್ರಿಕ ವಿಧಾನಗಳ ಮೂಲಕ ಬಗೆಹರಿಸಬಹುದು ಎಂದೂ ಅವರು ಹೇಳಿದರು. ಈ ಭಾಷಣದಲ್ಲೇ ಪಶ್ಚಿಮ ಏಶ್ಯಾದ ಏಕಮಾತ್ರ ಮಿತ್ರನಾದ ಇಸ್ರೆಲಿನ ಭದ್ರತೆ ಮತ್ತು ವಿದೇಶ ನೀತಿಗೆ ಪೂರ್ಣ ಬೆಂಬಲ ಘೋಷಿಸುತ್ತಾ ಭಾರೀ ಕರತಾಡನ ಸಹ ಪಡೆದರು. ಈ ಚುನಾವಣಾ ವರ್ಷದಲ್ಲಿ ಎಲ್ಲಾ 'ಹಿತಾಸಕ್ತಿಗಳನ್ನು' ತೃಪ್ತಿಪಡಿಸುವ ಸರ್ಕಸ್ಸಿನ ಭಾಗ ಇದು. ಒಂದು ಕಡೆ ಭಾರೀ ಹಣ ನೀಡುವ ಜ್ಯೂ ಲಾಬಿಯನ್ನು ಸಂತುಷ್ಟಗೊಳಿಸುತ್ತಾ, ಇನ್ನೊಂದು ಕಡೆ ಅಮೆರಿಕನ್ ಜನತೆಯ (ಅದರಲ್ಲೂ ಡೆಮೊಕ್ರಾಟಿಕ್ ಮತದಾರರ ಯುದ್ಧ-ವಿರೋಧಿ ಭಾವನೆಗಳನ ಘಾಸಿಗೊಳಿಸದಿರುವ ಸರ್ಕಸ್ಸು.

ಇದು ಸಾಲದೆಂಬಂತೆ 'ನಾನು ಹು ಬೆದರಿಕೆ ಹಾಕುತ್ತಿಲ್ಲ. ಎಲ್ಲಾ ಆಯ್ಕೆಗಳು ನ ಟೇಬಲಿನ ಮೇಲೆ ಇವೆ' ಎಂದೂ ಒಬಾಮ ಇರಾನಿಗೆ ಎಚ್ಚರಿಕೆ ನೀಡಿದ್ದಾರೆ. ರಾಜತಾಂತ್ರಿ ಕ್ರಮಗಳು ನಿರರ್ಥಕವಾದರೆ ಇರಾನಿ ಅಣ ಕಾರ್ಯಕ್ರಮವನ್ನು ನಾಶ ಮಾಡುವ ಬೆದರಿ ಹಾಕಿದ್ದಾರೆ. ಹಾಗಾದರೆ ಇಸ್ರೇಲಿಗೆ ಕಿವಿಮಾತಿ ಅರ್ಥ 'ಯುದ್ಧದ ಹುಸಿ ಬೆದರಿಕೆ ಬೇಡ ನಿಜವಾದ ಬೆದರಿಕೆ ಹಾಕಿ' ಅಂತನಾ? ಬೆದರಿಕೆ ಇರಾನಿನ ಮೇಲೆ ಯುದ್ಧ ಸಾರಬೇಕ ಎಂದು ಬಯಸುವ ರಿಪಬ್ಲಿಕನ್ ಮತದಾರ ಒಂದು ವಿಭಾಗ ಆಕರ್ಷಿಸಲೆಂದೇ? ಈ ಹಲ ನಿಲುವುಗಳ ನಡುವೆ ಸರ್ಕಸ್ಸು ಮಾಡುತ ಒಬಾಮಾ ಮಧ್ಯೆ ಬೀಳುತ್ತಾರಾ? ●

ಶಿಖರ ಸೂರ್ಯ..........

ಪುಟ 16ರಿಂದ...........

ಸಾಹಿತ್ಯಶೈಲಿಯ ನಿರೂಪಣೆಯ ಮೂಲಕ ಕಾದಂಬರಿಯು ಚಲಿಸುವುದರಿಂದಲೇ ಸುಲಭವಾಗಿ ಓದಿಸಿಕೊಂಡು ಹೋಗುತ್ತದೆ.

ಗಾರ್ಕಿಯವರು ತಮ್ಮ 'ವ್ಯಕ್ತಿಯ ವಿಘಟನೆ' ಎಂಬ ಪ್ರಸಿದ್ಧ ಕೃತಿಯಲ್ಲಿ ಹೇಳುವುದಿದು: ಮಾನವ ಸಮಾಜವು ನಿಸರ್ಗದ ವಿರುದ್ಧ ಹೋರಾಟ ನಡೆಸುವ ಇತಿಹಾಸದ ಹಂತದಲ್ಲಿ ಧರ್ಮ ಉದ್ಭವಿಸಿತು. ಮೊದಲಿಗೆ ಭಯ, ಭಕ್ತಿಗಳಿಂದ ಮತ್ತು ಆಶ್ಚರ್ಯ, ಆತಂಕಗಳಿಂದ ಅವರು ಧರ್ಮವನ್ನು ಸೃಷ್ಟಿಸಿದರು. ನಿಸರ್ಗದ ವಿರುದ್ಧ ಹೋರಾಡುತ್ತಾ ತಮ್ಮ ಅಧಿಪತ್ಯವನ್ನು ಸ್ಥಾಪಿಸುತ್ತಾ ಬಂದ ಜನರು ಮಹಾಕಾವ್ಯ ಮತ್ತು ವೀರಗಾಥೆಗಳನ್ನು ಸೃಷ್ಟಿಸಿದ ಅವರು ದೇವರನ್ನು ಪ್ರಶ್ನಿಸಲಾರಂಭಿಸಿದರು. ನಂತರದಲ್ಲಿ ದೌರ್ಜನ್ಯದ ಸಾಧನವಾಗಿ ಹೊರಹೊಮ್ಮಿದ ಧರ್ಮ ಮತ್ತು ಅದರ ಕೂಸಾದ ದೇವರ ವಿರುದ್ಧ 'ಹೋರಾಡುವ ಮನುಷ್ಯನ ಚಿತ್ರಣ'ವನ್ನು ಅವರು ಸೃಷ್ಟಿಸಿದರು. ಮಾನವ ಇತಿಹಾಸದ ಹಾದಿಯಲ್ಲಿ ಹೊಸ ಪ್ರಕ್ರಿಯೆಯೊಂದು ಖಾಸಗಿ ಆಸ್ತಿಯಾಗಿ ಉದ್ಭವಿಸಿತು. ಇದು ಸಮಾಜ ಮತ್ತು ವ್ಯಕ್ತಿಯ ನಡುವೆ ಹೋರಾಟಕ್ಕೆ ನಾಂದಿಯಾಯಿತು. ಇದರ ವಿರುದ್ಧ ಇಂದಿನ ವ್ಯಕ್ತಿಯೊಬ್ಬ ವೈಯುಕ್ತಿಕ ನೆಲೆಗಟ್ಟಿನಲ್ಲಿ ಹೋರಾಡುವಲ್ಲಿ ದುರ್ಬಲನೂ ಅಶಕ್ತನೂ ಆಗಿದ್ದಾನೆ. ಹೀಗೆ ಉದಯಿಸಿದ ಖಾಸಗಿ ಆಸ್ತಿಯು ಜನರನ್ನು ಅನೈಕ್ಯಗೊಳಿಸಿ ಅವರ ಸಂಬಂಧಗಳನ್ನು ಹರಿದುಹಾಕಿ 'ನಾನು' ಎಂಬುದಕ್ಕೆ ಪ್ರಾಮುಖ್ಯ ನೀಡಿತು. ಬಡತನದ ಕೂಪದಿಂದ ಹೊರಬರಲು ಮನುಷ್ಯನೊಬ್ಬ ಎಲ್ಲ ಪ್ರಯತ್ನಗಳನ್ನು ಮಾಡಬೇಕಿದ್ದಿತು. ಆದ್ದರಿಂದಲೇ ಅಂತಿಮವಾಗಿ, 'ನಾವು' ಎನ್ನುವ ಸಾಮೂಹಿಕ ದುಡಿಯುವ ವರ್ಗವು ತುಳಿತಕ್ಕೊಳಗಾಗಿ ಕಡೆಗಣಿಸಲ್ಪಟ್ಟವರಿಗೆ ಬದುಕಿನ ಕುರಿತು ಹೊಸ ಭರವಸೆಯನ್ನು ನೀಡಲು ಸಾಧ್ಯವಾಯಿತು.

ಏಕೆಂದರೆ, ಮಾರ್ಕ್ಸ್ ಹೇಳುವಂತೆ ಶೋಷಣಾ ವ್ಯವಸ್ಥೆಯಿರುವ ಸಮಾಜದಲ್ಲಿ ಗತಕಾಲವು ವರ್ತಮಾನ ಕಾಲದ ಮೇಲೆ ಅಧಿಕಾರ ಚಲಾಯಿಸುತ್ತದೆ; ಶೋಷಣಾರಹಿತ ಸಮಾಜದಲ್ಲಿ ವರ್ತಮಾನ ಕಾಲವು ಗತಕಾಲದ ಮೇಲೆ ಅಧಿಕಾರ ಚಲಾಯಿಸುತ್ತದೆ. ಇಂದಿನ ಬಂಡವಾಳಶಾಹಿ ಸಮಾಜದಲ್ಲಿ ಬಂಡವಾಳವು ಸ್ವತಂತ್ರವಾಗಿರುತ್ತದೆ, ಸ್ವಂತ ವ್ಯಕ್ತಿತ್ವವನ್ನು ಹೊಂದಿರುತ್ತದೆ. ಜೀವಂತ ವ್ಯಕ್ತಿಯಾದರೋ ಪರಾಧೀನನಾಗಿರುತ್ತಾನೆ ಮತ್ತು ಸ್ವಂತ ವ್ಯಕ್ತಿತ್ವವನ್ನು ಹೊಂದಿರುವುದಿಲ್ಲ.

ಈ ಹಿನ್ನೆಲೆಯಲ್ಲಿ ಶಿವಾಪುರವೊಂದು ಶಿವಾಪುರವನ್ನು ಆದರ್ಶಮಯ ಚಿಕ್ಕಹಟ್ಟಿಯೆಂದು ಚಿತ್ರಿಸಲು ಲೇಖಕರು ಒತ್ತು ನೀಡುತ್ತಾರೋ, ಅದೇ ಆದರ್ಶವು ಕಥಾಹಂದರದ ಮಿತಿಯೂ ಹೌದು. ಅಮೇರಿಕಾದ ಸಾಮ್ರಾಜ್ಯಶಾಹಿ ನೇತೃತ್ವದ ಶೋಷಣಾ ಸ್ವರೂಪಗಳತ್ತ ಗುರಿಯಿಡುವಂತೆ ಕಾಣುವ ಲೇಖಕರು, ಸಾವಿರಾರು ವರ್ಷಗಳಿಂದ ಬೇರುಬಿಟ್ಟಿರುವ ಧಾರ್ಮಿಕ ನೆಲೆ ಮತ್ತು ದೈವೀಶಕ್ತಿಯ ನೆಲೆಯ ಮೇಲೆ ನಿಲ್ಲುವುದರಿಂದ, ಇವರು ಬಾಣಬಿಡುವ ಮುಂಚೆಯೇ ಅವರ ನೆಲೆ ಕುಸಿದುಬಿದ್ದು ಅವರು ಗುರಿತಪ್ಪುತ್ತಾರೆ, ಅಲ್ಲದೆ ಕತ್ತಲಲ್ಲಿ ನಿಂತು ಕಾದಾಡುವವರಂತೆ ಕಾಣುತ್ತಾರೆ. ಹೆಚ್ಚೆಂದರೆ ಅವರ ಯುದ್ಧ ನಾಸ್ತಿಕರ ವಿರುದ್ಧ ನಡೆದಂತೆ ಕಂಡುಬರುತ್ತದೆ.

ಲೇಖಕರು ತಾವೇ ನಂಬಿರುವಂತೆ "ಮನುಷ್ಯ ಜೀವನದಲ್ಲಿ ವಿಚಿತ್ರ ಗಳಿಗೆಗಳು ಬಂದು ಯಾವುದೋ ಒಂದು ಬಾಗಿಲು ತೆರೆದರೆ ಸೌಭಾಗ್ಯಗಳು, ನಿಧಿಗಳು, ಅವಕಾಶಗಳು ಕಾಣಿಸತೊಡಗುತ್ತವೆ. ಆದರೆ ಸರಿಯಾದ ಬಾಗಿಲನ್ನ ತೆರೆಯಬೇಕಷ್ಟೆ. ಇನ್ನು ಕೆಲವರಿಗೆ ಕೈಹಚ್ಚಿದ್ದೇ ಸರಿಯಾದ ಬಾಗಿಲಾಗಿರುತ್ತದೆ. ಎರಡರಲ್ಲಿ ಯಾವುದಾದರೂ ಸರಿಯೆ ಶಿಖರಸೂರ್ಯನಿಗೀಗ ಅಂಥ ಗಳಿಗೆ ಸಿಕ್ಕಿತು" ಎನ್ನುವ ಅವರು ಅದೃಷ್ಟದ ಮೇಲೆ ಭರವಸೆಯಿಡುವುದರಿಂದ ಕಾದಂಬರಿಯ ಘಟನಾವಳಿಗಳು ನಲುಗುತ್ತವೆ. ಮಾರ್ಕ್ಸ್ ಹೇಳುವಂತೆ "ಜನ ತಮ್ಮ ಇತಿಹಾಸವನ್ನು ತಾವೇ ಸೃಜಿಸುತ್ತಾರೆ, ಆದರೆ ಅವರು ಅದನ್ನು ತಮಗಿಷ್ಟ ಬಂದಂತೆ ಮಾಡುವುದಿಲ್ಲ. ಅವರು ತಾವೇ ಆಯ್ದುಕೊಂಡಂಥ ಪರಿಸ್ಥಿತಿಗಳ ಕೆಳಗೆ ಅದನ್ನು ಮಾಡುವುದಿಲ್ಲ, ಆದರೆ ಆಗಲೇ ಅಸ್ತಿತ್ವದಲ್ಲಿರುವ, ತಮಗೆ ಗತಕಾಲದಿಂದ ಲಭಿಸಿರುವ ಪರಿಸ್ಥಿತಿಗಳ ಕೆಳಗೆ ಮಾಡುತ್ತಾರೆ. ಎಲ್ಲ ಗತ ಪೀಳಿಗೆಗಳ ಪರಂಪರೆಯೂ ಇಂದಿನ ಜೀವಂತ ವ್ಯಕ್ತಿಗಳ ಮನಸ್ಸಿನ ಮೇಲೆ ದುಃಸ್ವಪ್ನದಂತೆ ತೂಗಿಬಿದ್ದಿರುತ್ತದೆ".

ಅಲ್ಲದೆ, ಇಡೀ ಮಾನವ ನಾಗರೀಕತೆಗಳಲ್ಲಿ ಎಷ್ಟೆಲ್ಲ ಕಾದಾಟ, ಹಿಂಸೆ, ಮುನ್ನಡೆ, ಹಿನ್ನಡೆಯಾಗಿದ್ದಾಗ್ಯೂ ಸತ್ಯಶೋಧನೆಯೇ ಅದರ ಪ್ರಮುಖ ಧ್ಯೇಯಗಳಲ್ಲೊಂದಾಗಿರುವುದನ್ನು ಕಾಣಬಹುದು. ಅಕ್ಷರ, ವಿದ್ಯೆಯ ಮೂಲಕ, ಶೋಧನೆ, ಸಾಹಸಗಳ ಮೂಲಕ ಕ್ರೂರ ಸಮಾಜ–ಮುಖಿಯಿಂದ 'ಸರ್ವರಿಗೂ ಸಮಬಾಳು, ಸರ್ವರಿಗೂ ಸಮಪಾಲು' ಎಂಬ ಆದರ್ಶವನ್ನು ಸಾಕಾರಗೊಳಿಸುವತ್ತ ಮನುಷ್ಯ ನಾಗರೀಕತೆ ಸಾಗುತ್ತಾ ನಡೆದಿದೆ. ಆದರೆ ಕಾದಂಬರಿಯಲ್ಲಿ ವಿದ್ಯೆಯೇ ಕೇಡುಗತನವಾಗಿದ್ದು ಆಧುನಿಕ ವಿಜ್ಞಾನದ ಸಂಕೇತಗಳೆಂಬಂತಿರುವ ಬೀಜಗಣಿತ, ರೇಖಾಗಣಿತ, ವಿಜ್ಞಾನ ಕಲಿಸುವವರು ಕೇಡಿಗಳಂತೆ ಕಂಡುಬರುತ್ತಾರೆ. ಕಾದಂಬರಿಯ ತುಂಬೆಲ್ಲ ಶಿವಾಪುರಿಯ ಪಾತ್ರಗಳನ್ನು ಬಳಸಿಕೊಂಡು ಧರ್ಮ ದೊಡಗೂಡಿ ವಿಜ್ಞಾನದ ಮೇಲೆ ಧಾಳಿ ನಡೆಸಲಾಗಿದೆ. "ಜತೆಗೂಡಿ ಊಟ ಮಾಡುವುದಷ್ಟೇ ಅಲ್ಲ; ಇದ್ದದ್ದನ್ನ ಎಲ್ಲರೂ ಹಂಚಿಕೊಂಡು ಉಂಬೋದು" ಎಂಬ ಕಥಾನಾಯಕಿ ಗೌರಿಯ ಆಶಯವು ಲೇಖಕರ ಧ್ಯೇಯವೂ ಇರಬಹುದೇನೋ ಅಂದು ಕೊಂಡರೂ "ವಿದ್ಯೆಯು ಬೆನ್ನುಹತ್ತಿ ಆತ್ಮನಾಶ ಮಾಡಿಕೊಂಡವನ ಕಥೆ"ಯನ್ನು ಕಾದಂಬರಿಗೆ ಆಧಾರವಾಗಿಟ್ಟುಕೊಂಡಿದ್ದೇನೆಂದು ಲೇಖಕರು ಮೊದಲೇ ಹೇಳಿಕೊಂಡಿದ್ದಾರೆ. ಆ ಮೂಲಕ ತಮ್ಮ ಕಾದಂಬರಿಯ ತಳಪಾಯಕ್ಕೆ ತಾವೇ ಸಮಾಧಿಯನ್ನು ತೋಡಿದ್ದಾರೆ. ಈ ಮಿತಿಯೇ ದೊಡ್ಡ ಭಾರವಾಗಿ ಕೃತಿ ತಾನೇ ತಾನಾಗಿ ಕುಸಿದುಬೀಳುತ್ತದೆ.

ಶಿವಾಪುರದ ನಾಯಕರು ತಮ್ಮ ಹೋರಾಟಕ್ಕೆ ದೈವ ಮಗ್ಗಲು ಬದಲಿಸುವುದರ ಮೇಲೆಯೇ ಅವಲಂಬಿತವಾಗಿರುತ್ತಾರೆ. ಅಲ್ಲದೆ ಶಿವಾಪುರದ ಶಿವಪಾದ ತಾನು ಯಾವುದೇ ವ್ಯಕ್ತಿಗಳ ಪುನರ್ಜನ್ಮ ತಿಳಿದಿದ್ದು ಯಾರು ಯಾವ ಜನ್ಮದಲ್ಲಿ ಏನಾಗಿದ್ದರೆಂದು ತಿಳಿಯಬಲ್ಲ ಸಾಮರ್ಥ್ಯ ಹೊಂದಿರುವವನು. ಮತ್ತೂ ಮುಂದುವರಿದು ಕೃತಿಯಲ್ಲಿ ಭಾರತೀಯ ವೈದ್ಯಶಾಸ್ತ್ರವನ್ನು ಪುನರುತ್ಥಾನ ಮಾಡುವ ಜವಾಬ್ದಾರಿ ಹೊತ್ತವರಂತೆ ಬುಡಕಟ್ಟು ಜನರ ಗಿಡಮೂಲಿಕೆ ಚಿಕಿತ್ಸೆಗೆ ಇನ್ನಿಲ್ಲದ ಪ್ರಾಮುಖ್ಯತೆ ನೀಡಲಾಗಿದೆ. ಒಂದು ದಿನವೂ ಕೊಳಲು ಹಿಡಿಯದ ನಿನ್ನಡಿಯು ಕುಶಲ ಕಲಾವಿದನಂತೆ ಕೊಳಲು ನುಡಿಸುವುದನ್ನು ಆಶ್ಚರ್ಯಕರವಾಗಿ ನೋಡುವವರಿಗೆ ಅದು ಅವನಿಗೆ ಪುನರ್ಜನ್ಮ ಮತ್ತು ಜನ್ಮತಃ ಬಂದ ಬಳುವಳಿಯೆಂದು ಚಿತ್ರಿಸಲಾಗಿದೆ. ಮಾರ್ಕ್ಸ್ ಹೇಳಿರುವಂತೆ ಯಾವ ಸಂಸ್ಕೃತಿಯು ಮಹೋನ್ನತವೆಂದು ಲೇಖಕರು ಪ್ರಾಮುಖ್ಯ ನೀಡುತ್ತಾರೋ ಆ ಸಂಸ್ಕೃತಿಯು ಅಪರಿಮಿತ ಬಹುಸಂಖ್ಯಾತರಿಗೆ, ಕೇವಲ ಯಂತ್ರದಂತೆ ವರ್ತಿಸಲು ನೀಡುವ ತರಬೇತಷ್ಟೆ ಆಗಿರುತ್ತದೆನ್ನುವ ಅಂಶ ಕರ್ತೃವಿನ ಗ್ರಹಿಕೆಗೆ ನಿಲುಕದಿರುವುದು ಎದ್ದು ಕಾಣುತ್ತದೆ.

ಇಂದು ಜಾಗತೀಕರಣ ಮತ್ತು ಉದಾರೀಕರಣ ನೀತಿಗಳ ಮೂಲಕ ಬಡ ರಾಷ್ಟ್ರಗಳ ಮೇಲೆ ಶೋಷಣೆಯನ್ನು ಹರಿಯಬಿಟ್ಟಿರುವ ಸಾಮ್ರಾಜ್ಯಶಾಹಿಯ ಕಠೋರತೆ, ಕ್ರೂರತೆ ಮತ್ತು ಸಾವುಗಳನ್ನು ಬಟಾಬಯಲು ಮಾಡುವಲ್ಲಿ ಕಾದಂಬರಿಯು ಯಶಸ್ವಿಯಾಗುತ್ತದಾದರೂ, ಅದೇ ಸಾಮ್ರಾಜ್ಯಶಾಹಿಯನ್ನು ಎದುರಿಸಲು ಲೇಖಕರು ಬುಡಕಟ್ಟು ಜನಾಂಗ ನಂಬಿರುವ 'ಅಮ್ಮ'ನ ಮೋರೆ ಹೋಗುತ್ತದೆ. ಗೃಹ ಕೈಗಾರಿಕೆಗಳು, ಗುಡಿ ಕೈಗಾರಿಕೆಗಳು, ಮತ್ತು ಸಣ್ಣಕೈಗಾರಿಕೆಗಳು ಮತ್ತು ನಮ್ಮ ಕೃಷಿ ಎಲ್ಲವೂ ಕೂಡ ಜಾಗತೀಕರಣದ ಪೆಡಂಭೂತದ ಮುಂದೆ ಧೂಳಿಪಟವಾಗಿವೆ. ಅಂಥದೊಂದು ಬಲಾಢ್ಯ ಬಿರುಗಾಳಿಯನ್ನು ತಾನೊಂದು ಗಾಳಿಪಟದಿಂದ ನಿಯಂತ್ರಿಸುತ್ತೇನೆಂಬಂತಿದೆ ಲೇಖಕರ ನಂಬಿಕೆ. ಭೂಮಾಲೀಕ ಮತ್ತು ಬಂಡವಾಳಶಾಹಿ ಶಕ್ತಿಗಳ ಘೋರ ಧಾಳಿಯ ಮುಂದೆ ಜನಶಕ್ತಿಯನ್ನು ಸಂಪೂರ್ಣವಾಗಿ ನಗಣ್ಯಗೊಳಿಸಿ ಕೇವಲ ಸಂಪ್ರದಾಯ, ಧರ್ಮ, ಸಂಸ್ಕೃತಿಗಳ 'ತೆಳು ಎಳೆ'ಯನ್ನು ರಕ್ಷಾಕವಚದಂತೆ ಹೊದ್ದುಕೊಳ್ಳಲೆತ್ನಿಸುತ್ತಲೇ ಅದು ಆರಂಭದಿಂದಲೇ ಹರಿದುಹೋಗುತ್ತದೆ. ಅಂಧಶ್ರದ್ಧೆ ಮತ್ತು ಮೌಢ್ಯತೆಗಳ ತುಳಿತಕ್ಕೆ ಕಾದಂಬರಿಯ ತಂತ್ರ ಶರಣಾಗತವಾಗಿ ಕಥೆಯ ಆಂತರ್ಯ ನಲುಗುತ್ತದೆ. ಹೀಗೆ ಒಂದು ಅಸಾಧ್ಯಾದರ್ಶ ಶಿವಾಪುರವನ್ನು ಆದರ್ಶ ಯೋಗ್ಯ ಸಮಾಜವೆಂಬಂತೆ ಚಿತ್ರಿಸಲು ಯತ್ನಿಸಿ ಲೇಖಕರು ಇನ್ನಿಲ್ಲದಂಥ ಸೋಲನುಭವಿಸುತ್ತಾರೆ.

ಇವೆಲ್ಲ ಕಾರಣಗಳಿಂದಾಗಿಯೇ ಮನೋಜ್ಞ ಶೈಲಿ, ಬೆರಗುಗೊಳಿಸುವ ಕಥಾತಂತ್ರ, ಕುತೂಹಲಕಾರಿ ತಿರುವುಗಳು, ಬಾಯಿ ಚಪ್ಪರಿಸುವ ಜಾನಪದ ಸೊಗಡುಗಳು ಇವೆಲ್ಲ ಪಡಿಮೂಡಿದ್ದಾಗ್ಯೂ, ಉತ್ತಮ ಕೃತಿಯಾಗಲಿದ್ದ ಎಲ್ಲ ಅವಕಾಶಗಳನ್ನು ಕಾದಂಬರಿ ಕಳೆದುಕೊಳ್ಳುತ್ತದೆ. ಆದರೆ ಲೇಖಕರ ವಿಸ್ಮಯಗೊಳಿಸುವ ರೂಪಕಗಳ ಬಳಕೆ ಎಂಥವರನ್ನೂ ಚಕಿತಗೊಳಿಸುತ್ತದೆ. ಉದಾಹರಣೆಗೆ ಧಾನ್ಯದಿಂದ ಚಿನ್ನ ಮಾಡುವ ಮತ್ತು ಮೇವಿನಿಂದ ಸೈನ್ಯ ಮಾಡುವ ರೂಪಕ ಇಂದು ಆಹಾರ–ಧಾನ್ಯಗಳ ಬೇಸಾಯದಿಂದ ಪೆಟ್ರೋಲ್–ಪಡೆಯುವ ಬೇಸಾಯದೆಡೆಗೆ ನಮ್ಮನ್ನು ದೂಕುತ್ತಿರುವ ಮಾರುಕಟ್ಟೆ ಶಕ್ತಿಗಳತ್ತ ಬೊಟ್ಟು ಮಾಡುತ್ತದೆ. ಮೇವಿನ ಸೈನಿಕರನ್ನು ಯಂತ್ರಮಾನವನಂತಿರುವ ಇಂದಿನ ಪ್ರಜೆಗಳ ರಾಜಕೀಯ ಪ್ರಜ್ಞೆಗೆ ವ್ಯಂಗ್ಯವಾಗಿ ಬಳಸಿದ್ದಾರೆ.

ಎಲ್ಲ ಸಾಮ್ರಾಜ್ಯಗಳು ನಾಶಗೊಳ್ಳುವಂತೆ ಅಂತಿಮವಾಗಿ ವಿನಾಶ ಹೊಂದುವ ಕನಕಪುರಿಯ ಸ್ಥಿತಿ ಇಪ್ಪತ್ತನೇ ಶತಮಾನದ ಆದಿ ಭಾಗದಲ್ಲುಂಟಾದ 'ಮಹಾನ್ ಮಾರುಕಟ್ಟೆ ಕುಸಿತ'ದ ಅಲ್ಲೋಲಕಲ್ಲೋಲಗಳನ್ನು ತೆರೆದಿಡುತ್ತದೆ. ಅಂತೂ ಒಂದು ಅತ್ಯುತ್ತಮ ಜಾನಪದ ಸಾಹಿತ್ಯದ ಹೊಳೆಯಲ್ಲಿ ಮಿಂದು ಬಂದ ಅನುಭವಾಗುತ್ತದೆ.

ಅಂತಿಮವಾಗಿ ಏಂಗೆಲ್ಸ್‌ರ ಪ್ರಸಿದ್ಧ ಕೃತಿಗಳಲ್ಲೊಂದಾದ 'ಆಂಟಿ ಡ್ಯೂರಿಂಗ್' ನ ಮಾತುಗಳಲ್ಲೇ ಹೇಳುವುದಾದರೆ: ಸಾಮಾಜಿಕ ಶಕ್ತಿಗಳು ನೈಸರ್ಗಿಕ ಶಕ್ತಿಗಳಂತೆಯೇ ಕುರುಡಾಗಿ, ಬಲಯುತವಾಗಿ ಹಾಗೂ ವಿಮರ್ಶಾತ್ಮಕವಾಗಿ ಕೆಲಸ ಮಾಡುತ್ತವೆ. ನಾವು ಎಲ್ಲಿಯವರೆಗೆ ಅವನ್ನು ಅರ್ಥ ಮಾಡಿಕೊಳ್ಳುವುದಿಲ್ಲವೋ ಅವನ್ನು ಗಣನೆಗೆ ತೆಗೆದುಕೊಳ್ಳುವುದಿಲ್ಲವೋ ಅಲ್ಲಿಯವರೆಗೆ ಅವು ಹಾಗಿರುತ್ತವೆ. ಒಮ್ಮೆ ನಾವು ಅವನ್ನು ಅರ್ಥ ಮಾಡಿಕೊಂಡವೆಂದರೆ, ಅವುಗಳ ಕ್ರಿಯೆ, ಅವುಗಳ ದಿಶೆ, ಅವುಗಳ ಪರಿಣಾಮಗಳು ಇವುಗಳನ್ನು ಒಮ್ಮೆ ನಾವು ಗ್ರಹಿಸಿದೆವೆಂದರೆ, ಅವನ್ನು ಹೆಚ್ಚು ಹೆಚ್ಚಾಗಿ ನಮ್ಮ ಸಂಕಲ್ಪಕ್ಕೆ ಅಧೀನಗೊಳಿಸುವುದು ಮತ್ತು ಅವುಗಳ ಮೂಲಕ ನಮ್ಮ ಸ್ವಂತ ಗುರಿಗಳನ್ನು ಸಾಧಿಸಿಕೊಳ್ಳುವುದು, ನಮ್ಮ ಮೇಲೆಯೇ ಅವಲಂಬಿಸಿರುತ್ತದೆ.

ಲೇಖಕರ ಬರಹ ಜಾನಪದ ಸಾಹಿತ್ಯ ಶ್ರೀಮಂತಿಕೆಯಿಂದಾಗಿ ನಿಪುಣ ಕಲಾವಿದನೊಬ್ಬ ಕ್ಯಾನ್‌ವಾಸ್ ಮೇಲೆ ಪಡಿಮೂಡಿಸುವ ಚಿತ್ರಣದಂತಿದ್ದರೂ, ಕಥೆಗೆ ತಿರುವು ಕೊಟ್ಟು ಬೆಳೆಸುವ ಧಾವಂತದಿಂದಾಗಿ ಎಂಬಂತೆ ಕೃತಕತೆ ಪಡೆಕೊಂಡಿದೆ ಮತ್ತು ತರ್ಕಕ್ಕೆ ನಿಲುಕದಂತಿದೆ. ಇಂತಹ ಕಾದಂಬರಿಯೊಂದನ್ನು ಯಾವುದೇ ಮಾರ್ಪಾಟು ಮಾಡದೆ, ಬೃಹತ್ ಕಾದಂಬರಿಯ ಬಹುತೇಕ ಎಲ್ಲ ಕಥೆ ಮತ್ತು ತಿರುವುಗಳನ್ನು ತಥಾವತ್ತಾಗಿ ರಂಗರೂಪಕ್ಕೆ ತಂದಿರುವುದರಿಂದ ಇಡೀ ನಾಟಕ ಮೂರು ಘಂಟೆ ಆವರಿಸಿಕೊಂಡು, ಪ್ರವಾಹದಂತೆ ಬರುವ ಅದೇ ಕಥಾನಕ ತಿರುವುಗಳೇ ಗೊಂದಲ ಸೃಷ್ಟಿಸಿ ನೋಡುಗರಿಗೆ ಬೋರಿಡಿಸುತ್ತವೆ.

RNI No. KARKAN /2006/17926 Posted on every Saturday
Postal Reg. No. RNP/KA/BGS/2078/2010-12 Posted at MBC Bangalore GPO

ಶಿಖರ ಸೂರ್ಯ: ಕತ್ತಲಿನಲ್ಲಿ ಸಂಘರ್ಷ ನಡೆಸುವ ಕಂಬಾರರ ದಾರ್ಶನಿಕ ಸತ್ಯ



ಜ್ಞಾನಪೀಠ ಪುರಸ್ಕೃತ ಸಾಹಿತಿ ಡಾ॥ಚಂದ್ರಶೇಖರ ಕಂಬಾರರ ಶಿಖರಸೂರ್ಯ ಕಾದಂಬರಿ ನಾಟಕವಾಗಿಯೂ ವ್ಯಾಪಕವಾಗಿ ಪ್ರದರ್ಶನಗೊಳ್ಳುತ್ತಿದೆ. ಕೃತಿ ಹೇಳುವುದೇನು ?



ಇತ್ತೀಚೆಗೆ ಜ್ಞಾನಪೀಠ ಪುರಸ್ಕೃತ ಚಂದ್ರಶೇಖರ ಕಂಬಾರರ ಹಲವು ನಾಟಕಗಳನ್ನು-ಶಿಖರ ಸೂರ್ಯ, ಕರಿಮಾಯಿ, ಜೋಕುಮಾರಸ್ವಾಮಿ, ಇತ್ಯಾದಿ - ರವೀಂದ್ರ ಕಲಾಕ್ಷೇತ್ರದಲ್ಲಿ ಪ್ರದರ್ಶಿಸಲಾಯಿತು. ಇದರಲ್ಲಿ 2006ರಲ್ಲಿ ಹೊರಬಂದಿರುವ ಕಂಬಾರರ 'ಶಿಖರ ಸೂರ್ಯ' ಎಂಬ ಬೃಹತ್ ಕಾದಂಬರಿಯನ್ನು ರಂಗರೂಪಕ್ಕೆ ತರಲಾಗಿತ್ತು. ರಂಗಾಯಣ ನಿರ್ದೇಶಕ ಡಾ: ಬಿ.ವಿ ರಾಜಾರಾಂ ಇದರ ರಂಗ ನಿರ್ದೇಶನ ಮಾಡಿದ್ದಾರೆ.

ಜನರ ಸೃಷ್ಟಿ

ವಿಶ್ವ ದಾರ್ಶನಿಕ ಬರಹಗಾರರಾದ ಮ್ಯಾಕ್ಸಿಂಗಾರ್ಕಿಯವರು ಸಾಹಿತ್ಯ ಕುರಿತಂತೆ ಒಂದೆಡೆ ಹೀಗೆ ಹೇಳುತ್ತಾರೆ: "ಪ್ರತಿಯೊಂದು ಜನಪದ ಅಥವಾ ವಿಶ್ವ ಸಾಹಿತ್ಯದ ಮೂಲಕಥೆಯನ್ನು ಲೇಖಕರು ಬರೆಯುವ ಮೊದಲೇ ಅವು ಜನಪದ ಹಾಡುಗಳು ಮತ್ತು ಸಂಸ್ಕೃತಿಯಲ್ಲಿ ಅಸ್ತಿತ್ವದಲ್ಲಿರುತ್ತವೆ. ಬೇರೊಂದು ಪದಗಳಲ್ಲಿ ಹೇಳುವುದಾದಲ್ಲಿ, ಕಲೆ ಅಥವಾ ಸಾಹಿತ್ಯದ ಅತ್ಯುತ್ತಮ ಸೃಷ್ಟಿಗಳೆಲ್ಲವು ಜನರಿಂದ ಮೊದಲು ಸೃಷ್ಟಿಯಾಗುತ್ತವೆ. ಆದರೆ, ಅವು ಕಲಾತ್ಮಕತೆಯ ಶ್ರೇಷ್ಟತೆಯನ್ನು ಪಡೆದು ಉತ್ತುಂಗದಲ್ಲಿರುವುದಿಲ್ಲ. ವರ್ಗ ಸಮಾಜವೊಂದರಲ್ಲಿ ಪ್ರಾಬಲ್ಯಪಡೆದ ವರ್ಗಕ್ಕೆ ಸೇರಿದ ಪ್ರತಿಭಾನ್ವಿತರಿಂದ ಅವುಗಳು ಶ್ರೇಷ್ಟತೆಯ ಔನ್ನತ್ಯವನ್ನು ಪಡಕೊಳ್ಳುತ್ತವೆ. ಜನರಲ್ಲಿ ಒರಟು ಕಲ್ಲಿನಂತಿರುವ ಈ ಕಲೆಗಳನ್ನು ಸುಂದರ ವಜ್ರಗಳನ್ನು ರೂಪಿಸುವ ಕರಕುಶಲಕರ್ಮಿಗಳಂತೆ ಇವುಗಳನ್ನು ಸೃಜಿಸಲಾಗುತ್ತದೆ."

ಹೀಗೆ ಗಾರ್ಕಿಯವರು ಹೇಳಿರುವಂತೆ ಕಲಾತ್ಮಕ ಕೃತಿಯೊಂದನ್ನು ಸೃಜಿಸುವಾಗ ಲೇಖಕ ಆ ಕೃತಿಯಲ್ಲಿ ಮೂಡಿಬರುತ್ತಿರುವ ಸಾಮಾಜಿಕ, ಆರ್ಥಿಕ ಮತ್ತು ರಾಜಕೀಯ ಪರಿಸ್ಥಿತಿಗಳ ಗತಿತಾರ್ಕಿಕತೆಯ ಮೂಲಕವೇ ಕಥೆಗೆ ಚಲನಶೀಲತೆಯನ್ನು ನೀಡದೆ ಪ್ರಜ್ಞಾಪೂರ್ವಕವಾಗಿ ಕೃತಿಕರ್ತೃವು ನಂಬಿರುವ ಮೌಲ್ಯದೆಡೆಗೆ ವಾಲಿದಲ್ಲಿ ಕೃತಿಯ ಸ್ವತಂತ್ರತೆ ಮತ್ತು ಸೃಜನಶೀಲತೆಗೆ ಪೆಟ್ಟುಬೀಳುತ್ತದೆ. ಗಾರ್ಕಿಯವರ ಮಾತುಗಳ ಪ್ರಖರ ಬೆಳಕಿನಲ್ಲಿ 'ಕಂಬಾರರ 'ಶಿಖರ ಸೂರ್ಯ'ನನ್ನು ಒರೆಗೆ ಹಚ್ಚಿದಾಗ; ಇದು ಕತ್ತಲಿನಲ್ಲಿ ಕಾಣದ ಶತ್ರುಗಳ ವಿರುದ್ಧ ಸಂಪ್ರದಾಯಶರಣನೊಬ್ಬ ಸಂಘರ್ಷ ನಡೆಸುವ ಕಥೆಯಂತೆ ಕಾಣುತ್ತದೆ.

ಸೂಪರ್ ಖಳನಾಯಕ ಶಿಖರ ಸೂರ್ಯ

ಕಂಬಾರರ ಕಾದಂಬರಿಯಲ್ಲಿ 'ಶಿಖರ ಸೂರ್ಯ' ಕಥಾನಾಯಕನಾದರೂ ತಾತ್ವಿಕವಾಗಿ ಅವನೊಬ್ಬ ವಿಶ್ವದ ಶತ್ರು. ಛಲಬಿಡದ ತ್ರಿವಿಕ್ರಮನಂತೆ ಸಾಮ್ರಾಜ್ಯದ ಗದ್ದುಗೆ ಏರಲು ಹರಸಾಹಸ ಮಾಡುವ, ವಿದ್ಯೆ ಕಲಿತು ಅಧಿಕಾರ ಹಿಡಿಯುವ ಕ್ರೂರ ನಾಯಕ ಶಿಖರ ಸೂರ್ಯ. ಇಡೀ ಜಗತ್ತು ದೈವಿಕ ನಿಯಮದಂತೆ ನಡೆಯುತ್ತಿದ್ದು ಸರಳ ಜೀವನದೊಂದಿಗೆ ಧರ್ಮ, ಪೂಜೆ, ಸಂಪ್ರದಾಯಗಳನ್ನು ಪಾಲಿಸಿಕೊಂಡು ಹೋಗುತ್ತಿರುವ, ಇದರಿಂದಾಗಿಯೇ ಅತಿ ಮಾನವ ಶಕ್ತಿಗಳನ್ನು ಹೊಂದಿರುವ ಶಿವಾಪುರಿ ಒಂದೆಡೆಯಾದರೆ, ಜಗತ್ತಿನ ನಿಯಾಮಕಗಳು ಯಾರ ಹಂಗಿನಲ್ಲೂ ಇಲ್ಲದೆ, ವಿದ್ಯೆಯಿಂದ ಸಂಪತ್ತು ಗಳಿಸಿ, ಸಂಪತ್ತಿನಿಂದ ಅಧಿಕಾರ ಗಳಿಸಿ ಇಡೀ ವಿಶ್ವವನ್ನು ತನ್ನ ಹಿಡಿತದಲ್ಲಿಟ್ಟುಕೊಳ್ಳಬಯಸುವ ಕನಕಪುರಿ ಇನ್ನೊಂದೆಡೆಯಿದೆ. ಇವೆರಡೂ ದಾರ್ಶನಿಕ ಮತ್ತು ತಾತ್ವಿಕ ವಿಚಾರಗಳ ನಡುವೆ ನಡೆಯುವ ಘರ್ಷಣೆ ಮತ್ತು ಪರಿಣಾಮಗಳ ಸುದೀರ್ಘ ಕಥಾನಕವೇ ಕಾದಂಬರಿಯ ಹೂರಣ.

ಕಾದಂಬರಿಯ ಪಾತ್ರಗಳು ಹರಿದಾಡುವ ಎಲ್ಲೆ ಸೀಮೆಗಳು, ಭೌಗೋಳಿಕ ವಲಯಗಳೆಂದರೆ ಶಿವಾಪುರಿ, ಕನಕಪುರಿ, ಬಿಳಿಗಿರಿ ಮತ್ತು ಕಂಚಿ ಪ್ರದೇಶಗಳು. ಕನಕಪುರಿ 55 ರಾಜ್ಯಗಳ ಸಾಮ್ರಾಜ್ಯ. ಅದು ಯುದ್ಧ ಶಸ್ತ್ರಾಸ್ತ್ರಗಳು, ಮದ್ದುಗುಂಡುಗಳ ಕೈಗಾರಿಕೆಗಳಿಂದ ನಡೆಯುತ್ತಿರುವ ಆರ್ಥಿಕ ವ್ಯವಸ್ಥೆ. ಕನಕಪುರಿಯ ಯುದ್ಧ, ಬೇಟೆ ಮತ್ತು ಸ್ತ್ರೀಕಾರಣವಾದ ಸಂತೋಷಗಳು ಇದಕ್ಕೆ ವ್ಯತಿರಿಕ್ತವಿರುವ ಶಿವಾಪುರದ ತೃಪ್ತಿಯ ಮುಂದೆ ಸೀಮಿತ ಮತ್ತು ಕೃತಕ. ಶಿವಾಪುರ ಕೇವಲ ಒಂದು ಬುಡಕಟ್ಟಿನ ಹದಿನಾಲ್ಕು ಹಟ್ಟಿಗಳಿರುವ ಸ್ಥಳ. ಯುದ್ಧಗಳು, ಸ್ಪರ್ಧೆಗಳು, ಶೋಧನೆಗಳು, ಸಾಹಸಗಳು, ಅಧಿಕಾರದ ದಾಹಗಳೇ ಕನಕಪುರಿಯ ದೃಷ್ಟಿಯಲ್ಲಿ ಪ್ರಗತಿ. ದೇವರು, ಸ್ವರ್ಗ, ನರಕ ಯಾವುದರಲ್ಲೂ ನಂಬುಗೆಯಿಲ್ಲದವರು. ಚಿನ್ನವೊಂದನ್ನು ಬಿಟ್ಟರೆ ಸದ್ಗುಣ, ಗೌರವ, ಆತ್ಮಗೌರವ, ಪರಮಾತ್ಮ ಇವೆಲ್ಲ ಸೆಗಣಿ. ಇದು ಪಿತೃಸಂಸ್ಕೃತಿ. ಇದಕ್ಕೆ ತದ್ವಿರುದ್ಧವಾಗಿ ಶಿವಾಪುರ ತನ್ನ ಸಂಸ್ಕೃತಿ, ಮೌಲ್ಯ, ಶಾಂತಿ ಎಲ್ಲವನ್ನೂ ಜೋಪಾನ ಮಾಡುತ್ತದೆ. ಈ ಜನ ತಮ್ಮ ದೇವರಿಗಾಗಿ, ಕುಲಕುಟುಂಬಕ್ಕಾಗಿ ಬದುಕುವವರು. ಇಲ್ಲಿ ಇಡೀ ಜಗತ್ತಿನ ಸಕಲ ಚಲನೆಗೂ ಶಿವಾಪುರದ ಅಮ್ಮನೇ ಮೂಲ ಆಧಾರ. ಇದು ಮಾತೃಸಂಸ್ಕೃತಿ.

ಕಲ್ಪನಾ ಲಹರಿ

ಕಾದಂಬರಿಯ ಪಾತ್ರಗಳಿಗೆ ಸೂಪರ್ ಹೀರೋ ಸೃಷ್ಟಿಯನ್ನು ನೀಡಲಾಗಿದೆ. ಅವರ ಕಲ್ಪನಾಲಹರಿಯಲ್ಲಿ ಅಮ್ಮನ ಕೃಪಾಶಕ್ತಿ, ಮದ್ದಿನಶಕ್ತಿ, ಗಿಡಮೂಲಿಕೆಗಳಿಂದ ಅಥವಾ ಮಂತ್ರಶಕ್ತಿಯಿಂದಾಗಿ ಅವರು ಏನು ಬೇಕಾದರೂ ಮಾಡಬಲ್ಲರು. ಮುರಿದ ಕಾಲನ್ನು ತಕ್ಷಣವೇ ಜೋಡಿಸಬಲ್ಲರು, ಕುರುಡರಿಗೆ ಕಣ್ಣು ಬರಿಸಬಲ್ಲರು, ಭಯಾನಕ ಕಾಡುಗಳು ಆಕರ್ಷಕ ಉದ್ಯಾನವನಗಳಾಗಬಲ್ಲವು, ಶಕ್ತಿಹೀನರು ಮಾಯಾಲೋಕದಲ್ಲಿಯಂತೆ ಬಲಾಢ್ಯರಾಗಬಲ್ಲರು, ದೊರೆಗಳು ತಮ್ಮ ಅಸಹಾಯಕತೆ ಮತ್ತು ದುರಾದೃಷ್ಟದಿಂದಾಗಿ ಬೀದಿಗೆ ತಳ್ಳಲ್ಪಡುವವರು, ಸಾಮಾನ್ಯರು ಅಸಾಮಾನ್ಯರಾಗಬಲ್ಲರು. ಇನ್ನೂ ಮುಂದೆ ಹೋಗಿ ಮನುಷ್ಯರು ಅತಿ ಭಯಂಕರ ರಣ ಹದ್ದುಗಳಾಗುತ್ತಾರೆ, ಸ್ತ್ರೀ ಪಾತ್ರಗಳು ಕೆಲವೊಮ್ಮೆ ದುರ್ಬಲಗೊಂಡಂತೆ ಕಂಡರೂ ರೌದ್ರಾವತಾರದ ಉತ್ತುಂಗಕ್ಕೇರುತ್ತಾರೆ. ಕಥೆಯ ಹರವು ಒಮ್ಮೆ ಪಾಳೇಗಾರರ ಕಾದಾಟಗಳಂತೆಯೂ, ಮತ್ತೊಮ್ಮೆ ಸಾಮ್ರಾಜ್ಯಶಾಹಿಯ ಆಕ್ರಮಣದಂತೆಯೂ, ಮಗದೊಮ್ಮೆ ಪ್ರೇಮ ಕಥಾನಕ, ದುರಂತಮಯ ತಿರುವುಗಳನ್ನು ಪಡಕೊಂಡು ಏರಿಳಿತಗಳನ್ನು ಕಂಡು ಓದುಗರನ್ನು ಹಿಡಿದಿಡುತ್ತದೆ.

ಸಾಮ್ರಾಜ್ಯಶಾಹಿಯ ಚಿತ್ರಣದ ರೂಪಕಗಳು:

ಅತ್ತ ಕಾದಂಬರಿಯೊಳಗೆ ಕಾದಾಟಗಳು, ಯುದ್ಧಗಳು ಮತ್ತು ಸಂಘರ್ಷಗಳು ನಡೆಯುತ್ತಿರುವಾಗಲೇ, ಇತ್ತ ಅಮೇರಿಕಾದ ಸಾಮ್ರಾಜ್ಯಶಾಹಿಯು ವಿಶ್ವದ ಮೇಲೆ ತನ್ನ ಯಜಮಾನಿಕೆ ಸ್ಥಾಪಿಸಿ, 'ಕೊಳ್ಳುಬಾಕತನ' ಸಂಸ್ಕೃತಿ, ಆರ್ಥಿಕ ದಬ್ಬಾಳಿಕೆ ಮತ್ತು ಮಿಲಿಟರಿ ಪಾರುಪತ್ಯಗಳ ಮೂಲಕ ವಿಶ್ವದ ಸಂಪತ್ತನ್ನೆಲ್ಲ ಕೊಳ್ಳೆ ಹೊಡೆಯುತ್ತಿರುವ ಚಿತ್ರಣಗಳು ಕಣ್ಣೆದುರಿಗೆ ಗೋಚರಿಸಿದಂತಾಗುತ್ತದೆ. ಶ್ರೀಮಂತ ಮತ್ತು ಬಡ ರಾಷ್ಟ್ರಗಳ ನಡುವಿನ ಸಂಘರ್ಷಗಳು, ಶ್ರೀಮಂತ ಸಾಮ್ರಾಜ್ಯದೊಳಗಿನ ಸಾಮಾನ್ಯರ ನತದೃಷ್ಟತನ ಇವೆಲ್ಲವನ್ನೂ ತೆರೆದಿಡುತ್ತದೆ. ಕನಕಪುರಿಯ ವರ್ತಕರೇ ಇಂದಿನ ಬಹುರಾಷ್ಟ್ರೀಯ ಕಂಪನಿಗಳು. ಅಲ್ಲಿಯ ಬೇಹುಗಾರರೇ ಇಂದಿನ ಸಿಐಎ ಏಜೆಂಟರು. ಶಿಖರ ಸೂರ್ಯನ ಸೇನೆಯೇ ಇವತ್ತಿನ ನ್ಯಾಟೋ ಮತ್ತು ಇಸ್ರೇಲಿನ ಕೊಲೆಗಡುಕ 'ಮೊಸಾದ್' ಬೇಹುಪಡೆಗಳಂತೆ ಗೋಚರಿಸುವುದರಲ್ಲಿ ಆಶ್ಚರ್ಯವೇನಿಲ್ಲ. ಈ ಕಾದಂಬರಿಯ ಕಾಲವನ್ನು ಹಿಂದಿನ ಯಾವುದಾದರೂ ಕಾಲಮಾನದಲ್ಲಿ ನಡೆದದ್ದೆಂದು ಭಾವಿಸಬೇಕೆಂದು ಲೇಖಕರು ಹೇಳುತ್ತಾರಾದರೂ, ಕಾದಂಬರಿಯ ಪಾತ್ರಗಳು ಅನುಭವಿಸುವ ಯಾತನೆ, ತಲ್ಲಣಗಳು ಮತ್ತು ಕಥಾಹಂದರ ಸಮಕಾಲೀನ ಘಟನಾವಳಿಗಳ, ಮನುಷ್ಯನ ದಾಹ, ದು:ಖ ದುಮ್ಮಾನ ಮತ್ತು ಹಿಂಸೆಗಳನ್ನು ಅನುರಣನಗೊಳಿಸುತ್ತದೆ. ಇಂಥಹ ಸಮಕಾಲೀನ ಸಂಕೀರ್ಣ ಪ್ರಶ್ನೆಗಳನ್ನು ತನ್ನೊಳಗೆ ಹುದುಗಿಸಿಕೊಂಡು ಜಾನಪದ

JANASHAKTHI KANNADA VARA PATRIKE: Printed by G.N.NAGARAJ, No 12. 18th Cross, S.R.Nagar, BANGALORE-560027 Published by: G.N.NAGARAJ, No 12. 18th Cross, S.R.Nagar, BANGALORE-560027, Karnataka on behalf of / owned by COMMUNIST PARTY OF INDIA (MARXIST) and Printed at: Kriya Prakashana, 12, 18th Cross, S.R.Nagar, BANGALORE - 560 027 Karnataka (State) and Published at BANGALORE No- 12.18th Cross, S.R.Nagar, BANGALORE-560027 Editor S.Y.GURURSHANTH, No12. 18th Cross, S.R.Nagar, BANGALORE - 560027
Editor: S.Y.GURUSHANTH